ವಿಷಯ :

"ಕೆ. ಎಸ್. ನಾಗರತ್ನಮ್ಮ ಅವರ ಚಿಂತನೆ ಹಾಗೂ ಹೋರಾಟದ ನೆಲೆಗಳು"

(ಚರಿತ್ರೆ ಎಂ.ಫಿಲ್., ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಶೋಧನಾ ನಿಬಂಧ)

ಸಂಶೋಧಕರು

ಮಹೇಶ ಎಂ.ಎ.,

ಕರ್ನಾಟಕ ಸಂಘ ರಿ.,

ಎಂ. ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ,

ಮಂಡ್ಯ.

ಮಾರ್ಗದರ್ಶಕರು

ಡಾ. ಹೆಚ್. ಎ. ಗಂಗಮ್ಮ ಎಂ.ಎ. ಪಿಎಚ್.ಡಿ.,

ಸಹಾಯಕ ಪ್ರಾಧ್ಯಾಪಕರು

ಇತಿಹಾಸ ಅಧ್ಯಯನ ವಿಭಾಗ

ಮಾನಸಗಂಗೋತ್ರಿ, ಮೈಸೂರು.

ಕರ್ನಾಟಕ ಸಂಘ ರಿ.,

ಎಂ. ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ

ಮಂಡ್ಯ.

(ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಮಾನ್ಯತೆ ಪಡೆದಿದೆ.)

2011-12

ವಿಷಯ :

"ಕೆ. ಎಸ್. ನಾಗರತ್ನಮ್ಮ ಅವರ ಚಿಂತನೆ ಹಾಗೂ ಹೋರಾಟದ ನೆಲೆಗಳು"

(ಚರಿತ್ರೆ ಎಂ.ಫಿಲ್., ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಸಂಶೋಧನಾ ನಿಬಂಧ)

ಸಂಶೋಧಕರು

ಮಹೇಶ ಎಂ.ಎ.,

ಕರ್ನಾಟಕ ಸಂಘ ರಿ.,

ಎಂ. ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ ಮಂಡ್ಯ.

ಮಾರ್ಗದರ್ಶಕರು

ಡಾ. ಹೆಚ್. ಎ. ಗಂಗಮ್ಮ ಎಂ. ಎ. ಪಿಎಚ್.ಡಿ.,

ಸಹಾಯಕ ಪ್ರಾಧ್ಯಾಪಕರು

ಇತಿಹಾಸ ಅಧ್ಯಯನ ವಿಭಾಗ

ಮಾನಸಗಂಗೋತ್ರಿ, ಮೈಸೂರು.

ಕರ್ನಾಟಕ ಸಂಘ ರಿ.,

ಎಂ. ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ

ಮಂಡ್ಯ.

ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಮಾನ್ಯತೆ ಪಡೆದಿದೆ.

2011-12

ಸಂಶೋಧಕನ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರದಲ್ಲಿ 2011 - 12 ನೇ ಸಾಲಿಗೆ ಚರಿತ್ರೆ ಎಂ.ಫಿಲ್. ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು " *ಕೆ.ಎಸ್.ನಾಗರತ್ನಮ್ಮ ಅವರ ಚಿಂತನೆ ಹಾಗೂ ಹೋರಾಟದ ನೆಲೆಗಳು* " ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ. ಹೆಚ್.ಎ. ಗಂಗಮ್ಮ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಂಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದಲ್ಲಿರುವ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತ ಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವ ವಿದ್ಯಾಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತೇನೆ.

ನೋಂದಣಿ ಸಂಖ್ಯೆ-
KRSMH-00561

Mahesha

ಮಹೇಶ ಎಂ.ಎ.,
ಸಂಶೋಧಕ, ಚರಿತ್ರೆ ವಿಭಾಗ,
ಕರ್ನಾಟಕ ಸಂಘ (ರಿ.)
ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ, ಮಂಡ್ಯ,
(ಕನ್ನಡ ವಿ.ವಿ. ಹಂಪಿಯಿಂದ ಮಾನ್ಯತೆ ಪಡೆದಿದೆ)

ದಿನಾಂಕ: 29-06-2012

ಸ್ಥಳ : ಮಂಡ್ಯ

981

ಮಾರ್ಗದರ್ಶಕರ ಪ್ರಮಾಣ ಪತ್ರ

" *ಕೆ.ಎಸ್.ನಾಗರತ್ನಮ್ಮ ಅವರ ಚಿಂತನೆ ಹಾಗೂ ಹೋರಾಟದ ನೆಲೆಗಳು*" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಶ್ರೀ ಮಹೇಶ ರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

Dr // Gangamma H.A.
Asst Professor.

ಡಾ. ಎಚ್. ಎ. ಗಂಗಮ್ಮ ಎಂ.ಎ., ಪಿ.ಹೆಚ್.ಡಿ.,
ಇತಿಹಾಸ ಅಧ್ಯಯನ ವಿಭಾಗ,
ಮಾನಸ ಗಂಗೋತ್ರಿ,
ಮೈಸೂರು -06
DEPARTMENT OF POST-GRADUATE
STUDIES AND RESEARCH IN HISTORY
UNIVERSITY OF MYSORE,
Manasagangotri, MYSORE-570 006.

ದಿನಾಂಕ: 29-06-2012

ಸ್ಥಳ: ಮಂಡ್ಯ.

ವಿಷಯ ಕ್ರಮ

ಅಧ್ಯಾಯ - ೧

ಪೀಠಿಕೆ

ಅಧ್ಯಾಯ - 1

ಪೀಠಿಕೆ

ಕನ್ನಡನಾಡು ಅನೇಕ ಸಾಧುಸತ್ಪುರುಷ ಸಮಾಜಸುಧಾರಕರ ನೆಲೆವೀಡು. ಈ ನಾಡಿನಲ್ಲಿ ನೆಲಕ್ಕಾಗಿ, ಕುಲಕ್ಕಾಗಿ, ಛಲಕ್ಕಾಗಿ ಹೋರಾಡಿ ಗತಿಸಿಹೋದ ಅನೇಕ ಚಕ್ರವರ್ತಿಗಳನ್ನು ನಾವು ಮರೆತರೂ ಸಮಾಜದ ಏಳ್ಗೆಗಾಗಿ ಶ್ರಮಿಸಿದ ಉಪಮಾತೀತರನ್ನು ನಾವು ಎಂದೆಂದಿಗೂ ಮರೆಯುವಂತಿಲ್ಲ. ಅವರು ನಡೆದ ಹಾದಿ, ತೋರಿದ ಮಾರ್ಗ, ಇಟ್ಟ ಹೆಜ್ಜೆ ಇವು ಎಲ್ಲರಿಗೂ ಬೆಳಕು ನೀಡುವ ದಾರಿದೀಪ. ಇವರು ಕೈಗೊಂಡ ಕಾರ್ಯಗಳಿಗೆ ಮಿತಿ ಇಲ್ಲ. ಸಾಗರ ವಿಸ್ತೀರ್ಣವನ್ನು, ಆಕಾಶದ ಔನ್ನತ್ಯವನ್ನು ಹೇಗೆ ಅಳೆಯಲು ಸಾಧ್ಯವಿಲ್ಲವೋ ಹಾಗೆಯೇ ಈ ಸುಧಾರಕರು ಕೈಗೊಂಡ ದಾನಧರ್ಮ ಕಾರ್ಯಗಳನ್ನು ಎಣಿಸಲು ಆಗದಿರಬಹುದು. ಸಾಗರಕ್ಕೆ ಸಾಗರ, ಗಗನಕ್ಕೆ ಗಗನ ಸಾಟಿಯಾದಂತೆ ಸುಧಾರಕರಿಗೆ ಸುಧಾರಕರೇ ಸಾಟಿ. ಪ್ರತಿಫಲವನ್ನು ಅಪೇಕ್ಷಿಸದೆ ಸಮಾಜಸೇವೆ ಮಾಡಿರುವ ಇವರನ್ನು ಮಹಾಪುರುಷರೆಂದು ವರ್ಣಿಸಿದರೆ ತಪ್ಪಾಗುವುದಿಲ್ಲ. ಈ ಮಹಾಪುರುಷರು ತಮ್ಮ ಸುತ್ತಲಿನ ಜನರ ಜೀವನ ಉತ್ತಮವಾಗಲೆಂದು ಬಯಸಿ ಅವರಿಗಾಗಿ ತಮ್ಮ ಸಮಸ್ತವನ್ನೂ ಧಾರೆ ಎರೆದು ಅವರ ನಲಿವಿನಲ್ಲಿ ತಮ್ಮ ನಲಿವನ್ನು ಕಂಡ ಕರುಣಾಮೂರ್ತಿಗಳಿವರು. "ನಾನೊಬ್ಬ ಬದುಕಿದರೆ ಸಾಕು ಜಗವಳಲಿ ನನಗೇನು?" ಎಂಬ ಮನೋಭಾವ ಇವರದಲ್ಲ.[1] ಬಡವರಿಗೆ ಆಧಾರವಾಗಿ ಅಲ್ಲೊಂದು ಇಲ್ಲೊಂದು ಚೇತನಗಳು ಕಾಣಿಸಿರುವುದು ಮರಳುಗಾಡಿನಲ್ಲಿ ನೀರು ದೊರೆತಂತೆ. ಇವರು ಕುರುಡನಿಗೆ ಕಣ್ಣು ಬಂದಂತೆ ಉದಿಸಿ ಸಮಾಜಕ್ಕೆ ತಮ್ಮ ದುಡಿತದ ಜೀವನವನ್ನು ಬಡಜನರಿಗಾಗಿ ಸಹಕರಿಸಿದ್ದಾರೆ. ವಿಶಾಲ ಮನೋಭಾವದ ಉದಾತ್ತ ವ್ಯಕ್ತಿತ್ವದ ಇವರು ಎಂದೆಂದಿಗೂ ಇಂದಿಂಗೆಂತು ನಾಳಿಂಗೆಂತೆಂದು ಯೋಚಿಸದೆ ಜಗದ ನಲಿವಿನಲ್ಲಿ ತಮ್ಮ ನಲಿವನ್ನು ಕಂಡು ಜಗದ ಚಿಂತೆ ನಮಗಿರಲೆಂದು ಬಯಸಿ ತಮ್ಮ ಚಿಂತೆ ಮರೆತು ಬಡವರ ಬಗ್ಗೆ ಚಿಂತೆ ಮಾಡುತ್ತಾ ಮಾಡಿದನೆಂಬುದ ಮನದಲ್ಲಿ ನೆನೆಯದೆ ಇಂತಹ ಚೇತನ ಕೀರ್ತಿ ನೆನಪಿನಂಗಳದಲ್ಲಿ ಸದಾ ಮಿನುಗುತ್ತದೆ.

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕಬ್ಬಹಳ್ಳಿ ಎಂಬ ಗ್ರಾಮವೊಂದಿದೆ. ಈ ಗ್ರಾಮವು ಹಿಂದೆ ಮೈಸೂರು ಜಿಲ್ಲೆಯಲ್ಲಿತ್ತು. ಕಬ್ಬಹಳ್ಳಿ ಗ್ರಾಮವನ್ನು ಚಿಕ್ಕದೇವರಾಜಪುರ ಎಂತಲೂ, ಕಬ್ಬಿಗರಹಳ್ಳಿ ಎಂತಲೂ ಕರೆಯುತ್ತಿದ್ದರಂತೆ. ಈ ಊರು ಅನೇಕ ದಾನಿಗಳ ನೆಲೆವೀಡು. ಕಬ್ಬಿಗರಹಳ್ಳಿ ಎಂದು ಖ್ಯಾತಿ ಪಡೆದಿರುವ ಈ ಊರಿನಲ್ಲಿ ಗಗನಚುಂಬಿ ಕಟ್ಟಡಗಳಿಲ್ಲ. ಸಮೀಪದಲ್ಲಿ ಹಸಿರು ವನರಾಶಿಗಳಲ್ಲಿ ಸದಾ ಭೋರ್ಗರೆದು ಹರಿಯುವ ಜಲಪಾತಗಳಿಲ್ಲ. ಎತ್ತ ನೋಡಿದರೂ ನಾಡಹೆಂಚಿನ ಮನೆಗಳಿಂದ ಕೂಡಿದ ಊರು ಇದಾಗಿದೆ. ಈ ಊರಿನಿಂದ ಸುಮಾರು 15 ಕಿ.ಮೀ.ದೂರದಲ್ಲಿ ಗುಂಡ್ಲುಪೇಟೆ ಪಟ್ಟಣವಿದೆ. ದಕ್ಷಿಣದಲ್ಲಿ ತೆರಕಣಾಂಬಿ ಹೋಬಳಿ ಕೇಂದ್ರವಾಗಿದೆ. ಪಶ್ಚಿಮದಲ್ಲಿ ಬೇಗೂರು ಹೋಬಳಿ ಕೇಂದ್ರ. ಈ ಹೋಬಳಿ ಕೇಂದ್ರಗಳಿಗೆ ಈ ಆಧುನಿಕ ಯುಗದಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆ ಇದ್ದರೂ ಅಷ್ಟೊಂದು ತೃಪ್ತಿಕರವಾಗಿಲ್ಲ. ಕಬ್ಬಿಗರಹಳ್ಳಿ ಎಂದು ಪ್ರಸಿದ್ಧಿ ಪಡೆದಿದ್ದರೂ ಇಲ್ಲಿ ಯಾವ ಕವಿಗಳೂ ಇದ್ದಂತೆ ಕಂಡುಬರುತ್ತಿಲ್ಲ. ಈ ಊರಿನ ಜನ ಶಾಂತಿಪ್ರಿಯರೂ, ಸರಳ ಮನೋಭಾವದಿಂದ ಸಹಬಾಳ್ವೆ ಮಾಡುವ

ಜನರೇ ತುಂಬಿರುವ ಊರು ಇದಾಗಿದೆ. ಸದಾ ಕಾಯಕ ಜೀವಿಗಳಿಂದ ತುಂಬಿರುವ ಈ ಠಾಣದಲ್ಲಿ ಜನರ ದುಡಿತದ ಫಲವಾಗಿ ಎಲ್ಲರೂ ಹರಿದು ಹಂಚಿ ಉಣ್ಣುವ ಮನೋಭಾವ ಬೆಳೆಸಿಕೊಂಡಿದ್ದಾರೆ. ಇಂತಹ ಗ್ರಾಮದಲ್ಲಿ ಅಪಾರ ಐಶ್ವರ್ಯ ಹೊಂದಿದ ಅನೇಕ ಮನೆತನಗಳಿದ್ದವು. ಅಂತಹ ಮನೆತನಗಳಲ್ಲಿ ಶರಣ ಸಿದ್ಧಲಿಂಗಪ್ಪ ಮತ್ತು ಶರಣೆ ಸುಬ್ಬಮ್ಮನವರ ಕುಟುಂಬವೂ ಒಂದು.

ಸಮಾಜದಲ್ಲಿರುವ ಮಾನವರನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು. ಮೊದಲನೆ ವರ್ಗದವರು ಹೃದಯಹೀನರು. ಎರಡನೆ ವರ್ಗದವರು ಹೃದಯ ಶ್ರೀಮಂತಿಕೆಯುಳ್ಳವರು. ನೆಪೋಲಿಯನ್, ಅಲೆಗ್ಸಾಂಡರ್, ಹಿಟ್ಲರ್ ಇವರೆಲ್ಲರೂ ಇತಿಹಾಸದ ಪುಟಗಳಲ್ಲಿ ನೆಲೆಸಿದ್ದಾರೆ. ಸಾಮ್ರಾಜ್ಯ ಕಟ್ಟುವ ಆಶೆಯಿಂದ ಯುದ್ಧ ಮಾಡಿ ಸಾವುನೋವುಗಳಿಗೆ ಕಾರಣರಾಗಿ ಮಾನವನ ಹೃದಯದಿಂದ ದೂರವಾಗಿದ್ದಾರೆ. ಇವರನ್ನು ಮೊದಲನೆ ವರ್ಗಕ್ಕೆ ಸೇರಿಸಬಹುದು. ಮಲೆಯ ಮಹದೇಶ್ವರರು, ಕೊಂಗಳ್ಳಿ ಮಲ್ಲೇಶ್ವರರು, ಎಡೆಯೂರು ಸಿದ್ಧಲಿಂಗೇಶ್ವರರು, ಬಸವಣ್ಣ, ಬುದ್ಧ, ಮಹಾವೀರ, ಗಾಂಧೀ, ಅಂಬೇಡ್ಕರ್ ಇವರು ಹೃದಯಶ್ರೀಮಂತಿಕೆಯಿಂದ ಕೂಡಿದ್ದು ಬಡವರ, ದೀನದಲಿತರ ಉದ್ಧಾರಕ್ಕಾಗಿ ಶ್ರಮಿಸಿದವುರ. ಜನಸಾಮಾನ್ಯರ ಹಿತದಲ್ಲಿ ತಮ್ಮ ಸುಖವನ್ನು ಕಂಡುಕೊಂಡು ಸಮಾಜದ ಪ್ರಗತಿಗಾಗಿ, ಹಗಲಿರುಳು ದುಡಿದು ಜನತೆಯ ಹೃದಯದಲ್ಲಿ ಸರ್ವಕಾಲವೂ ವಿರಾಜಮಾನರಾಗಿ ಇವರು ನೆಲೆಸಿದ್ದಾರೆ. ಇಂತಹ ಎರಡನೆಯ ವರ್ಗಕ್ಕೆ ಸಮೀಪವಾಗಿ ಬದುಕಿದ ಅನೇಕ ದಾನಶೀಲರನ್ನೂ, ತ್ಯಾಗಸಂಪನ್ನರನ್ನೂ, ಕಾರುಣ್ಯಸಿಂಧುಗಳನ್ನೂ, ಭಾರತದಲ್ಲಿ ಉದ್ದಗಲಕ್ಕೂ ಅಲ್ಲಲ್ಲಿ ಕಾಣಬಹುದು. ಶಿರಸಂಗಿ ಲಿಂಗರಾಜರು, ಗುಬ್ಬಿ ತೋಟದಪ್ಪನವರು ವೀರಶೈವ ಸಮಾಜದ ಸರ್ವಾಂಗೀಣ ಪ್ರಗತಿಗೆ ಕಾರಣರಾಗಿದ್ದಾರೆ. ಇಂತಹ ಮಹನೀಯರ ಸಾಲಿಗೆ ಕಬ್ಬಹಳ್ಳಿ ಗ್ರಾಮದ ದಾನಿಗಳನ್ನು ಸೇರಿಸಬಹುದು. ಈ ಮಹನೀಯರು ಅಪರೂಪದ ವ್ಯಕ್ತಿಗಳು. ಏಕೆಂದರೆ ಇವರು ಚರಿತ್ರೆಗಿಂತ ಚಾರಿತ್ರ್ಯ ದೊಡ್ಡದಾಗಿಸಿಕೊಂಡು ಬದುಕನ್ನು ಸಾರ್ಥಕಪಡಿಸಿಕೊಂಡವರಾಗಿದ್ದರು.

"ಕಾಯಕವೇ ಕೈಲಾಸ" ಎಂಬ ತತ್ವದ ನಿಜವನ್ನರಿತು ತಮ್ಮ ಬದುಕನ್ನು ಎತ್ತರಿಸಿಕೊಳ್ಳುವುದರ ಜೊತೆಗೆ ತಮ್ಮ ಸುತ್ತಲಿನ ಜನರ ಬದುಕನ್ನು ಎತ್ತರಿಸಲು ಪ್ರಯತ್ನಿಸಿದ ದಾನಿಗಳಿವರು. ಈ ದಾನಿಗಳ ಬದುಕು ಅನುಕರಣೀಯ. ಈ ದಾನಿಗಳು ಆರೋಗ್ಯಕ್ಕೆ ಮಹತ್ವ ನೀಡಿ, ವೈಚಾರಿಕ ಪ್ರಜ್ಞೆಗೆ ನಾಂದಿ ಹಾಡಿ ಧರ್ಮಕಾರ್ಯ ಧುರೀಣರೆನಿಸಿಕೊಂಡು ನಡೆನುಡಿಯಿಂದ ಹಾಗೂ ನಿಸ್ವಾರ್ಥಪರ ತ್ಯಾಗದಿಂದ ಆದರ್ಶಪ್ರಾಯರಾಗಿ ಬಡವರ ಬದುಕಿಗೆ ಆಸರೆಯಾಗಿ ಯುವಪೀಳಿಗೆಗೆ ಮಾರ್ಗದರ್ಶಕರಾಗಿದ್ದಾರೆ. ತಮ್ಮ ದಾನಶೀಲತೆ, ಶಿಕ್ಷಣ, ಪ್ರೇಮ, ವಿಶಾಲ ಮನೋಭಾವ, ದೇಶಪ್ರೇಮ, ತ್ಯಾಗ, ಸಮಾಜಸೇವೆಗಳಿಂದ ಜನರ ಮನದಲ್ಲಿ ಇವರು ಇಂದಿಗೂ ನೆಲೆಸಿದ್ದಾರೆ. ಇವರು ಶಿಕ್ಷಣರಂಗದಲ್ಲಿ ಅದರಲ್ಲೂ ಗ್ರಾಮಾಂತರ ಬಡವಿದ್ಯಾರ್ಥಿಗಳ ಭವಿಷ್ಯದ ಉತ್ಕರ್ಷಕ್ಕಾಗಿ ಅನನ್ಯ ಸೇವೆ ಸಲ್ಲಿಸಿದ್ದಾರೆ. ಒಂದೇ ಮನೆತನದ ಮೂರು ತಲೆಮಾರಿನವರು ಸಮಾಜಸೇವೆ, ಶಿಕ್ಷಣರಂಗದ ಉತ್ಕರ್ಷ, ದೀನದಲಿತರ ಉದ್ಧಾರ ಕಾರ್ಯಗಳಲ್ಲಿ ತನುಮನಧನಗಳನ್ನು ಸವೆಸಿದಂತಹ ವಿರಳ ಕುಟುಂಬಗಳಲ್ಲಿ ಇವರದೂ ಒಂದು. ಇಂತಹ ನಿಸ್ವಾರ್ಥಿಗಳಿಗೆ ಜಗದ ಜನರೆಲ್ಲರೂ ಒಂದೇ. ಮಮಕಾರ ತೋರಿದ ಈ ದಾನಿಗಳಿದ್ದ ತಾಣ ಮಹತ್ವ ಪಡೆದಿದೆ. ಏಕಂದರೆ

ಸ್ವತಂತ್ರಪೂರ್ವದಲ್ಲಿ ಗ್ರಾಮಗಳ ಏಳಿಗೆಗಾಗಿ ಈ ದಾನಿಗಳು ಕೈಗೊಂಡಿದ್ದ ಯೋಜನೆಗಳು ಹತ್ತುಹಲವು. ಸರ್ಕಾರವು ಅನೇಕ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದು ಸುಮಾರು ಸುಧಾರಣೆ ಮಾಡಿರಬಹುದು. ಆದರೆ ಇಂತಹ ಸುಧಾರಣೆಗಳನ್ನು ಈ ದಾನಿಗಳು ಬಹಳಷ್ಟು ಹಿಂದೆಯೇ ಮಾಡಿರುವುದು ಗಮನಾರ್ಹ. ಶಾಲಾನಿರ್ಮಾಣ, ಉಪಾಧ್ಯಾಯರ ವಸತಿಗೃಹಗಳು, ವಿಶಾಲರಸ್ತೆಗಳು, ನೆಡುತೋಪುಗಳು, ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ, ಬಡಮಕ್ಕಳಿಗೆ ವಿದ್ಯಾಸೌಕರ್ಯ, ಆಸ್ಪತ್ರೆ ನಿರ್ಮಾಣ ಮತ್ತು ನಿರ್ವಹಣೆ, ಮಠಮಾನ್ಯಗಳ ಅಭಿವೃದ್ಧಿ, ಅನ್ನದಾನ ಮಾಡುವುದು, ಪುಸ್ತಕ ಭಂಡಾರ ತೆರೆದು ವಾಚನಾಲಯ ಸೌಕರ್ಯ ಒದಗಿಸುವುದು ಹೀಗೆ ಹತ್ತು ಹಲವು ಯೋಜನೆಗಳನ್ನು ಕೈಗೊಂಡು ತ್ರಿಕರಣಪೂರ್ವಕವಾಗಿ ದುಡಿದು ಸಾರ್ಥಕ ಜೀವನವನ್ನು ಸಾಗಿಸಿದ ಈ ದಾನಿಗಳು ಎಂದೆಂದಿಗೂ ಪ್ರಾತಃಸ್ಮರಣೀಯರು. ಅವರು ಮಾಡಿರುವ ಧರ್ಮಕಾರ್ಯಗಳ ಬಾಹುಳ್ಯದಿಂದಾಗಿ ಬಾನೆತ್ತರದ ಕೀರ್ತಿಯನ್ನು ಸಂಪಾದಿಸಿಕೊಂಡಿದ್ದಾರೆ. ಅವರನ್ನು ಇಂದಿಗೂ ಸಮಾಜದ ಮೇಲ್ಪಂಕ್ತಿಯಾಗಿ ನೆನೆದು ಅನುಸರಿಸಬೇಕಾಗಿದೆ. ಬೆಳೆಯುವ ಛಾತಿಯುಳ್ಳ ಯುವಪೀಳಿಗೆಗೆ ಈ ದಾನಿಗಳ ಸೇವೆ ಮಾರ್ಗದರ್ಶಕವಾಗುತ್ತದೆ. ಈ ದಾನಿಗಳು ತಮ್ಮ ಜೀವನದಲ್ಲಿ ಪ್ರತಿಫಲವನ್ನು ಅಪೇಕ್ಷಿಸದೆ "ಪರೋಪಕಾರಾರ್ಥಮಿದಂ ಶರೀರಂ" ಎಂದು ಬಗೆದು "ಜನತೆಯ ಸೇವೆ ಜನಾರ್ಧನ ಸೇವೆ" ಎಂಬುದನ್ನರಿತು ಸಕಲ ಜೀವಿಗಳಿಗೆ ಲೇಸನ್ನೇ ಬಯಸಿ ಶರಣರ ಮಾರ್ಗಾವಲಂಬಿಗಳಾಗಿ ಬದುಕಿ ಸಾಧನೆ ಮಾಡಿರುವುದ ಹೆಮ್ಮೆಯ ಸಂಗತಿ[2]. ಈ ದಾನಿಗಳು ಅಲ್ಲಿಯೂ ಇಲ್ಲಿಯೂ ಸಲ್ಲುವ ಕೆಲಸ ನಿರ್ವಹಿಸಿ ತನ್ಮೂಲಕ ಅಜರಾಮರರಾಗಿದ್ದಾರೆ.

ಸುತ್ತೂರು ವೀರಸಿಂಹಾಸನದ ಗುರುಪರಂಪರೆಯ ಹನ್ನೊಂದನೆಯ ಜಗದ್ಗುರುಗಳಾದ ಶ್ರೀ ಘನಲಿಂಗಿ ಚಕ್ರವರ್ತಿಗಳು ತಮ್ಮ ಒಂದು ವಚನದಲ್ಲಿ ಆತ್ಮವನ್ನು ಸಂಭೋದಿಸಿ "ಕೇಳು ಕೇಳು ಆತ್ಮನೇ ಆದಿ ಮದ್ಯ ಅವಸಾನವ ತಿಳಿದು ನೋಡಿ ಕೆಡಬೇಡ, ತಂದೆಯ ದೆಸೆಯಿಂದ ತಾಯಿಯ ಯೋನಿಚಕ್ರದಲ್ಲಿ ಬಂದುದೇ ಆದಿ. ಹೆಣ್ಣು, ಹೊನ್ನು, ಮಣ್ಣು ನನ್ನವೆಂದು ಷಟ್ಕರ್ಮವನ್ನಾಚರಿಸಿ ಸುಖದುಃಖಗಳಲ್ಲಿ ಮುಳುಗಿಪ್ಪುದೇ ಮಧ್ಯ. ಆತ್ಮನ ಕೃಪೆಯಿಂದ ಅರೆದು ಸಣ್ಣರಿಸಿಕೊಂಡು ಭವಕ್ಕೆ ನೋಂಕಿಸಿಕೊಳ್ಳುವುದೇ ಅವಸಾನ. ಇದನರಿದು ಇದಕ್ಕೆ ಹೋಮವಂ ಮಾಡು ಮತ್ತೆ ಆದಿ, ಮಧ್ಯ, ಅವಸಾನವಂ ತಿಳಿಹುವೆನು ಮಹಾಲಿಂಗದ ಗರ್ಭಾಂಬುದಿಯಲ್ಲಿ ಬಂದನೆಂಬುದೇ ಆದಿ, ಲೋಕದ ವ್ಯವಹಾರವ ಸಾಕು ಮಾಡಿ ಇಷ್ಟಲಿಂಗದಲ್ಲಿ ನಿಷ್ಠೆಯಾಗಿ ಕ್ಷುತ್ತಿಂಗೆ ಭಿಕ್ಷೆ. ಶೀತಕ್ಕೆ ರಗಣೆಯಾಗಿ ಮೋಕ್ಷಗಾಮಿಯಾಗಿಪ್ಪುದೇ ಮಧ್ಯ. ತನುಮನ ಬಿಡುವಲ್ಲಿ ಮನಸ ಪರಬ್ರಹ್ಮಕ್ಕೆ ಸಮರ್ಪಣೆ ಮಾಡಿ ಜನನ ಮರಣವ ಗೆಲ್ಲುವುದೇ ಅವಸಾನ. ಇದಕ್ಕೆ ಮೆಚ್ಚಿ ಲಿಂಗವನೆ ಸಾಧಿಸು, ವೇದಿಸು, ಕಪಿಯ ಕೈಯ್ಯ ಕನ್ನಡಿಯಂತೆ ಕುಣಿದರೆ ಕುಣಿದು, ಏಡಿಸಿ ಹಲ್ಲುಗಿಂದಂತೆ, ಮನವಾಡಿದಂತೆ ನೀನಾಡಬೇಡ, ಮನವಾಡಿದಂತೆ ಆಡಿಸದಂಗೆ ಭಕ್ತಿ ಎಲ್ಲಿಯದು? ಜ್ಞಾನವೆಲ್ಲಿಯದು? ವೈರಾಗ್ಯವೆಲ್ಲಿಯದು? ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ" ಹೀಗೆ ಮನ ಆಡಿದಂತೆ ಆಡದೆ ಶಿವನನ್ನು ನಂಬಿ ಜನಸೇವೆ ಮಾಡಿದ ಈ ದಾನಿಗಳು ಈಗ ಶಿವಸಾನಿಧ್ಯ ಸೇರಿದ್ದಾರೆ.[3] ಈ ಚೇತನಗಳಲ್ಲಿ ಅಪಾರ ಐಶ್ವರ್ಯವಿದ್ದರೂ, ಜೀವನದಲ್ಲಿ ಎಲ್ಲಾ ಭೋಗಭಾಗ್ಯಗಳನ್ನು ಅನುಭವಿಸುವ

ಶಕ್ತಿಯಿದ್ದರೂ, ಆ ಕಡೆಗೆ ಗಮನ ಹರಿಸದೆ ದೀನದಲಿತರ ಏಳ್ಗೆಗೆ ಅದನ್ನು ವಿನಿಯೋಗಿಸಿ ಅವರ ಬಾಳಿಗೆ ಬೆಳಕಾಗಿ ಅವರ ನೋವುನಲಿವುಗಳನ್ನು ಹಂಚಿಕೊಂಡು ಮರ್ತ್ಯದ ಮಣಿಹವ ಪೂರೈಸಿದ್ದಾರೆ. ಇಂತಹ ದಾನಿಗಳ ಮನೆಗೆ ಸೊಸೆಯಾಗಿ, ಭಾಗ್ಯಲಕ್ಷ್ಮಿಯಾಗಿ ಆಗಮಿಸಿದವರೇ ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರು.

ಮೂರು ತಲೆಮಾರಿನ ದಾನಿಗಳ ಮನೆಗೆ ಅವರು ಸೊಸೆಯಾಗಿ ಬಂದುದು ಒಂದು ಅದ್ಭುತವೇ ಸರಿ. ಲಿಂಗೈಕ್ಯ ಶರಣ ಸಿದ್ಧಲಿಂಗಪ್ಪನವರು, ಇವರ ಪುತ್ರ ಲಿಂಗೈಕ್ಯ ಶರಣ ಚನ್ನಬಸಪ್ಪನವರು, ಇವರ ಧರ್ಮಪತ್ನಿ ಲಿಂಗೈಕ್ಯ ಮಾತೆ ಮಲ್ಲವ್ವೆಯವರು. ಇವರೀರ್ವರ ಪುತ್ರ ಸಮಾಜ ಸೇವಾರತ್ನ ಲಿಂಗೈಕ್ಯ ಕೆ.ಸಿ. ಸುಬ್ಬಣ್ಣನವರುಹಾಗೂ ಕೊನೆ ತಲೆಮಾರಿನ ಕೆ.ಸಿ. ಸುಬ್ಬಣ್ಣನವರ ಧರ್ಮಪತ್ನಿ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಕಬ್ಬಹಳ್ಳಿಯ ದಾನಿಗಳಲ್ಲಿ ಶ್ರೇಷ್ಠರೆನಿಸಿದ್ದಾರೆ.[4]

1.1 ಅಧ್ಯಯನ ವಸ್ತುವಿನ ಮಹತ್ವ

ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರು ಕಬ್ಬಹಳ್ಳಿ ದಾನಿಗಳ ಮನೆತನದ ಕೊನೆಯ ತಲೆಮಾರಿನ ಮಹಿಳೆಯಾಗಿರುವುದು ಪ್ರಮುಖ ಸಂಗತಿಯಾಗಿದೆ. ಇವರಿಗಿಂತ ಹಿಂದೆ ಇದ್ದ ದಿವಂಗತ ಸಿದ್ಧಲಿಂಗಪ್ಪನವರು ಅವರ ಮಡದಿ ಸುಬ್ಬಮ್ಮನವರು. ಅವರ ಪುತ್ರ ಚನ್ನಬಸಪ್ಪ. ಚನ್ನಬಸಪ್ಪನವರ ಮಡದಿ ಮಲ್ಲವ್ವೆ. ಈ ದಂಪತಿಗಳ ಏಕೈಕ ಪುತ್ರ ಕೆ.ಸಿ. ಸುಬ್ಬಣ್ಣ. ಇವರ ಮೊದಲ ಪತ್ನಿ ಸುಬ್ಬಮ್ಮ. ಸುಬ್ಬಮ್ಮನವರ ನಿಧನದ ತರುವಾಯ ಎರಡನೇ ಪತ್ನಿಯಾಗಿ ಬಂದ ಕೆ.ಎಸ್.ನಾಗರತ್ನಮ್ಮ ಇವರುಗಳೆಲ್ಲರೂ ಶ್ರೇಷ್ಠ ದಾನಿಗಳ ಪಂಕ್ತಿಯಲ್ಲಿ ರಾರಾಜಿಸುತ್ತಿದ್ದಾರೆ. ಇವರುಗಳು ಕೈಗೊಂಡ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ಸೇವೆಗಳು ಸರ್ವಕಾಲಕ್ಕೂ ಅನುಕರಣೀಯ. ಈ ಮನೆತನದವರು ಕೈಗೊಂಡಿದ್ದ ಸಾರ್ವಜನಿಕ ಸೇವೆಗಳು ಗಣನೀಯ. ಇಂತಹ ವ್ಯಕ್ತಿಗಳು ಸಮಾಜಕ್ಕೆ ಸಲ್ಲಿಸಿರುವ ಸೇವೆ ಎಂದೆಂದಿಗೂ ಪ್ರತಿಯೊಬ್ಬರ ಮನಸ್ಸಿನಲ್ಲೂ ಚಿರಸ್ಥಾಯಿಯಾಗಿ ನಿಲ್ಲುವಂತಹ ಮಹತ್ವ ಪಡೆದಿದೆ. ಮುಂದಿನ ಯುವಪೀಳಿಗೆಯವರು ಈ ಮಹಾದಾನಿಗಳ ಚಿಂತನಾ ವಿಧಾನಗಳನ್ನು ಅನುಸರಿಸಲು ಯೋಗ್ಯ ಎನಿಸಿವೆ. ಆಧುನಿಕ ಯುಗದಲ್ಲಿ ಕಲ್ಯಾಣ ರಾಜ್ಯಗಳು ಅನೇಕ ಜನಹಿತ ಸೇವೆಗಳನ್ನು ಕೈಗೊಂಡಿರಬಹುದು. ಆದರೆ ಅಂತಹ ಕಲ್ಯಾಣಕರ ಸೇವೆಗಳನ್ನು 19ನೇ ಶತಮಾನದ ಅಂತ್ಯದಿಂದ 20ನೇ ಶತಮಾನದ ಕೊನೆಯವರೆಗೆ ಈ ದಾನಿಗಳು ಕೈಗೊಂಡು ಶ್ರೇಷ್ಠರೆನಿಸಿಕೊಂಡಿದ್ದಾರೆ. ಈ ಸಾಮಾಜಿಕ ಸೇವೆಗಳನ್ನು ಉಳ್ಳವರು ತಮ್ಮ ಹೃದಯಶ್ರೀಮಂತಿಕೆಯಿಂದ ಈಗಿನ ಕಾಲದಲ್ಲೂ ಅನುಸರಿಸಬಹುದು. ಇಂತಹ ಹೃದಯ ಶ್ರೀಮಂತಿಕೆಯ ವ್ಯಕ್ತಿಗಳು ಸಮಾಜದಲ್ಲಿ ಇದ್ದರೂ ಅನೇಕರು ದಾನ ಮಾಡಬೇಕೆಂಬ ಪ್ರಯತ್ನ ಮಾಡುತ್ತಿಲ್ಲ. ಎಲೆಯ ಮರೆಯ ಕಾಯಿಯಂತೆ ಅಲ್ಲೊಬ್ಬರು, ಇಲ್ಲೊಬ್ಬರು ದೊರಕಬಹುದು.

ಆ ದಾನಿಗಳು ಕಬ್ಬಹಳ್ಳಿ ಮನೆತನದವರು ತುಳಿದ ದಾರಿಯಲ್ಲೇ ನಡೆದುಬಂದರೆ ಅವರ ಬದುಕು ಸಾರ್ಥಕವೆನಿಸುತ್ತದೆ. ಅವರೂ ಸಹ ಈ ಮನೆತನದವರ ಹೆಸರು ಹೇಗೆ ಚಿರಸ್ಥಾಯಿಯಾಗಿ ನಿಂತಿದೆಯೋ ಅಂತೆಯೇ ತಮ್ಮ ಹೆಸರನ್ನು ಅಮರವಾಗಿಸಿಕೊಳ್ಳಬಹುದು. ದಾನ ಮಾಡುವುದನ್ನು ಮೈಗೂಡಿಸಿಕೊಳ್ಳುವುದು

ಅಷ್ಟು ಸುಲಭದ ಕೆಲಸವಲ್ಲ. ಅದು ಪ್ರತಿಫಲಾಪೇಕ್ಷೆ ಇಲ್ಲದೆ ಮಾಡುವ ಒಂದು ಅದ್ಭುತ ಕೆಲಸ. ಇದನ್ನು ಈ ಆಧುನಿಕ ಯುಗದಲ್ಲಿ ಬಾಳ್ವೆ ಮಾಡುತ್ತಿರುವ ಜನರು ಅನುಸರಿಸಲು ಈ ಲೇಖನ ಒಂದು ಮಾರ್ಗದರ್ಶಿಯಾಗಬಹುದು ಎಂಬುದರಲ್ಲಿ ಎರಡು ಮಾತಿಲ್ಲ. ಆದ್ದರಿಂದ ಇಂತಹ ದಾನಿಗಳ ಅಧ್ಯಯನ ಮಹತ್ವ ಪಡೆದುಕೊಳ್ಳುತ್ತದೆ.

1.2 ಸಂಶೋಧನಾ ವಿಧಾನ

ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರ ಜೀವನ ಸಾಧನೆಗಳನ್ನು ಖಚಿತವಾದ ಆಧಾರಗಳ ನೆರವಿನಿಂದ ಅಭ್ಯಾಸ ಮಾಡಲಾಗುವುದು. ಅವರಿಗೆ ಸಂಬಂಧಪಟ್ಟ ಗ್ರಂಥಗಳನ್ನು ಅಭ್ಯಾಸ ಮಾಡಿ ಅವರು ಗುಂಡ್ಲುಪೇಟೆ ತಾಲ್ಲೂಕಿನ ಅಭಿವೃದ್ಧಿಗೆ ಕೈಗೊಂಡಂತಹ ಸಾಧನೆಗಳನ್ನು ಪರಿಚಯಿಸಲಾಗುವುದು. ಅವರ ಹಿತೈಷಿಗಳು, ಬಂಧುಮಿತ್ರರನ್ನು ಸಂದರ್ಶಿಸಿ ಮಾಹಿತಿಯನ್ನು ಪಡೆದು ಈ ಪ್ರಬಂಧವನ್ನು ರಚಿಸಲಾಗುವುದು.

ಬಾಹ್ಯ ಮತ್ತು ಆಂತರಿಕ ವಿಮರ್ಶಾ ವಿಧಾನವನ್ನು ಅನುಸರಿಸಿ ವೈಜ್ಞಾನಿಕವಾದ ವಿಧಾನದಿಂದ ಪ್ರಬಂಧವನ್ನು ರಚಿಸಲಾಗುವುದು. ಈ ರೀತಿಯಲ್ಲಿ ಪ್ರಕಟಿತ, ಅಪ್ರಕಟಿತ ಕೃತಿಗಳನ್ನು ಮೌಖಿಕ ಆಧಾರಗಳನ್ನು ಆಧರಿಸಿ ಶ್ರೇಷ್ಠ ಸಂಸದೀಯ ಪಟುವಾದ ಶ್ರೀಮತಿ ಕೆ.ಎಸ್.ನಾಗರತ್ಮಮ್ಮನವರ ಜೀವನ, ಚಿಂತನೆ, ಹೋರಾಟದ ಕೃತಿಗಳ ಮೌಲ್ಯಮಾಪನ ಕಾರ್ಯವನ್ನು ಕೈಗೊಳ್ಳಲಾಗುವುದು.

1.3 ಅಧ್ಯಯನಕ್ಕೆ ಸಂಬಂಧಿಸದ ಗ್ರಂಥಗಳ ಸಮೀಕ್ಷೆ

ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರ ಬಗ್ಗೆ ಈವರೆಗೆ ಪ್ರಕಟವಾಗಿರುವ ಕೃತಿಗಳೆಂದರೆ -

"ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ" - ಡಾ. ಪಳನಿಸ್ವಾಮಿ

"ಸ್ಕಂಧಗಿರಿ" - ಜಿ.ಜಿ. ಮಂಜುನಾಥ್

"ದಿವ್ಯಚೇತನಗಳು" - ರಾಜೇಂದ್ರಶಿಶು

"ಹೊನ್ನುಹೊಳೆ" - ಪ್ರೊ. ಮಲೆಯೂರು ಗುರುಸ್ವಾಮಿ

"ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆ" - ಪ್ರೊ. ಎನ್.ಬಿ.ಪಾಂಗಣ್ಣಾಯ, ಪ್ರೊ. ಹೆಚ್.ಆರ್.ಅಚ್ಯುತರಾವ್, ಡಾ. ಡಿ.ಎಸ್, ಜಯಪ್ಪಗೌಡ

A review of working Karnataka Legislative Assembly

A Karnataka state Legislative Council Debates

A Karnataka state Legistlative assembly debates

A Interviews of Smt. K.S.nagarathnamma contemporary

ಈ ಮೇಲಿನ ಕೃತಿಗಳ ಮತ್ತು ಶ್ರೀಮತಿ ಕೆ.ಎಸ್. ನಾಗರತ್ಮಮ್ಮನವರ ಸಮಕಾಲೀನರಿಂದ ಸಂಗ್ರಹಿಸಿರುವ ಮಾಹಿತಿಗಳು, ಶ್ರೀಮತಿ ಕೆ.ಎಸ್.ನಾಗರತ್ಮಮ್ಮನವರ ಪೂರ್ವಜರ ಇತಿಹಾಸ, ಬಾಲ್ಯಜೀವನ,

ರಾಜಕೀಯ ಪ್ರವೇಶ, ಗುಂಡ್ಲುಪೇಟೆ ಕ್ಷೇತ್ರಕ್ಕೆ ಕೈಗೊಂಡಿರುವ ಸಾರ್ವಜನಿಕ ಸೇವೆಗಳು ಹಾಗೂ ವಿಧಾನಸಭೆಯಲ್ಲಿ ಮಾಡಿದಂತಹ ಚರ್ಚೆಗಳ ಮೇಲೆ ಹೆಚ್ಚು ಬೆಳಕನ್ನು ಚೆಲ್ಲುತ್ತವೆ.

1.4 ಅಧ್ಯಾಯಗಳ ವರ್ಗೀಕರಣ

"ಕೆ.ಎಸ್.ನಾಗರತ್ನಮ್ಮ ಅವರ ಚಿಂತನೆ ಹಾಗೂ ಹೋರಾಟದ ನೆಲೆಗಳು" ಎಂಬ ಕಿರು ಪ್ರಬಂಧವನ್ನು ಒಟ್ಟು 5 ಅಧ್ಯಾಯಗಳಾಗಿ ವಿಂಗಡಿಸಿ ಅಧ್ಯಯನ ಮಾಡಲಾಗುವುದು.

ಅಧ್ಯಾಯ 1 - ಈ ಅಧ್ಯಾಯವು ಪೀಠಿಕೆ, ಅಧ್ಯಯನ ವಸ್ತುವಿನ ಮಹತ್ವ, ಸಂಶೋಧನಾ ವಿಧಾನ ಹಾಗೂ ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರ ಜೀವನ ಮತ್ತು ಸಾಧನೆಗಳ ಮೇಲೆ ಬೆಳಕು ಚೆಲ್ಲುವ ಗ್ರಂಥಗಳು ಹಾಗೂ ಅಧ್ಯಾಯಗಳ ವರ್ಗೀಕರಣವನ್ನು ಒಳಗೊಂಡಿದೆ.

ಅಧ್ಯಾಯ 2- ಈ ಅಧ್ಯಾಯವು ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರ ಪೂರ್ವಜರ ಇತಿಹಾಸ, ಬಾಲ್ಯಜೀವನ, ವಿದ್ಯಾಭ್ಯಾಸ ಮತ್ತು ವೈವಾಹಿಕ ಜೀವನದ ಬಗ್ಗೆ ಮಾಹಿತಿ ನೀಡುತ್ತದೆ.

ಅಧ್ಯಾಯ 3- ಈ ಅಧ್ಯಾಯವು ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರ ರಾಜಕೀಯ ಪ್ರವೇಶ, ಗುಂಡ್ಲುಪೇಟೆ ಕ್ಷೇತ್ರದ ಅಭಿವೃದ್ಧಿಗೆ ಕೈಗೊಂಡ ಚಿಂತನೆ ಹಾಗೂ ಗುಂಡ್ಲುಪೇಟೆ ಕ್ಷೇತ್ರದ ಶಾಸಕಿಯಾಗಿ, ವಿಧಾನಸಭಾಧ್ಯಕ್ಷೆಯಾಗಿ, ವಿರೋಧಪಕ್ಷದ ನಾಯಕಿಯಾಗಿ, ಮಂತ್ರಿಯಾಗಿ ಮಾಡಿದಂತಹ ಸಾಧನೆಗಳನ್ನು ತಿಳಿಸುತ್ತದೆ.

ಅಧ್ಯಾಯ 4- ಈ ಅಧ್ಯಾಯವು ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರ ಸಾರ್ವಜನಿಕ ಸೇವೆಗಳು, ಕೃಷಿ ಕ್ಷೇತ್ರ ಹಾಗೂ ಶೈಕ್ಷಣಿಕ ಕ್ಷೇತ್ರಕ್ಕೆ ಕೊಟ್ಟಂತಹ ಕೊಡುಗೆಯ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲುತ್ತದೆ.

ಅಧ್ಯಾಯ 5- ಈ ಅಧ್ಯಾಯವು ಸಂಶೋಧನಾ ಪ್ರಬಂಧದ ಕೊನೆಯ ಘಟ್ಟ. ಇದು ಗ್ರಂಥಋಣ ಫೋಟೋಗಳನ್ನು ಹೊಂದಿದ್ದು ಪ್ರಬಂಧದ ಸಂಪೂರ್ಣ ಸಾರಾಂಶವನ್ನು ಒಳಗೊಂಡಿದೆ.

ಅಡಿ ಟಿಪ್ಪಣಿಗಳು

1. 'ದಿವ್ಯಚೇತನಗಳು' - ರಾಜೇಂದ್ರಶಿಶು, ಪುಟಸಂಖ್ಯೆ 3
2. 'ಹೊನ್ನುಹೊಳೆ' - ಪ್ರೊ. ಮಲೆಯೂರು ಗುರುಸ್ವಾಮಿ, ಪುಟಸಂಖ್ಯೆ 453
3. 'ದಿವ್ಯಚೇತನಗಳು' - ರಾಜೇಂದ್ರಶಿಶು, ಪುಟಸಂಖ್ಯೆ XVI
4. 'ಸ್ಕಂಧಗಿರಿ' - ಜಿ.ಜಿ.ಮಂಜುನಾಥ, ನೀ. ಗಿರಿಗೌಡ, ಪುಟಸಂಖ್ಯೆ 116

ಅಧ್ಯಾಯ - ೨

ಆರಂಭಿಕ ಜೀವನ

ಅಧ್ಯಾಯ - 2

ಆರಂಭಿಕ ಜೀವನ

ಪೂರ್ವಜರ ಇತಿಹಾಸ

ಕಬ್ಬಹಳ್ಳಿಯ ಸಿದ್ಧಲಿಂಗಪ್ಪ-ಸುಬ್ಬಮ್ಮ ದಂಪತಿಗಳಿಗೆ 3 ಜನ ಗಂಡುಮಕ್ಕಳಿದ್ದರೆಂದು ತಿಳಿದುಬಂದಿದೆ. ಅವರಲ್ಲಿ ಸುಬ್ಬಪ್ಪ ಮೊದಲನೆಯವರು. ಪುಟ್ಟಪ್ಪ ಎಂಬವವರು ಎರಡನೆಯವರು. 3ನೆಯವರೇ ಚನ್ನಬಸಪ್ಪ. ಮೊದಲನೇ ಮತ್ತು ಎರಡನೆಯವರ ಬಗ್ಗೆ ಹೆಚ್ಚು ಮಾಹಿತಿಗಳು ಲಭ್ಯವಿಲ್ಲ. ಚನ್ನಬಸಪ್ಪ 3ನೇ ಮಗುವಾಗಿ ಸಿದ್ಧಲಿಂಗಪ್ಪನವರ ಮನೆಯ ಭಾಗ್ಯಜ್ಯೋತಿಯಾಗಿ ಬೆಳೆದಿದ್ದರು. ಇವರು 1881ರಲ್ಲಿ ಹಿಂದಿನ ಮೈಸೂರು ಜಿಲ್ಲೆಯ ಈಗಿನ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಕಬ್ಬಹಳ್ಳಿ ಗ್ರಾಮದಲ್ಲಿ ಸಿದ್ಧಲಿಂಗಪ್ಪ ಸುಬ್ಬಮ್ಮ ದಂಪತಿಗಳ ಪುಣ್ಯೋದರದಲ್ಲಿ ಜನಿಸಿದರು[1]. ಈ ಮಗುವು ಮಾತೆಯ ಮನೋರಾಜ್ಯದಲ್ಲಿ ಬೆಳೆಯುವಾಗ ಸಮಾಜ ಸುಧಾರಕನಾಗುವ ಲಕ್ಷಣಗಳನ್ನು ಮೈಗೂಡಿಸಿಕೊಂಡು ಬೆಳೆಯುತ್ತಿತ್ತು. ಕಿರಿಯ ಮಗುವಾಗಿ ಈ ಬಾಲಕನ ಮೇಲೆ ಎಲ್ಲರಿಗೂ ಅಪರಿಮಿತ ವಾತ್ಸಲ್ಯ. ಎಲ್ಲರೂ ಈ ಮಗುವಿನ ಮೇಲೆ ವಾತ್ಸಲ್ಯದ ಮಳೆಯನ್ನು ಸುರಿಸುತ್ತಿದ್ದರು.

ಸಿದ್ಧಲಿಂಗಪ್ಪನವರ ಮಡದಿ ತನ್ನ ಮೂರನೇ ಮಗುವನ್ನು ಎಚ್ಚರಿಕೆಯಿಂದ ಆರೈಕೆ ಮಾಡುತ್ತಿದ್ದರು. ತೊಟ್ಟಿಲು ತೂಗುವಾಗ, ಮಗುವನ್ನು ಆಡಿಸುವಾಗ, ಆಕೆಯ ಸೊಗಸಾದ ಜೋಗುಳ ಪದಗಳನ್ನು ಹೇಳುತ್ತಿದ್ದರು. ತಾಯಿಯ ಈ ಜೋಗುಳದ ಹಾಡು ಮಗುವಿನ ಮೇಲೆ ಪ್ರಭಾವ ಬೀರಿರಬೇಕು. ತಂದೆತಾಯಿಯರ ಉದಾರ ಚಾರಿತ್ರ್ಯ ಮಗುವಿಗೆ ಉಂಬಳಿಯಾಗಿ ಬಂದಿರಬೇಕು. ಹುಣ್ಣಿಮೆಯ ಚಂದಿರನಂತೆ ದಿನದಿ ನಕ್ಕು ಮಗು ಮಹೋನ್ನತ ಗುಣಗಳನ್ನು ಮೈಗೂಡಿಸಿಕೊಂಡು ಬೆಳೆಯುತ್ತಿತ್ತು. ಬಾಲಕನಿಗೆ ಚನ್ನಬಸಪ್ಪ ಎಂದು ನಾಮಕರಣ ಮಾಡಲಾಗಿತ್ತು. ಚನ್ನಬಸಪ್ಪ ತುಂಬಾ ಸೂಕ್ಷ್ಮಮತಿ. ಓದಿನಲ್ಲಿ ಬಹಳ ಚುರುಕು. ಇದರಿಂದಾಗಿ ಶಾಲೆಯಲ್ಲಿ ಉಪಾಧ್ಯಾಯರೆಲ್ಲರಿಗೂ ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿದ್ದ ಬಾಲಕನು ತನ್ನ 10ನೇ ವಯಸ್ಸಿಗೆ ಪ್ರಾಥಮಿಕ ಶಿಕ್ಷಣ ಮುಗಿಸಿ ಎಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದ.[2] ಹತ್ತಿರದಲ್ಲಿ ಎಲ್ಲಿಯೂ ಮಾಧ್ಯಮಿಕ ಶಾಲೆ ಇರಲಿಲ್ಲ. ಮೇಲಾಗಿ ತಾಯಿಯ ಅತಿಯಾದ ಪ್ರೀತಿಯಿಂದ ಚನ್ನಬಸಪ್ಪ ಶಿಕ್ಷಣದಿಂದ ವಂಚಿತನಾಗಬೇಕಾಯಿತು. ಚನ್ನಬಸಪ್ಪ ತಾನು ಕಲಿತ ವಿದ್ಯೆಯ ಸಹಾಯದಿಂದಲೇ ಕಾವ್ಯ, ಸಾಹಿತ್ಯ, ಪುರಾಣ, ಅಮರಕೋಶಗಳನ್ನು ನಿರರ್ಗಳವಾಗಿ ಓದುತ್ತಿದ್ದನು. ಅವುಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಮೈಗೂಡಿಸಿಕೊಂಡಿದ್ದನು. ಕನ್ನಡ ಭಾಷೆಯ ಮೇಲೆ ಸಾಕಷ್ಟು ಪ್ರೌಢಿಮೆ ಮೈದಾಳಿತ್ತು. ಉನ್ನತ ವ್ಯಾಸಂಗದಿಂದ ವಂಚಿತರಾದುದರಿಂದ ಆಂಗ್ಲಭಾಷೆ ಕಲಿಯಲಿಲ್ಲ. ಅದಕ್ಕಾಗಿ ಅವರು ಎಂದೂ ವ್ಯಥೆ ಪಡಲಿಲ್ಲ. ಆದರೆ ಬಾಲಕನ ಚಿಂತನಾಲಹರಿ ಬೇರೆಯದಾಗಿತ್ತು. ತನ್ನಂತೆ ಬೇರೆ ಯಾರಿಗೂ ಶಿಕ್ಷಣದಿಂದ ವಂಚಿತರಾಗುವ ಭಾಗ್ಯ ಉಂಟಾಗಬಾರದು. ಅದಕ್ಕಾಗಿ ಏನಾದರೂ ಮಾರ್ಗ ಹುಡುಕಬೇಕು ಎಂಬ ಚಿಂತೆ ಕಾಡುತ್ತಲೇ ಇತ್ತು. ತಾನಾದರೂ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದ್ದರೂ ಮಾಧ್ಯಮಿಕ ಶಿಕ್ಷಣ ಕಲಿಯಲಾಗಲಿಲ್ಲ. ಆದರೆ ಬಡತನದ ಸುಳಿಗೆ ಸಿಕ್ಕು ಓದಲಾಗದ ಎಷ್ಟೋ ಮಕ್ಕಳು ವ್ಯಾಸಂಗ ಮುಂದುವರೆಸಲು ಆಗುತ್ತಿಲ್ಲ.

ಅಂತಹ ವರ್ಗದವರಿಗಾಗಿ ಏನಾದರೂ ಮಾರ್ಗ ಇದೆಯೇ? ಎಂಬ ಚಿಂತೆ ಅವರನ್ನು ಸದಾ ಕಾಡುತ್ತಿತ್ತು. ಉತ್ತರ ದೊರಕಿತು. ಸಮಾಜದ ಜನರ ಬದುಕು ಹಸನು ಮಾಡಲು ನಾನೇ ಏಕೆ ಒಂದು ಶಾಲೆ ತೆರೆಯಬಾರದು ಎಂಬ ಆಲೋಚನೆ ಅವರ ಮನದಾಳದಿಂದ ಪುಟಿದೆದ್ದಿತು. ಆದರೆ ಕಾಲ ಪಕ್ವವಾಗಿರಲಿಲ್ಲ.

ಬಾಲಕ ಹುಣ್ಣಿಮೆಯ ಚಂದ್ರನಂತೆ ಬೆಳೆಯತೊಡಗಿದ. ತನ್ನ ಚಿಂತನಾಲಹರಿಯಲ್ಲಿ ತೇಲುತ್ತಿದ್ದಾಗ ತನ್ನ ವಿವಾಹದ ಕನಸನ್ನು ಹೊತ್ತಿದ್ದ. ತಂದೆತಾಯಿಗಳು ಬಾಲಕನಿಗೆ ವಿವಾಹ ಮಾಡಲು ಕನ್ಯೆಯೊಂದರ ಅನ್ವೇಷಣೆಯಲ್ಲಿದ್ದರು. ಗುಂಡ್ಲುಪೇಟೆ ತಾಲ್ಲೋಕಿನ ಮೂಡುಗೂರು ಗ್ರಾಮದ ಗೌಡರ ಪುಟ್ಟವೀರಪ್ಪನವರ ಮಗಳು ಮಲ್ಲವ್ವೆ ಎಂಬ ವಧುವನ್ನು ಆಯ್ಕೆ ಮಾಡಿಕೊಂಡಿದ್ದರು. ಪುಟ್ಟವೀರಪ್ಪನವರು ಒಳ್ಳೆಯ ಮನೆತನದವರೂ, ಅಗರ್ಭ ಶ್ರೀಮಂತರೂ, ಧರ್ಮನೀತಿ ಪಾರಾಯಣರೂ ಆಗಿದ್ದರು. ಕಬ್ಬಹಳ್ಳಿಗೂ ಮೂಡುಗೂರು ಗ್ರಾಮಕ್ಕೂ ಕೇವಲ ಮೂರ್ನಾಲ್ಕು ಕಿ.ಮೀ. ದೂರವಷ್ಟೆ. ಅದರಿಂದಾಗಿ ಮೂಡಗೂರಿನ ಗೌಡರ ಕುಟುಂಬಕ್ಕೂ ಕಬ್ಬಹಳ್ಳಿ ದಾನಿಗಳ ಮನೆತನಕ್ಕೂ ಅವಿನಾಭಾವ ಸಂಬಂಧ ಬೆಳೆಯಲಾರಂಭಿಸಿತು. ಮೂಡುಗೂರಿನ ಕುಟುಂಬವೂ ದಾನಿಗಳ ಕುಟುಂಬ ಚನ್ನಬಸಪ್ಪನವರದು ಹಳೆಯ ತಲೆಮಾರಿನ ದಾನಿಗಳ ಕುಟುಂಬ. ಹಾಗಾಗಿ ಚನ್ನಬಸಪ್ಪನವರು ಬಾಲ್ಯದಿಂದಲೂ ದಾನಧರ್ಮ ಮಾಡುವ ಪರೋಪಕಾರ ಗುಣಗಳನ್ನು ಬೆಳೆಸಿಕೊಂಡಿದ್ದರು. ಬಡವರ ದುಃಖ ದುಮ್ಮಾನಗಳನ್ನು ಕಂಡು ಮರುಗುತ್ತಿದ್ದರು. ಭಗವಂತರ ಇಚ್ಛೆಯಂತೆ ಮಲ್ಲವ್ವೆಗೂ ಚನ್ನಬಸಪ್ಪನವರಿಗೂ ಧಾರ್ಮಿಕ ವಿಧಿವಿಧಾನಗಳ ಮೂಲಕ ವಿವಾಹ ನಡದೇಹೋಯಿತು. "ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ" ಎಂಬಂತೆ ಇವರದು ಆದರ್ಶ ಸಂಸಾರವಾಗಿತ್ತು. ಪತ್ನಿ ಮಲ್ಲವ್ವೆ ಪತಿಯೇ ಪರದೈವ ಎಂದು ನಂಬಿದವರು. ಅವರದು ಮೃದುಮನಸ್ಸು, ಧರ್ಮಪಾರಾಯಣೆ, ಪತಿಯ ಮನದಿಚ್ಛೆ ಅರಿತು ಜೀವನದಲ್ಲಿ ಮುದ ನೀಡುತ್ತಿದ್ದರು. ಚನ್ನಬಸಪ್ಪನವರ ಮನೆ ಸ್ವರ್ಗ ಮಾಡಲು ಶ್ರಮಿಸುತ್ತಿದ್ದರು. ಮಲ್ಲವ್ವೆ ಶ್ರೀಮಂತರ ಮಗಳಾಗಿದ್ದರೂ ಗರ್ವವಿಲ್ಲದೆ ಆಡಂಬರವಿಲ್ಲದೆ ಸಂಸಾರ ನಡೆಸುತ್ತಿದ್ದರು. ಶಿವಪೂಜೆಯನ್ನೇ ಕಾಯಕ ಮಾಡಿಕೊಂಡಿದ್ದರು. ಅತ್ತೆ ಮಾವರಿಗಂಜಿ ಅವರ ಮಾರ್ಗದರ್ಶನದಲ್ಲಿ ಸಂಸಾರ ನಡೆಸುತ್ತಿದ್ದರು. ಕಾಲಚಕ್ರ ಉರುಳುತ್ತಲೇ ಹೋಗುತ್ತಿತ್ತು. ದಂಪತಿಗಳ ಜೀವನ ಮಕ್ಕಳಿಲ್ಲದೆ ಬರಡಾಗಿತ್ತು. ಈ ಕೊರತೆ ಮಲ್ಲವ್ವೆಯನ್ನು ಅಪಾರವಾಗಿ ಕಾಡುತ್ತಿತ್ತು. ಹೊರಗಿನವರು ಮಲ್ಲವ್ವೆಯನ್ನು ಬಂಜೆ ಎಂದು ಅಪಹಾಸ್ಯ ಮಾಡಿರಬೇಕು. ಮಲ್ಲವ್ವೆಗೂ ತನ್ನ ಮನಸ್ಸಿಗೆ ಸಂತೋಷ ನೀಡುವ ಮಕ್ಕಳಿಲ್ಲವಲ್ಲ ಎಂದು ಸದಾ ಯೋಚಿಸುತ್ತಿದ್ದರು. ಬೇರೆಯವರು ತಮ್ಮ ಮಕ್ಕಳೊಡನೆ ಮನೆಗೆ ಬಂದಾಗ ಮಲ್ಲವ್ವೆಯ ದುಗುಡ ಹೆಚ್ಚಾಗುತ್ತಿತ್ತು. ತಮ್ಮ ಬಳಿ ಎಲ್ಲವೂ ಇದ್ದು ಮನಕ್ಕೆ ಮುದ ನೀಡುವ ಮಕ್ಕಳಿಲ್ಲದ ಬಾಳು ಸಮುದ್ರದ ನೀರಿನಂತಾಗಿತ್ತು.

ಬಾಲಾಕರಿಲ್ಲದ ಬಾಲೀದ್ಯಾತರ ಜನುಮ
ಬಾಡೀಗಿ ಎತ್ತು ದುಡಿದ್ಹಾಂಗ ಬಾಳೆಲೆಯ
ಹಾಸ್ಯುಂಡು ಬೀಸಿ ಒಗೆದ್ಹಾಂಗ [3]

ಎಂಬ ಹಾಡನ್ನು ಅನೇಕ ಬಾರಿ ನೆನಪಿಸಿಕೊಂಡು "ಶಿವ, ನನಗೆ ಒಂದು ಕಂದನನ್ನು ಕೊಡು.

ಬಂಜೆತನದ ಅಪವಾದದಿಂದ ನನ್ನನ್ನು ಮುಕ್ತಳನ್ನಾಗಿ ಮಾಡು" ಎಂದು ಆ ಶಿವನನ್ನು ಅದೆಷ್ಟು ಸಾರಿ ಪ್ರಾರ್ಥಿಸಿದ್ದಳೋ ಅದು ಅವಳಿಗೇ ಗೊತ್ತು. ಆಕೆಯ ಮೊರೆಯನ್ನು ಶಿವ ಪರೀಕ್ಷಿಸಿರಬೇಕು. ಚನ್ನಬಸಪ್ಪನವರು ತಮ್ಮ ಪತ್ನಿಯನ್ನು ಕುರಿತು "ಮಕ್ಕಳಿಲ್ಲವೆಂಬ ಕೊರಗು ನಮಗೆ ಬೇಡ, ಸಮಾಜದಲ್ಲಿರುವ ಹತ್ತಾರು ಮಕ್ಕಳನ್ನು ನಮ್ಮೊಡನೆ ಇಟ್ಟುಕೊಂಡು ಅವರನ್ನೇ ನಮ್ಮ ಮಕ್ಕಳೆಂದು ಪ್ರೀತಿಯಿಂದ ಸಾಕೋಣ, ಅವರಿಗೆ ವಿದ್ಯಾಭ್ಯಾಸಕ್ಕೆ ಬೇಕಾದ ಅನುಕೂಲ ಮಾಡಿಕೊಡೋಣ" ಎಂದು ಸಮಾಧಾನ ಮಾಡುತ್ತಿದ್ದರು. ಇದರಿಂದ ನಮಗೆ ಮಕ್ಕಳಿಲ್ಲವೆಂಬ ಕೊರತೆ ದೂರವಾಗಿ ನೆಮ್ಮದಿಯ ಬದುಕು ದೊರೆಯುತ್ತದೆ ಎಂದು ಹೇಳುತ್ತಿದ್ದರು. ಪತಿಯ ಸಲಹೆಯನ್ನು ಮಲ್ಲವ್ವೆ ತನ್ನ ತಲೆಯಾಡಿಸುವ ಮೂಲಕ ಒಪ್ಪಿಗೆ ಕೊಟ್ಟಿದ್ದರು. ಆದರೂ ಮಲ್ಲವ್ವೆಯ ಮನದಾಳದಲ್ಲಿ ಮಕ್ಕಳಿಲ್ಲದ ಕೊರತೆ ಮನೆಮಾಡಿತ್ತು. ಹಲವಾರು ದೇವರುಗಳಿಗೆ ಹರಕೆ ಹೊತ್ತು ವ್ರತ ಆಚರಿಸುತ್ತಿದ್ದರು. ನನಗೆ ಒಬ್ಬ ಮಗನಾದೊಡೆ ನಿನ್ನ ಹೆಸರನ್ನೇ ಇಡುತ್ತೇನೆ ಎಂದು ನಾಗರ ಪ್ರತಿಜ್ಞೆ ಮಾಡಿಸಿದರು. ಆಕೆಯ ಭಕ್ತಿ ಅಪಾರವಾದುದು. ಭಕ್ತರ ಕೂಗಿಗೆ ಆ ಪರಮಾತ್ಮ ಸ್ಪಂದಿಸದೆ ಇರುವನೆ? ದಯಾಮಯನಾದ ಆ ಪರಶಿವನು ಭಕ್ತಿಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮಲ್ಲವ್ವೆಗೆ ವರ ಕರುಣಿಸಿಯೇ ಬಿಟ್ಟ. ಹರನ ಕರುಣೆಯಿಂದ ಮೊದಲ ಮಗು ಗಂಡಾದರೆ ಎರಡನೆಯ ಮಗು ಹೆಣ್ಣಾಯಿತು. ಮೊದಲ ಮಗುವಿಗೆ ಸುಬ್ಬಣ್ಣ ಎಂತಲೂ, ಎರಡನೆಯ ಮಗುವಿಗೆ ಸುಬ್ಬಮ್ಮ ಎಂತಲೂ ನಾಮಕರಣ ಮಾಡಿಸಿದರು. ಇದರಿಂದ ಚನ್ನಬಸಪ್ಪ ದಂಪತಿಗಳು ಆನಂದದಿಂದ ಮುದ್ದುಮಕ್ಕಳ ಲೀಲಾವಿನೋದದ ನಡುವೆ ಕಾಲಕಳೆಯುತ್ತಿದ್ದರು. ಬಾಲಕನನ್ನು ಜೋಪಾನ ಮಾಡುವುದರ ಜೊತೆಗೆ ಪುತ್ರಿಯನ್ನು ಸಾಕುತ್ತಿದ್ದರು. ಈ ಪುತ್ರಿಯು ಯೌವ್ವನಕ್ಕೆ ಬಂದಾಗ ಕೊಳ್ಳೇಗಾಲ ತಾಲ್ಲೂಕು ಪಾಳ್ಯ ಗ್ರಾಮದ ಶಿವನಂಜಪ್ಪ ಎಂಬುವರಿಗೆ ವಿವಾಹ ಮಾಡಿಕೊಡಲಾಯಿತು. ಸದರಿ ಸುಬ್ಬಮ್ಮನವರ ನಿರ್ಗಮನದಿಂದ ಬಾಲಕ ಸುಬ್ಬಣ್ಣ ಒಂಟಿಯಾಗಿ ತಂದೆತಾಯಿಗಳ ಪೋಷಣೆಯಲ್ಲಿ ಬೆಳೆಯುತ್ತಿದ್ದರು. "ನುಡಿದಂತೆ ನಡೆ, ಈ ಜನ್ಮವೇ ಕಡೆ" ಎಂಬ ಮಾತೊಂದಿದೆ. ಚನ್ನಬಸಪ್ಪನವರ ಮನದ ಇಂಗಿತವನ್ನು ಮರೆತಿರಲಿಲ್ಲ. ಅವರು ಅಂದುಕೊಂಡಿದ್ದಕ್ಕಿಂತ ಮಾಡಿರುವುದೇ ಹೆಚ್ಚು. ಬಡಮಕ್ಕಳ ವ್ಯಾಸಂಗಕ್ಕೆ ಅನುಕೂಲ ಕಲ್ಪಿಸಬೇಕೆಂಬ ತಮ್ಮ ಮನಸ್ಸಿನ ಆಲೋಚನೆಯನ್ನು ಅವರು ಮರೆತಿರಲಿಲ್ಲ. ಶ್ರೀಮಂತರಾಗಿದ್ದ ತಂದೆ ಗಳಿಸಿಟ್ಟಿದ್ದ ಸಂಪತ್ತು ಅಪಾರವಾಗಿತ್ತು. ಅವರ ಮನೆ ಲಕ್ಷ್ಮಿಯ ನಿವಾಸಸ್ಥಾನವಾಗಿತ್ತು. ಅದನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸದಿದ್ದರೆ ಹೇಗೆ? ಮುಂದಿನ ಪೀಳಿಗೆಗೆ ಅದನ್ನು ಸಂಗ್ರಹಿಸಿ ಇಡಬೇಕೆಂಬ ಹಂಬಲ ಅವರದಲ್ಲ. ತಮ್ಮ ಬಳಿ ಇರುವ ಹಣದಿಂದ ಅನ್ಯರಿಗೆ ಸಹಾಯ ಮಾಡುವ ಬಯಕೆ ಅವರದು. ಅನ್ಯರ ನೋವಿನಲ್ಲಿ ಸುಖ ಬಯಸುವ ವ್ಯಕ್ತಿತ್ವ ಅವರದಲ್ಲ. ಆಸೆಯ ಬಲೆಗೆ ಸಿಲುಕದ ಅವರು ಪರೋಪಕಾರ ಮಾಡುವ ಕಡೆಗೆ ವಾಲಿದ್ದರು. ತಮಗೆ ದೊರಕದ ಶಿಕ್ಷಣ ಬೇರೆಯವರಿಗೆ ದೊರೆಯಲೆಂದು ತಮ್ಮ ಸಂಪತ್ತು ವಿನಿಯೋಗಿಸಿ ಕಬ್ಬಹಳ್ಳಿ ಗ್ರಾಮದಲ್ಲಿ ತಮ್ಮ ತಂದೆಯವರ ಹೆಸರಿನಲ್ಲಿ ಒಂದು ಮಾಧ್ಯಮಿಕ ಶಾಲೆ ತೆರೆಯುವ ಸಾಹಸಕ್ಕೆ ಕೈಹಾಕಿದರು. ಅವರ ಈ ಸಾಹಸ ಪ್ರವೃತ್ತಿಗೆ ಶರಣೆ ಮಲ್ಲವ್ವೆ ಹೆಮ್ಮೆಯಿಂದ ಮೆಚ್ಚುಗೆ ಸೂಚಿಸಿದರು. ತಮ್ಮ ಮನದ ಇಂಗಿತವನ್ನು ವ್ಯಕ್ತಪಡಿಸಿ ಶಾಲೆ ತೆರೆಯುವ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿ ಬೆಂಗಳೂರಿನಿಂದಲೇ ಅದನ್ನು

ಮಂಜೂರು ಮಾಡಿಸಿಕೊಂಡು ಬಂದರು. ಅಂತೆಯೇ ತಮ್ಮ ತಂದೆ ಲಿಂಗೈಕ್ಯ ಶ್ರೀ ಸಿದ್ಧಲಿಂಗಪ್ಪನವರ ನಾಮಾಂಕಿತದಿಂದ ಕಬ್ಬಹಳ್ಳಿಯಲ್ಲಿ ಇಂದು ಕಂಗೊಳಿಸುತ್ತಿರುವ ಮಾಧ್ಯಮಿಕ ಶಾಲೆಯನ್ನು ಸುಮಾರು 16 ಸಾವಿರ ರೂ.ಗಳ ವೆಚ್ಚ ಮಾಡಿ 1914ರಲ್ಲಿ ಕಟ್ಟಿಸಿದರು[4]. ಶಾಲೆಯ ಅಭಿವೃದ್ಧಿಗಾಗಿ ಸರ್ಕಾರದಲ್ಲಿ ಸುಮಾರು 5000 ರೂ. ಠೇವಣಿ ಇಟ್ಟಿದ್ದರು. ಈ ಶಾಲೆ ಅಂದಿನಿಂದ ಇಂದಿನವರೆಗೆ ಅದೆಷ್ಟು ಬುದ್ಧಿಜೀವಿಗಳ ಭವಿಷ್ಯ ರೂಪಿಸಿದೆಯೋ ಅರಿತವರು ಯಾರು? ವಿದ್ಯೆ ಕಲಿಯುವ ಕಾಲ ಬಾಲ್ಯ ಎಂಬುದನ್ನು ಅರಿತ ಚನ್ನಬಸಪ್ಪನವರು ಮಕ್ಕಳ ಮುಂದಿನ ಭವಿಷ್ಯ ರೂಪಿಸುವ ದಿಕ್ಕಿನಲ್ಲಿ ಹಗಲಿರುಳು ದುಡಿದ ಮಹಾನುಭಾವರು. ಮಾಧ್ಯಮಿಕ ಶಾಲೆಗೆ ನೆರೆಹೊರೆಯ ಗ್ರಾಮದ ಮಕ್ಕಳು ಬಂದು ಸೇರಿದರು. ಬೋಧಿಸುವ ಶಿಕ್ಷಕರ ನೇಮಕಾತಿಯೂ ಆಯಿತು. ನಂತರ ಸಮಸ್ಯೆಗಳ ಸರಮಾಲೆ ಪ್ರಾರಂಭವಾಯಿತು. ಜ್ಞಾನಾರ್ಜನೆ ಬಯಸಿ ಬಂದ ಮಕ್ಕಳ ಅಶನವಸತಿಯ ಸಮಸ್ಯೆ ಒಂದೆಡೆಯಾದರೆ ಉಪಾಧ್ಯಾಯರು ಉಳಿಯಲು ವಸತಿ ಸಮಸ್ಯೆ, ಉಪಾಧ್ಯಾಯರಿಗೆ ಸಂಬಳ ನೀಡುವ ಸಮಸ್ಯೆ, ಹೀಗೆ ಸಮಸ್ಯೆಗಳು ಬೆಳೆಯತೊಡಗಿದವು. ಗ್ರಾಮೀಣ ಪ್ರದೇಶದಿಂದ ಬಂದ ಅನೇಕ ಬಾಲಕರಿಗೆ ತಾವೇ ಮುಂದಾಗಿ ನಿಂತು ತಮ್ಮ ಮನೆಯಲ್ಲಿಯೇ ಉಚಿತ ಅಶನ ವಸತಿ ಏರ್ಪಾಡು ಮಾಡಿದರು. ಪತ್ನಿ ಮಲ್ಲವ್ವೆ ಎಲ್ಲಾ ಮಕ್ಕಳನ್ನು ತನ್ನ ಮಕ್ಕಳಂತೆ ನೋಡಿಕೊಳ್ಳುತ್ತಾ ದಾಸೋಹ ನಡೆಸುತ್ತಿದ್ದರು. ಹೀಗೆ ಬಡವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲಿ ಆಶ್ರಯ ನೀಡಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಟ್ಟಿದ್ದರು. ಕಬ್ಬಹಳ್ಳಿ ದಾನಿಗಳ ಮನೆಯಲ್ಲಿ ಅಶನವಸತಿಗಳನ್ನು ಪಡೆದು ವಿದ್ಯಾವಂತರಾಗಿ ಉದ್ಯೋಗ ಅವಲಂಬಿಸಿರುವ ಅನೇಕರು ಇಂದಿಗೂ ಆ ಮನೆತನದ ಬಗ್ಗೆ ಗೌರವ ಹೊಂದಿದ್ದಾರೆ. ಅಂತಹವರ ಪೈಕಿ ಹೊರೆಯಾಲ ಗ್ರಾಮದ ಹೆಚ್.ಸಿ.ಚನ್ನಬಸಪ್ಪನವರೂ ಒಬ್ಬರು ಹಲವಾರು ದಶಕಗಳ ಹಿಂದೆ ಹೊರೆಯಾಲ ಗ್ರಾಮದಿಂದ ಬಂದ ಅವರು ತಮ್ಮ ಬಾಲ್ಯದಲ್ಲಿ ಈ ದಾನಿಗಳ ಆಸರೆ ಪಡೆದು ಇಂಟರ್‌ಮೀಡಿಯಟ್‌ವರೆಗೆ ಓದಿ ನೌಕರಿ ಪಡೆದಿದ್ದರಂತೆ. ಅವರು ಈ ಮನೆತನದವರ ಬಗ್ಗೆ ಹೊಂದಿದ್ದ ಗೌರವ ಅಭಿಮಾನಗಳು ಪ್ರಶಂಸನೀಯವಾದವು. ಅಧ್ಯಾಪಕರ ಜೀವನ ನಿರ್ವಹಣೆಗೆ ಬೇಕಾದ ಹಣ ಕೊಡುವ ವ್ಯವಸ್ಥೆಗಾಗಿ 13 ಸಾವಿರ ರೂಪಾಯಿಗಳ ಠೇವಣಿ ಇಟ್ಟು ಅದರಿಂದ ಬರುವ ಬಡ್ಡಿಯ ಹಣವನ್ನು ಅಧ್ಯಾಪಕರ ಸಂಬಳಕ್ಕಾಗಿ ವಿನಿಯೋಗಿಸಿದರು. ವಿದ್ಯೆ ಕಲಿಸಲು ಬಂದ ಉಪಾಧ್ಯಾಯರು ವಾಸ್ತವ್ಯ ಮಾಡಲು ಅನುಕೂಲವಾಗುವಂತೆ ತಮ್ಮ ಅಣ್ಣಂದಿರಾದ ಸುಬ್ಬಪ್ಪ ಮತ್ತು ಪುಟ್ಟಪ್ಪನವರ ಹೆಸರಿನಲ್ಲಿ ಕಬ್ಬಹಳ್ಳಿಯಲ್ಲಿ ವಸತಿಗೃಹಗಳನ್ನು ನಿರ್ಮಿಸಿದರು. ಇದರಿಂದಾಗಿ ಅಧ್ಯಾಪಕರು ನೆಮ್ಮದಿಯಿಂದ ಬಂದು ನೆಲೆಸಲು ಸಾಧ್ಯವಾಯಿತು. ಇಂದಿನವರೆಗೆ ಅದೆಷ್ಟು ಉಪಾಧ್ಯಾಯರು ವಸತಿಗೃಹ ಸೌಲಭ್ಯ ಪಡೆದು ನಿರ್ಗಮಿಸಿದ್ದಾರೋ ತಿಳಿಯದು. ಈ ವಸತಿಗೃಹಗಳ ಜೀರ್ಣೋದ್ಧಾರವಾಗಬೇಕಾಗಿದೆ. ಕುಡಿಯುವ ನೀರು, ಶೌಚಾಲಯ, ಹೂದೋಟಗಳ ವ್ಯವಸ್ಥೆ ಸರಿಯಾಗಿ ಆಗುವಂತೆ ವಾರಸುದಾರರು ನೋಡಿಕೊಳ್ಳಬೇಕಾಗಿದೆ. ಕಬ್ಬಹಳ್ಳಿಯಲ್ಲಿ ಗ್ರಂಥಭಂಡಾರ ಪ್ರಾರಂಭಿಸಲು 1000 ರೂ.ಗಳ ದೇಣಿಗೆ ನೀಡಿದರು. ಹಳ್ಳಿಯಿಂದ ಬರುವ ವಿದ್ಯಾರ್ಥಿಗಳು ಅಲ್ಲಿ ಓದಿ ಹೆಚ್ಚು ಜ್ಞಾನ ಸಂಪಾದಿಸಲೆಂಬುದು ಅವರ ಆಶಯವಾಗಿತ್ತು. ವಿದ್ಯಾರ್ಥಿಗಳು ತಮ್ಮ ಸಮಯವನ್ನು ಸರಿಯಾದ ರೀತಿಯಲ್ಲಿ ಸದುಪಯೋಗಪಡಿಸಿಕೊಳ್ಳಬೇಕೆಂಬುದು ಅವರ ಉದ್ದೇಶವಾಗಿತ್ತು. ಪುಸ್ತಕಗಳು ಮುಂದಿನ ಜನಾಂಗದ ಆಸ್ತಿ ಎಂಬುದನ್ನರಿತು ಪುಸ್ತಕ ಸಂಗ್ರಹದ ಕೆಲಸಕ್ಕೆ ಕೈ ಹಾಕಿದರು.

ಮನುಷ್ಯನಿಗೆ ಹಣಕ್ಕಿಂತ ಆರೋಗ್ಯ ಮುಖ್ಯ ಎಂಬುದನ್ನರಿತ ಸಾಹುಕಾರ್ ಚನ್ನಬಸಪ್ಪನವರು ಆರೋಗ್ಯವಂತ ಪ್ರಜೆಗಳನ್ನು ಸಮಾಜ ಹೊಂದಿರಬೇಕು ಎಂದು ಭಾವಿಸಿ ಅದರ ಕಡೆಗೂ ಗಮನಹರಿಸಿದ್ದರು. ಆಗಿನ ಕಾಲದಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದ ಜನರು ಗುಂಡ್ಲುಪೇಟೆಗೋ, ನಂಜನಗೂಡಿಗೋ, ಮೈಸೂರಿಗೋ ಹೋಗಬೇಕಾಗಿತ್ತು. ಇದನ್ನು ಮನಗಂಡ ಅವರು ಕಬ್ಬಹಳ್ಳಿ ಗ್ರಾಮದಲ್ಲಿ ಸಾರ್ವಜನಿಕರಿಗಾಗಿ ಒಂದು ಆಸ್ಪತ್ರೆಯನ್ನು ಕಟ್ಟಿಸಿದರು. ಇಂದು ಈ ಆಸ್ಪತ್ರೆಯು ಮೇಲ್ದರ್ಜೆಗೆ ಏರಿಸಲ್ಪಟ್ಟಿದ್ದು ವೈದ್ಯಕೀಯ ಉಪಚಾರ, ಶಸ್ತ್ರಚಿಕಿತ್ಸೆ, ಹೆರಿಗೆ ಸೌಲಭ್ಯ, ಒಳರೋಗಿಗಳ ಶುಶ್ರೂಷೆ ಹೀಗೆ ಹಲವು ಹತ್ತು ಸೌಲಭ್ಯಗಳನ್ನು ಹೊಂದಿದ್ದು ಸಾಕಷ್ಟು ರೋಗಿಗಳಿಗೆ ವರದಾನವಾಗಿದೆ. ಆದರೆ ಕರ್ತವ್ಯ ನಿರ್ವಹಣೆಗಾಗಿ ಬೇಕಾದ ವೈದ್ಯರ ಮತ್ತು ನೌಕರರ ಕೊರತೆ ಎದ್ದು ಕಾಣುತ್ತಿದೆ.

ಸಾಹುಕಾರ್ ಚನ್ನಬಸಪ್ಪನವರ ದೈವಭಕ್ತಿ ಅಪಾರವಾದುದು. ಕಬ್ಬಹಳ್ಳಿ ಗ್ರಾಮದಲ್ಲಿ ಶಿಥಿಲವಾಗಿದ್ದ ಅನೇಕ ಪುರಾತನ ದೇವಾಲಯಗಳನ್ನು ಕೋಮುವಾರು ಭೇದವಿಲ್ಲದೆ ಸಹಸ್ರಾರು ರೂ.ಗಳನ್ನು ವೆಚ್ಚ ಮಾಡಿ ಜೀರ್ಣೋದ್ಧಾರ ಮಾಡಿಸಿದ್ದರು. ಹಲವಾರು ವರ್ಷಗಳವರೆಗೆ ತಮಗೆ ಮಕ್ಕಳಾಗದಿದ್ದಾಗ ಊರಿನ ಚಲುವನಾರಾಯಣಸ್ವಾಮಿ ದೇವರಲ್ಲಿ ಹರಕೆ ಹೊತ್ತಿದ್ದರಂತೆ. ಕಾಲಾನಂತರ ಸ್ವಾಮಿಯ ಕೃಪೆಯಿಂದ ಗಂಡುಸಂತಾನ ಪ್ರಾಪ್ತಿಯಾಯಿತು. ಆ ಮಗುವೇ ಕೆ.ಸಿ. ಸುಬ್ಬಣ್ಣ. ಹರಕೆ ತೀರಿಸಲು ಚಲುವನಾರಾಯಣಸ್ವಾಮಿ ದೇವಾಲಯಕ್ಕೆ ಕೊಡುಗೆಯಾಗಿ ಜಮೀನು ನೀಡಿದ್ದರು. ಪ್ರತಿ ವರ್ಷವೂ ನಡೆಯುವ ಚಲುವನಾರಾಯಣಸ್ವಾಮಿ ಉತ್ಸವದಲ್ಲಿ ಕಬ್ಬಹಳ್ಳಿ ದಾನಿಗಳ ಮನೆತನದ ಹೊಣೆಹೊತ್ತಿರುವ, ದೀಪ ಬೆಳಗುತ್ತಿರುವ ವಾರಸುದಾರರಾದ ಶ್ರೀ ಪಿ.ಎಸ್.ನಾಗರಾಜು ಮತ್ತು ಪತ್ನಿ ಇವರಿಂದ ಇಂದಿಗೂ ಮೊದಲ ಪೂಜೆ ನೆರವೇರುತ್ತದೆ.[5]

ಸಾಹುಕಾರ್ ಚನ್ನಬಸಪ್ಪನವರು ನಂಜನಗೂಡು ತಾಲ್ಲೋಕು ದೇವನೂರು ಶ್ರೀ ಗುರುಮಲ್ಲೇಶ್ವರರ ಮಠದ ಬಗ್ಗೆ ಭಕ್ತಿ ಹೊಂದಿದ್ದರು. ಪರಿಣಾಮ ಕಬ್ಬಹಳ್ಳಿ ಗ್ರಾಮದಲ್ಲಿ ಶ್ರೀ ಗುರುಮಲ್ಲೇಶ್ವರ ನಾಮಾಂಕಿತ ಭಿಕ್ಷದ ಮಠಕ್ಕೆ ಸ್ಥಳದಾನ ಮಾಡಿದ್ದರು. ಆ ಸ್ಥಳದಲ್ಲಿ ಈಗಲೂ ಮಠದ ಕಟ್ಟಡವಿದ್ದು ಆ ಗ್ರಾಮದ ಅನೇಕ ಭಕ್ತರು ಈ ಮಠದ ತತ್ವಸಿದ್ಧಾಂತಗಳಿಗೆ ನಡೆದುಕೊಳ್ಳುತ್ತಿದ್ದಾರೆ. ಅಲ್ಲದೆ ಚನ್ನಬಸಪ್ಪನವರು ಕಬ್ಬಹಳ್ಳಿ ಗ್ರಾಮದ ವಿಶ್ವಕರ್ಮ ಜನಾಂಗಕ್ಕೆ ಸೇರಿದ ಕಾಳಿಕಾಂಬ ದೇವಾಲಯದ ನಿರ್ಮಾಣಕ್ಕೆ ಬೇಕಾದ ಸ್ಥಳದಾನ ಮಾಡಿದ್ದರು.

ಹೀಗೆ ಜ್ಞಾನಭಂಡಾರಕ್ಕೆ ಅವಶ್ಯಕವಾದ ಪುಸ್ತಕ ಭಂಡಾರ, ವಾಚನಾಲಯ, ಶಾಲೆ, ಆಸ್ಪತ್ರೆ, ದೇವಾಲಯ ಇವೆಲ್ಲವನ್ನೂ ಒಳಗೊಂಡ ಕಬ್ಬಹಳ್ಳಿ ಮಾದರಿ ಗ್ರಾಮವಾಗಲು ಸಾಹುಕಾರ್ ಚನ್ನಬಸಪ್ಪನವರು ಶ್ರಮಿಸಿದ್ದರು. ಇದುವರೆಗೂ ಸಾಹುಕಾರ್ ಚನ್ನಬಸಪ್ಪನವರ ಕಾರ್ಯಕ್ಷೇತ್ರ ಕೇವಲ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತವಾಗಿತ್ತು. ಇವರ ಆಲೋಚನೆಗಳು ಮತ್ತು ಚಿಂತನೆಗಳು ಅಪಾರವಾಗಿದ್ದವು. ಅಂದಿನ ದಿನಗಳಲ್ಲಿ ಪಟ್ಟಣಕ್ಕೆ ಹೋಗಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳು ವಸತಿ ಸಮಸ್ಯೆ ಎದುರಿಸುತ್ತಿದ್ದರು. ಇದನ್ನರಿತ ಚನ್ನಬಸಪ್ಪನವರು ತಮ್ಮ ಕಾರ್ಯಕ್ಷೇತ್ರವನ್ನು ಪಟ್ಟಣಕ್ಕೂ ವಿಸ್ತರಿಸಲು ಮನಸ್ಸು ಮಾಡಿ

ಮೈಸೂರಿನ ಝಾನ್ಸಿರಾಣಿ ಲಕ್ಷ್ಮಿಬಾಯಿ ರಸ್ತೆಯಲ್ಲಿ ರೈಲುನಿಲ್ದಾಣಕ್ಕೆ ಸಮೀಪವಿರುವ ಒಂದು ವಿಶಾಲ ಮೈದಾನದಲ್ಲಿ 45 ಸಾವಿರ ರೂ.ಗಳಿಗೆ ಭವ್ಯ ಮಂದಿರವೊಂದನ್ನು ಕೊಂಡುಕೊಂಡು 1920ರಲ್ಲಿ ಅದನ್ನು ಪುನರುಜ್ಜೀವನಗೊಳಿಸಿದರು. ಅದು ವೀರಶೈವ ವಿದ್ಯಾರ್ಥಿನಿಲಯವಾಗಿ ಪ್ರಾರಂಭವಾಯಿತು. ಅದರ ಅಭಿವೃದ್ಧಿಗಾಗಿ 4 ಸಾವಿರ ರೂ. ಠೇವಣಿ ಇಟ್ಟಿದ್ದರು. ಇದರಿಂದಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಅಲ್ಲೆ ನೆಲೆಸಿ ವ್ಯಾಸಂಗ ಮಾಡಬಹುದಾಗಿತ್ತು. ಹೀಗೆ ವಿದ್ಯಾರ್ಥಿಗಳ ವಸತಿ ಸಮಸ್ಯೆ ಬಗೆಹರಿಸಲು ಚನ್ನಬಸಪ್ಪನವರು ಕಾರಣರಾಗಿದ್ದರು. ಸಾಹುಕಾರ್ ಚನ್ನಬಸಪ್ಪನವರು ಮೈಸೂರಿನಲ್ಲಿ ಉಚಿತ ವಸತಿಗೃಹ ನಿರ್ಮಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಉಚಿತ ಅಶನಗಳನ್ನು ಪೂರೈಸುವ ಉದ್ದೇಶದಿಂದ ಗುಂಡ್ಲುಪೇಟೆ ತಾಲ್ಲೋಕು ಕೋಡಹಳ್ಳಿಯ ಸಮೀಪವಿದ್ದ ನೀರಾವರಿ ಸೌಕರ್ಯವಿದ್ದ ಸುಮಾರು 40 ಎಕರೆ ಜಮೀನನ್ನು ವಿದ್ಯಾರ್ಥಿನಿಲಯಕ್ಕೆ ದಾನ ಮಾಡಿದ್ದರು. ಅಲ್ಲಿ ಬೆಳೆಯುವ ಭತ್ತವನ್ನು ವಿದ್ಯಾರ್ಥಿಗಳ ಊಟದ ವ್ಯವಸ್ಥೆಗೆ ಬಳಸಬೇಕೆಂಬುದು ಅವರ ಆಶಯವಾಗಿತ್ತು. ಇಂದು ಈ ಭೂಮಿ ಆ ನಿಲಯಕ್ಕೆ ಹೇಗೆ ಬಳಕೆಯಾಗುತ್ತದೆ ಎಂಬುದು ಯಕ್ಷಪ್ರಶ್ನೆಯಾಗಿದೆ.

ವಿದ್ಯಾರ್ಥಿನಿಲಯದ ಮೇಲ್ವಿಚಾರಣೆಗಾಗಿ "ಬೋರ್ಡ್ ಆಫ್ ಟ್ರಸ್ಟೀಸ್" ಅಥವಾ "ಮಾರ್ಗಧರ್ಮದರ್ಶಿ ಮಂಡಳಿ" ಎಂಬ ಸಮಿತಿಯನ್ನು ನೇಮಿಸಿದ್ದರು. ಈ ಸಮಿತಿಯು ವಿದ್ಯಾರ್ಥಿಗಳ ಸಮಸ್ಯೆಗಳನ್ನು, ಆಗು-ಹೋಗುಗಳನ್ನು ನೋಡಿಕೊಂಡು ಅವರ ವಿದ್ಯಾರ್ಜನೆಗೆ ಸೂಕ್ತ ಅವಕಾಶಗಳನ್ನು ಕಲ್ಪಿಸಿಕೊಡುತ್ತಿತ್ತು. ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯ ಮಾಡುತ್ತಿದ್ದ ವಿದ್ಯಾರ್ಥಿಗಳ ಪ್ರತಿಭೆ ಹೆಚ್ಚಿಸಲು ತಮ್ಮ ಪುತ್ರಿ ಚಿ.ಸೌ.ಸುಬ್ಬಮ್ಮನವರ ವಿವಾಹದ ಸ್ಮರಣಾರ್ಥ 5000 ರೂ.ಗಳ ವೆಚ್ಚದಲ್ಲಿ ಒಂದು ಪುಸ್ತಕ ಭಂಡಾರವನ್ನು ಸ್ಥಾಪಿಸಿದರು.

ಗುಂಡ್ಲುಪೇಟೆ ತಾಲ್ಲೋಕಿನ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಉಚಿತ ಊಟದ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಇಂದಿಗೂ ಈ ವಿದ್ಯಾರ್ಥಿನಿಲಯವು ಸಾಹುಕಾರ್ ಕಬ್ಬಹಳ್ಳಿ ಚನ್ನಬಸಪ್ಪನವರ ವೀರಶೈವ ವಿದ್ಯಾರ್ಥಿನಿಲಯವು ಸಾಹುಕಾರ್ ಕಬ್ಬಹಳ್ಳಿ ಚನ್ನಬಸಪ್ಪನವರು ವೀರಶೈವ ವಿದ್ಯಾರ್ಥಿನಿಲಯವೆಂದು ರಾರಾಜಿಸುತ್ತಿದೆ. ಇವರು ನಂಜನಗೂಡಿನಲ್ಲಿ ಕಟ್ಟುತ್ತಿದ್ದ ಪ್ರೌಢಶಾಲಾ ಕಟ್ಟಡಕ್ಕೆ 3000 ರೂ. ದಾನ ನೀಡಿದ್ದರು. ಸಾಹುಕಾರ್ ಚನ್ನಬಸಪ್ಪನವರು ಗುಂಡ್ಲುಪೇಟೆ ಪಟ್ಟಣ ವ್ಯಾಪ್ತಿಯ ಪುರಸಭೆಗೆ ಸೇರಿದಂತೆ ಸಾರ್ವಜನಿಕ ಆಸ್ಪತ್ರೆಯ ಉದ್ದೇಶಕ್ಕಾಗಿ ಒಂದು ನಿವೇಶನವನ್ನು ದಾನವಾಗಿ ನೀಡಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದರು. ಆ ನಿವೇಶನದಲ್ಲಿ ಈಗ ಭವ್ಯವಾದ ಆಸ್ಪತ್ರೆಯೊಂದು ತಲೆ ಎತ್ತಿ ಕಾರ್ಯನಿರ್ವಹಿಸುತ್ತಿರುವುದು ಸಂತಸದ ಸಂಗತಿಯಾಗಿದೆ. ಈ ಆಸ್ಪತ್ರೆಯ ನಿರ್ಮಾಣಕ್ಕೆ ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರು ಹೇಗೆ ಶ್ರಮ ವಹಿಸಿದರು ಎಂಬುದನ್ನು ಮುಂದಿನ ಪುಟಗಳಲ್ಲಿ ವಿವರಿಸಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ ಬಡಮಕ್ಕಳ ವಿದ್ಯಾರ್ಥಿವೇತನಕ್ಕಾಗಿ 15 ಸಾವಿರ ರೂ.ಗಳನ್ನು ದತ್ತಿಯಾಗಿ ನೀಡಿದ್ದರು. ಹೀಗೆ ವಿದ್ಯಾರ್ಥಿಗಳ ಕ್ಷೇಮಕ್ಕಾಗಿ ದುಡಿಯುತ್ತಲೇ ಸಾಗಿದರು. ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ಪ್ರೀತಿ ವಾತ್ಸಲ್ಯದಿಂದ ಕಾಣುತ್ತಿದ್ದರು. ಅಂತೆಯೇ ಅವರನ್ನು

ಪೋಷಿಸಿ ನೀರೆರೆದು ಸಾಕುತ್ತಿದ್ದರು. ದಾನಕ್ಕಿಂತ ಮೇಲಾದುದು ಯಾವುದೂ ಇಲ್ಲವೆಂದರಿತ ಇವರನ್ನು "ದಾನಶೀಲ"ರೆಂದೇ ಕರೆಯಲಾಗುತ್ತಿತ್ತು. ತಮ್ಮಲ್ಲಿರುವ ಸಂಪತ್ತನ್ನು ಸದ್ವಿನಿಯೋಗ ಮಾಡಬೇಕೆಂದು ಬಯಸಿ ಅಂತೆಯೇ ನಡೆದುಕೊಂಡಿದ್ದರು.

ಒಮ್ಮೆ ಬೆಂಗಳೂರಿನ ಶ್ರೀ ಜಯದೇವ ವಿದ್ಯಾರ್ಥಿನಿಲಯದ ಶಂಕುಸ್ಥಾಪನೆಯ ಕಾರ್ಯಕ್ರಮಗಳಲ್ಲಿ ಮೈಸೂರಿನ ಶ್ರೀ ಮನ್ನಹಾಜರು ಪಾಲ್ಗೊಂಡಿದ್ದರು. ಆಗ ಅವರು ಶ್ರೀ ಚನ್ನಬಸಪ್ಪನವರ ದಾನಗುಣಗಳನ್ನೂ, ದಾನಶೀಲತ್ವವನ್ನೂ ಮುಕ್ತಕಂಠದಿಂದ ಹೊಗಳಿದ್ದರಂತೆ. ಹೀಗೆ ಸಾಹುಕಾರ್ ಚನ್ನಬಸಪ್ಪನವರು ಪ್ರಜೆಗಳ ಸೇವೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. "ಜನಸೇವೆಯೇ ಜನಾರ್ಧನ ಸೇವೆ" ಎಂದು ನಂಬಿದ್ದ ಇವರ ಸೇವಾಕಾರ್ಯಗಳನ್ನು, ಕಾರ್ಯದಕ್ಷತೆಯನ್ನೂ ಗಮನಿಸಿದ ಮೈಸೂರು ಮಹಾರಾಜರೂ ಮತ್ತು ಆಗಿನ ಸರ್ಕಾರ ಇವರ ಬಹುಮುಖಿ ಸೇವೆಯನ್ನು ಮುಕ್ತಕಂಠದಿಂದ ಹೊಗಳಿರುವುದು ಸಂತೋಷದ ಸಂಗತಿಯಾಗಿದೆ. ಆದ್ದರಿಂದ ಶ್ರೀ ಚನ್ನಬಸಪ್ಪವನರು ಆಗಿನ ಸರ್ಕಾರದ ಮನ್ನಣೆಗೂ ಮಹಾರಾಜರವರ ಮನ್ನಣೆಗೂ ಪಾತ್ರರಾಗಿದ್ದರು. ಇದರ ಪರಿಣಾಮವಾಗಿ ಸಾಹುಕಾರ್ ಚನ್ನಬಸಪ್ಪನವರು ತಾಲ್ಲೋಕು ಬೋರ್ಡ್, ಜಿಲ್ಲಾ ಬೋರ್ಡ್, ಪ್ರಜಾಪ್ರತಿನಿಧಿ ಸಭೆ ಮತ್ತು ಸ್ಕಾಲರ್‌ಶಿಪ್ ಕಮಿಟಿಗಳ ಸದಸ್ಯರಾಗಿ ದುಡಿಯುವ ಅವಕಾಶ ಕಲ್ಪಿಸಿಕೊಂಡಿದ್ದರು. ತನ್ಮೂಲಕ ಬಡವರ ಸೇವೆ ಮಾಡುತ್ತಿದ್ದರು.

ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಎಸ್.ನಿಜಲಿಂಗಪ್ಪನವರು ತಮ್ಮ ವಿದ್ಯಾರ್ಥಿಜೀವನದ ಕಾಲದಲ್ಲಿ ಒಮ್ಮೆ ಮೈಸೂರಿಗೆ ಭೇಟಿ ಕೊಟ್ಟಿದ್ದರಂತೆ. ಅದು 1924ರ ಅಕ್ಟೋಬರ್‌ನಲ್ಲಿ. ಆಗ ಅವರು ಬಿ.ಎ. ತರಗತಿಯಲ್ಲಿ ತೇರ್ಗಡೆ ಹೊಂದಿದ್ದರಂತೆ. ಬಿ.ಎ. ಪ್ರಶಸ್ತಿ ಪತ್ರ ಪಡೆಯಲು ಮೈಸೂರಿಗೆ ಹೋಗಿದ್ದಾಗ ಕಬ್ಬಹಳ್ಳಿ ಸಾಹುಕಾರ್ ಚನ್ನಬಸಪ್ಪನವರ ಉಚಿತ ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯ ಹೂಡಿ ವಸತಿ ಊಟದ ಸೌಲಭ್ಯ ಪಡೆದುಕೊಂಡಿದ್ದರಂತೆ. ಆಗ ಅವರು ಚನ್ನಬಸಪ್ಪನವರನ್ನು ನೋಡಿದ್ದರಂತೆ. ಅವರು ಭೂಷಣದ ಆಳು, ನೋಡಿದರೆ ಅವರ ಬಗ್ಗೆ ಗೌರವ ಉಂಟಾಗುತ್ತಿತ್ತು ಎಂದು ಹೇಳಿ ಮೆಚ್ಚುಗೆ ವ್ಯಕ್ತಪಡಿಸಿದ್ದುದನ್ನು ಎಸ್.ನಿಜಲಿಂಗಪ್ಪನವರು ಸ್ಮರಿಸಿದ್ದಾರೆ. ಇವರ ಶಿಕ್ಷಣರಂಗದಲ್ಲಿ ಅದರಲ್ಲೂ ಬಡವಿದ್ಯಾರ್ಥಿಗಳ ಭವಿಷ್ಯದ ಉತ್ಕರ್ಷಕ್ಕಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ. ಬಡಜನರ ಆರೋಗ್ಯ ಕಾಪಾಡುವಲ್ಲಿ ಇವರ ಪರಿಶ್ರಮ ಸದಾ ಸ್ಮರಿಸುವಂತದ್ದಾಗಿದೆ.

"ಸರ್ವರಿಗೂ ಸಮಬಾಳು" ದೊರಕಬೇಕೆಂದು ಧ್ಯೇಯ ಹೊಂದಿದ್ದ ಇವರಿಗೆ "ಉದಾರ ಚರಿತಾನಾಂ ವಸುದೈವ ಕುಟುಂಬಕಂ" ಎಂಬ ಮಾತು ಅನ್ವಯಿಸುತ್ತದ್. ಇಂತಹ ಮಹತ್ಕಾರ್ಯಗಳನ್ನು ಕೈಗೊಂಡ ಚೇತನ ಬಹುಕಾಲ ಬದುಕಲಿಲ್ಲ. ವಿಧಿಯ ಅಟ್ಟಹಾಸವೇ ಬೇರೆಯಾಗಿತ್ತು. ಎಲ್ಲರ ಬಾಳಿಗೂ ತಂಪು ನೀಡಿ ಒಳ್ಳೆಯ ಫಲವನಿತ್ತು ಎಲ್ಲರ ತನುಮನಗಳನ್ನು ಸಂತೋಷಪಡಿಸಿದ್ದ ಸಾಹುಕಾರ್ ಚನ್ನಬಸಪ್ಪನವರನ್ನು ವಿಧಿ ತನ್ನೆಡೆಗೆ ಸೆಳೆದುಕೊಂಡಿತು. ಆಗ ಚನ್ನಬಸಪ್ಪನವರಿಗೆ ಸುಮಾರು 45 ವರ್ಷ ವಯಸ್ಸಾಗಿರಬೇಕು. 1926 ಫೆಬ್ರವರಿ 21ರಂದು ಅವರು ಇಹಲೋಕ ತ್ಯಜಿಸಿದರು. ಇಂತಹ ದಾನಶೀಲರಾದ ವ್ಯಕ್ತಿಯೊಬ್ಬರ ಅಕಾಲಮರಣದಿಂದ ಸಮಾಜಕ್ಕೆ ಅಪಾರ ನಷ್ಟವಾಯಿತು. ವಿದ್ಯಾಭ್ಯಾಸ, ಅನ್ನದಾನ ಮತ್ತು ಪರೋಪಕಾರ

ಗುಣಗಳಿಗೆ ಭೂಷಣಪ್ರಾಯರಾಗಿದ್ದ ಶ್ರೀ ಚನ್ನಬಸಪ್ಪನವರ ಆಶ್ರಯ ಪಡೆದವರೆಲ್ಲರೂ ಅವರ ಅಕಾಲಮರಣ ಆಘಾತವನ್ನುಂಟು ಮಾಡಿತ್ತು. ದಾನಶೀಲರಾದ ಕಬ್ಬಹಳ್ಳಿ ಸಾಹುಕಾರ್ ಚನ್ನಬಸಪ್ಪನವರು ಮೈಸೂರಿನತ್ತ ಪ್ರಯಾಣ ಮಾಡಿ ಬರುತ್ತಿದ್ದಾಗ ಸುಣ್ಣದ ಬೇಗೂರಿನ ಬಳಿ ಅಪಘಾತಕ್ಕೆ ಸಿಕ್ಕು ಮೃತರಾದರು. ಈ ವಾರ್ತೆಯನ್ನು ಅವರ ಬಳಿ ಆಶ್ರಯ ಪಡೆದಿದ್ದವರೊಬ್ಬರು ಮೈಸೂರಿನ ವಿದ್ಯಾರ್ಥಿನಿಲಯಕ್ಕೆ ಮುಟ್ಟಿಸಿದರು. ಈ ಸುದ್ದಿ ಆಗ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಆಗಿದ್ದ ಶ್ರೀ ಸಿದ್ಧರಾಮಣ್ಣನವರಿಗೂ ಮುಟ್ಟಿತು. ತಕ್ಷಣ ಅವರು ವಿದ್ಯಾರ್ಥಿನಿಲಯಕ್ಕೆ ತೆರಳಿದರು. ಆಗ ಹೊರೆಯಾಲದ ಹೆಚ್.ಸಿ.ಚನ್ನಬಸಪ್ಪನವರು ತಮ್ಮ ಸ್ನೇಹಿತರ ಜೊತೆ ಸೂಪರಿಂಟೆಂಡೆಂಟ್‌ರವರ ಬಳಿಗೆ ಹೋದರು. "ಪುಣ್ಯಾತ್ಮರು ಅಪಘಾತಕ್ಕೆ ಈಡಾಗಿ ಮರಣ ಹೊಂದಿದರು" ಎನ್ನುತ್ತಿದ್ದಾಗ ಎಲ್ಲರೂ ಗಳಗಳನೆ ಅತ್ತುಬಿಟ್ಟರಂತೆ. ಇದನ್ನು ನೋಡಿದ ಇತರರಿಗೂ ದುಃಖ ಉಮ್ಮಳಿಸಿ ಕಂಗಾಲಾಗಿದ್ದುದು ನೆನಪಿನಿಂದ ದೂರವಾಗದ ಸಂಗತಿಯಾಗಿದೆ. ಆ ಸಂದರ್ಭದಲ್ಲಿ ಆ ದುಃಖ ಸಹಿಸಿಕೊಳ್ಳುವ ಶಕ್ತಿಯನ್ನು ಮಾತೆ ಮಲ್ಲವ್ವೆಗೂ ಪುತ್ರ ಕೆ.ಸಿ.ಸುಬ್ಬಣ್ಣನವರಿಗೂ ಆ ಭಗವಂತ ಕೊಡಲೆಂದು ಎಲ್ಲರೂ ಪ್ರಾರ್ಥಿಸಿದರು. ಇಂದು ಅವರ ಭೌತಿಕ ದೇಹ ಮರೆಯಾಗಿರಬಹುದು. ಆದರೆ ಅವರು ತಮ್ಮ ತ್ಯಾಗಬಲದಿಂದ ನಿಸ್ವಾರ್ಥ ಸೇವೆಯಿಂದ ಮಾಡಿದ ಮಹೋನ್ನತ ಸೇವಾಕಾರ್ಯಗಳ ಫಲವನ್ನು ಎಲ್ಲರೂ ಅನುಭವಿಸುವಂತಾಗಿದೆ, ಇಂತಹ ಕಾಯಕಯೋಗಿ ಮತ್ತೊಮ್ಮೆ ಹುಟ್ಟಿಬರಲಿ.

ಕೆ.ಎಸ್.ನಾಗರತ್ನಮ್ಮನವರ ಪತಿ ದಿವಂಗತ ಕೆ.ಸಿ.ಸುಬ್ಬಣ್ಣನವರು

ದಿವಂಗತ ಕೆ.ಸಿ.ಸುಬ್ಬಣ್ಣನವರು ಸಾಹುಕಾರ್ ಚನ್ನಬಸಪ್ಪ ಮತ್ತು ಶರಣೆ ಮಲ್ಲವ್ವೆ ಇವರ ಏಕಮಾತ್ರ ಪುತ್ರರಾಗಿ 1911ರಲ್ಲಿ ಜನಿಸಿದರು. ಇವರು ತಮ್ಮ ತೀರ್ಥರೂಪರ ಸಮಾಜಸೇವಾ ಪರಂಪರೆಯನ್ನು ಮುಂದುವರಿಸಿ ಧರ್ಮಕಾರ್ಯ ಧುರೀಣರೆನಿಸಿ ತಮ್ಮ ನಿಸ್ವಾರ್ಥಪರ ತ್ಯಾಗದಿಂದ ಲೋಕಕ್ಕೆ ಆದರ್ಶಪ್ರಾಯರಾಗಿ ಮೆರೆದಿದ್ದಾರೆ. ತಮ್ಮ ನಡೆನುಡಿಗಳಿಂದ ಸಮಾಜದ ಎಲ್ಲರ ಪ್ರೀತಿಗೂ ಪಾತ್ರರಾಗಿದ್ದಾರೆ. ಇವರು ಉದಾರಚರಿತರೂ, ಉಪಮಾತೀತರೂ, ಬಡವರಬಂಧುವೂ ಆಗಿದ್ದು ದೈವಭಕ್ತರಾಗಿದ್ದರು. ತಮ್ಮ ಬಾಲ್ಯದಲ್ಲಿಯೇ ತಮ್ಮ ಬಳಿ ಇರುವ ಇಹವಸ್ತು ಬೇರೆಯವರ ಬಳಿ ಇಲ್ಲದಿದ್ದರೆ ಅದನ್ನು ಅವರಿಗೆ ಕೊಟ್ಟು ಮನೆಗೆ ಬರುತ್ತಿದ್ದುದು ಅವರ ಉದಾರ ಸ್ವಭಾವವನ್ನು ತೋರಿಸುತ್ತಿತ್ತು. ಕೆ.ಸಿ.ಸುಬ್ಬಣ್ಣನವರ ಪ್ರಾಥಮಿಕ ಶಿಕ್ಷಣ ಕಬ್ಬಹಳ್ಳಿಯಲ್ಲಿ ನಡೆದಿತ್ತು. ಆಗಲೇ ಇಂಥಹ ಸ್ವಭಾವವನ್ನು ಅವರು ರೂಢಿಸಿಕೊಂಡಿದ್ದರು. ತಂದೆತಾಯಿ ಬಾಲಕನ ಉದಾರಗುಣವನ್ನು ಕಂಡು ಹೆಚ್ಚು ಸಂತೋಷಪಡುತ್ತಿದ್ದರು. ಬಾಲಕ ಸುಬ್ಬಣ್ಣ ತೀಕ್ಷ್ಣಮತಿ ಉಳ್ಳವ, ಆಟಪಾಠದಲ್ಲಿ ಬೇರೆ ಬಾಲಕರಿಗಿಂತ ಮುಂದು. ತಾನು ಶ್ರೀಮಂತನ ಮಗ ಎಂಬ ಅಹಂ ತೊರೆದು ಎಲ್ಲರೊಡನೆ ಕಲಿಯುತ್ತಿದ್ದ. ಶಾಲೆಯಲ್ಲಿ ಕಲಿಯುವಾಗ ಅಧ್ಯಾಪಕರು ಹೇಳುತ್ತಿದ್ದ ವಿಷಯಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಆ ಮೂಲಕ ತನ್ನ ಜ್ಞಾನಶಕ್ತಿಯನ್ನು ಹೆಚ್ಚಿಸಿಕೊಂಡಿದ್ದ. ಕ್ರಿ.ಶ. 1920ರ ವೇಳೆಗೆ ಈ ಬಾಲಕನನ್ನು ಅವರ ತಂದೆಯವರು ಮಗನ ಮಾಧ್ಯಮಿಕ ಶಿಕ್ಷಣ ಮುಗಿದ ನಂತರ ಮೈಸೂರಿನ ಪ್ರತಿಷ್ಠಿತ ಶಾಲೆಗೆ ಮುಂದಿನ ವ್ಯಾಸಂಗಕ್ಕಾಗಿ ಸೇರಿಸಬೇಕಾಗಿ ಬಂತು. ಮೈಸೂರಿನಲ್ಲಿ

ಆಗಲೇ ತಮ್ಮ ತಂದೆಯವರು ಒಂದು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದ್ದರು. ತಂದೆಯವರು ಸ್ಥಾಪಿಸಿದ್ದ ವಿದ್ಯಾರ್ಥಿನಿಲಯದಲ್ಲೇ ಇದ್ದುಕೊಂಡು ಅವರು S.S.L.C. ಪರೀಕ್ಷೆಯವರೆಗೂ ವಾಸ್ತವ್ಯ ಹೂಡಿದ್ದರು. ಆದರೆ ವಿಧಿಯ ಆಟವೇ ಬೇರೆಯಾಗಿತ್ತು. ನಾವೊಂದು ಬಗೆದರೆ ದೈವವು ಬೇರೊಂದು ಬಗೆಯುತ್ತದೆ. ವ್ಯಾಸಂಗ ಮಾಡಿ ಬುದ್ಧಿವಂತನಾಗಬೇಕೆಂಬ ಬಯಕೆಯನ್ನು ಹೊಂದಿದ್ದ ಬಾಲಕನ ಕನಸು ನನಸಾಗುವ ಕಾಲ ಕೂಡಿ ಬರಲೇ ಇಲ್ಲ. S.S.L.C. ತರಗತಿಯಲ್ಲಿ ಓದುತ್ತಿದ್ದಾಗಲೇ ಬಾಲಕ ಸುಬ್ಬಣ್ಣನ ತಂದೆ ಸಾಹುಕಾರ್ ಚನ್ನಬಸಪ್ಪನವರು ಲಿಂಗೈಕ್ಯರಾದರು. ತಂದೆಯವರ ಮರಣದಿಂದ ಕೆ.ಸಿ.ಸುಬ್ಬಣ್ಣನವರು ಆಘಾತಕ್ಕೊಳಗಾದುರ. ವ್ಯಾಸಂಗ ಮಾಡುವ ಮಹದಾಸೆಯನ್ನು ತೊರೆದು ಸ್ವಂತ ಊರಾದ ಕಬ್ಬಹಳ್ಳಿಗೆ ಮರಳಿದರು. ತಮ್ಮ ಕನಸು ಛಿದ್ರವಾಗಲು ವಿಧಿಯ ಲೀಲೆಯೇ ಕಾರಣವೆಂದು ಅರಿತು ಸಂಸಾರದ ಜವಾಬ್ದಾರಿಯ ನೊಗ ಹೊರಲು ತಯಾರಾದರು. ಅವರು ವ್ಯಾಸಂಗ ಮುಂದುವರಿಸಬಹುದಾಗಿತ್ತು. ತಾವು ಪಟ್ಟಣದಲ್ಲೇ ಉಳಿದರೆ ಊರಿನಲ್ಲಿ ತಾಯಿ ಒಬ್ಬರೇ ಇರಬೇಕಾಗುತ್ತದೆ. ಅವರ ಮನಸ್ಸು ನೋಯಿಸುವುದು ಸರಿಯಲ್ಲವೆಂದು ಬಗೆದು ವಿದ್ಯಾಭ್ಯಾಸಕ್ಕೆ ತಿಲಾಂಜಲಿ ಹೊಡೆಯಬೇಕಾಯಿತು. ಮನೆ ಸೇರಿದ ಸುಬ್ಬಣ್ಣನಿಗೆ ಸುಮಾರು ಹದಿನೆಂಟು ವರ್ಷವಾಗಿತ್ತು. ಆಗಲೇ ಜೀವನ ಅನುಭವಕ್ಕೆ ತಯಾರಾಗಬೇಕಾಯಿತು. ತಮ್ಮ ಮನೆಯಲ್ಲಿ ಆಗಲೇ ಅನೇಕ ವಿದ್ಯಾರ್ಥಿಗಳಿಗೆ ಶರಣೆ ಮಲ್ಲವ್ವೆ ಆಶ್ರಯ ಕೊಟ್ಟಿದ್ದರು. ತಮ್ಮ ಮನೆಯಲ್ಲಿದ್ದ ಬೇರೆಯವರ ಮಕ್ಕಳಿಗೆ ಅಶನ ವಸತಿ ಕಲ್ಪಿಸಿ ತಾಯಿಯಂತೆ ಎಲ್ಲಾ ಮಕ್ಕಳಿಗೂ ವಾತ್ಸಲ್ಯ ಧಾರೆ ಎರೆಯುತ್ತಿದ್ದರು. ಮಕ್ಕಳ ವ್ಯಾಸಂಗದ ಕಡೆ ಹೆಚ್ಚು ಗಮನ ಕೊಡುತ್ತಿದ್ದರು. ಆ ಮಮತೆಯ ಮಡಿಲಲ್ಲಿ ಬೆಳೆದ ಅನೇಕರು ಧನ್ಯರಾಗಿದ್ದಾರೆ. ಈ ಮಕ್ಕಳ ವ್ಯಾಸಂಗ ಮುಂದುವರಿಸಲು ಸುಬ್ಬಣ್ಣನವರ ಶ್ರಮಿಸಬೇಕಾಯಿತು. ಮಲ್ಲವ್ವೆಯು ತವರು ಮನೆಯವರು ಬಾಲಕನ ಬೆಳವಣಿಗೆಗೆ ಪ್ರೋತ್ಸಾಹ ಕೊಡುತ್ತಿದ್ದರು. ಇದರಿಂದಾಗಿ ಮಲ್ಲವ್ವೆಯು ಅನ್ನದಾಸೋಹವನ್ನು ಮುಂದುವರೆಸುತ್ತಿದ್ದರು. ತಮ್ಮ ಮನೆಯಲ್ಲಿದ್ದ ವಿದ್ಯಾರ್ಥಿಗಳಿಗೆ ಅನ್ನವನ್ನಿಕ್ಕಿದ ತಾಯಿಯೆಂದೇ ಖ್ಯಾತಿ ಗಳಿಸಿದ್ದರು.

ಕೆ.ಸಿ.ಸುಬ್ಬಣ್ಣನವರಿಗೆ ಆ ವೇಳೆಗೆ 18 ವರ್ಷ ಪೂರೈಸಿತ್ತು. ತಾಯಿ ಮಲ್ಲವ್ವೆ ಮಗನ ಮದುವೆಗೆ ಸಿದ್ಧತೆ ನಡೆಸುತ್ತಿದ್ದರು. ಚಾಮರಾಜನಗರ ತಾಲ್ಲೋಕಿನ ಸಂತೆಮರಹಳ್ಳಿ ಗ್ರಾಮದ ಶ್ರೀಮಂತ ಮನೆತನದ ಪಟೇಲ್ ಪುಟ್ಟಸ್ವಾಮಿಯವರ ಮಗಳು ಸುಬ್ಬಮ್ಮನವರೊಡನೆ 1929ರಲ್ಲಿ ಕೆ.ಸಿ.ಸುಬ್ಬಣ್ಣನವರ ವಿವಾಹ ನೆರವೇರಿತು. ಮಗನ ವಿವಾಹದಿಂದ ಪತಿವಿಯೋಗದ ಕೊರಗು ಸ್ವಲ್ಪ ಕರಗಿ ತಾಯಿಗೆ ಸಂತೋಷ ದೊರಕಿರಬಹುದು. ಹೀಗೆ ಸುಬ್ಬಣ್ಣನವರು ವೈವಾಹಿಕ ದೋಣಿಯಲ್ಲಿ ಸಾಗುತ್ತಿದ್ದಾಗ 1933ರಲ್ಲಿ ಸುಬ್ಬಣ್ಣನವರ ತಾಯಿ ಮಲ್ಲವ್ವೆ ಮರಣ ಹೊಂದಿದರು. ಆಗ ಸುಬ್ಬಣ್ಣನವರು ದಾರಿ ಕಾಣದಾದರು. ಒಂದು ಕಡೆ ತಂದೆಯ ಅಕಾಲ ಮರಣ, ಮತ್ತೊಂದು ಕಡೆ ತಾಯಿಯನ್ನು ಕಳೆದುಕೊಂಡ ಕೊರಗು, ಜೊತೆಗೆ ಅನುಭವ ಇಲ್ಲದ ಪತ್ನಿ, ಇವೆಲ್ಲವೂ ಅವರನ್ನು ಕಾಡಿರಬೇಕು. ಈ ಕೊರಗಿನ ಕಂದರದಲ್ಲಿ ಜೀವನ ಸಾಗಿಸುತ್ತಿದ್ದ ಸುಬ್ಬಣ್ಣನವರಿಗೆ ಮತ್ತೊಂದು ಆಘಾತ ಕಾದಿತ್ತು. ತಾಯಿ ತೀರಿಕೊಂಡ ಒಂದು ವರ್ಷಕ್ಕೆ ಬಾಳಸಂಗಾತಿ ಸುಬ್ಬಮ್ಮ 1934ರಲ್ಲಿ ಮರಣ ಹೊಂದಿದರು. ಹೀಗೆ ಅವರ ಸಾಂಸಾರಿಕ ಜೀವನ ಕೇವಲ ನಾಲ್ಕು ಐದು ವರ್ಷಗಳಿಗೆ ಸೀಮಿತವಾಗಿದ್ದು ಅಪಾರ ನೋವನ್ನೇ ಅವರು ಅನುಭವಿಸಿದರು.

1934ರಲ್ಲಿ ಕೆ.ಸಿ.ಸುಬ್ಬಣ್ಣನವರು ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಚೌಳಗೆರೆಯ ಸಿ.ರಾಮಲಿಂಗೇಗೌಡರ ಹನ್ನೊಂದು ವರ್ಷದ ಹಿರಿಯ ಮಗಳಾದ ನಾಗರತ್ನಮ್ಮನವರನ್ನು ವಿವಾಹವಾದರು. ಹೀಗೆ ಕೆ.ಸಿ.ಸುಬ್ಬಣ್ಣನವರು ನಾಗರತ್ನಮ್ಮನವರನ್ನು ವಿಧಿವತ್ತಾಗಿ ತಮ್ಮ 2ನೇ ಪತ್ನಿಯನ್ನಾಗಿ ಸ್ವೀಕರಿಸಿದರು.

ಕೆ.ಸಿ.ಸುಬ್ಬಣ್ಣನವರು ತಮ್ಮ ತಂದೆಯ ಅಗಲಿಕೆಯಿಂದ ಧೃತಿಗೆಡದೆ ತಮ್ಮ ತಂದೆಯವರು ಮಾಡಿದ್ದ ಸಮಾಜಸೇವೆಯನ್ನು ಮುಂದುವರಿಸುವುದರ ಜೊತೆಗೆ ಅವರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಇವರು ತಮ್ಮ ನಿಸ್ವಾರ್ಥ ತ್ಯಾಗದಿಂದ ಮಾಡಿದ ಕೆಲಸದ ಪರಿಣಾಮವಾಗಿ ಅನೇಕ ಸಂಘಸಂಸ್ಥೆಗಳ ಸದಸ್ಯರಾಗಿದ್ದರು. ಆಗಿನ ಜಿಲ್ಲಾ ಬೋರ್ಡ್, ಪ್ರಜಾಪ್ರತಿನಿಧಿ ಸಭೆ, ಮೈಸೂರು ರೈಲ್ವೆ ಅಡ್ವೈಜರ್ ಬೋರ್ಡ್, ಸ್ಕಾಲರ್‌ಶಿಪ್ ಕಮಿಟಿಗಳ ಸದಸ್ಯರಾಗುವುದರ ಜೊತೆಗೆ 1938ರಿಂದ ಸತತವಾಗಿ 9 ವರ್ಷ ಕಾಲ ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು[7] ಪಿರಿಯಾಪಟ್ಟಣದ ರಾಜಕೀಯ ಮುತ್ಸದ್ದಿ ಹೆಚ್.ಎಂ.ಚನ್ನಬಸಪ್ಪನವರನ್ನು ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಸೋಲಿಸಿ ಮೇಲುಗೈ ಸಾಧಿಸಿದ್ದರು.

ಮೈಸೂರು ಕಾಂಗ್ರೆಸ್ಸಿನ ಅನೇಕ ಮುಖಂಡರು ಜಿಲ್ಲೆಯಲ್ಲಿ ಪ್ರವಾಸ ಮಾಡಿ ತೆರಕಣಾಂಬಿ ಸಂತೆ ಮೈದಾನದಲ್ಲಿ ಏರ್ಪಡಿಸಿದ್ದ ಕಾಂಗ್ರೆಸ್ ಸಮಾವೇಶಕ್ಕೆ ತಲುಪಿದ್ದರು. ಅದೊಂದು ದೊಡ್ಡಸಭೆಯಾಗಿತ್ತು. ಮುಖಂಡರುಗಳು ಭಾಷಣ ಮಾಡಿ ಮುಗಿಸಿದ ನಂತರ ಕಬ್ಬಹಳ್ಳಿಯ ಕೆ.ಸಿ.ಸುಬ್ಬಣ್ಣನವರನ್ನು ಭೇಟಿಯಾಗಿದ್ದರಂತೆ. ಆ ಮುಖಂಡರುಗಳ ಪೈಕಿ ಶ್ರೀ ಎಸ್.ನಿಜಲಿಂಗಪ್ಪನವರು, ಶ್ರೀ ಹೆಚ್.ಸಿ.ದಾಸಪ್ಪನವರು, ಶ್ರೀ ಹೆಚ್.ಸಿದ್ಧಯ್ಯನವರು ಪ್ರಮುಖರಾಗಿದ್ದರು. ಇವರೆಲ್ಲರೂ ಸುಬ್ಬಣ್ಣನವರನ್ನು ಮಾತಿಗೆಳೆದು "ನೀವು ಕಾಂಗ್ರೆಸ್ ಪಕ್ಷಕ್ಕೆ ಏಕೆ ಸೇರಬಾರದು" ಎಂದು ಒತ್ತಾಯ ಮಾಡಿದರು. ಇದರಿಂದ ಸುಬ್ಬಣ್ಣನವರು ರಾಜಕೀಯ ಕ್ಷೇತ್ರದಲ್ಲಿ ಎಂಥಹ ಸ್ಥಾನಮಾನ ಗಳಿಸಿದರೆಂಬುದು ತಿಳಿದುಬರುತ್ತದೆ.

ಕೆ.ಸಿ.ಸುಬ್ಬಣ್ಣನವರು ಆಕರ್ಷಕ ವ್ಯಕ್ತಿತ್ವ, ಸ್ನೇಹ ಪರ, ಸಭ್ಯತೆ ಮತ್ತು ಸಂಸ್ಕೃತಿಗಳು ಎದ್ದು ಕಾಣುತ್ತಿದ್ದವು. ಆಗ ಆವರು "ನನಗೆ ಕಾಂಗ್ರೆಸ್ಸಿನಲ್ಲಿ ವಿಶ್ವಾಸವಿದೆ, ಭಕ್ತಿಯಿದೆ, ಸೇರಲು ಇಷ್ಟವೂ ಇದೆ. ನಾನು ಯಾಕೆ ಕಾಂಗ್ರೆಸ್ಸಿಗೆ ಸೇರಿಲ್ಲವೆಂಬುದನ್ನು ಮೈಸೂರು ಜಿಲ್ಲೆಯ ಕಾಂಗ್ರೆಸ್ ಮುಖಂಡರೇ ಹೇಳಲಿ" ಎಂದು ತಿಳಿಸಿದ್ದರಂತೆ. ಹೀಗೆ ಎಸ್.ನಿಜಲಿಂಗಪ್ಪನವರು ಅವರನ್ನು ನೋಡಿದ್ದು ಒಂದೇ ಬಾರಿ. ಈಚೆಗೆ ಸುಬ್ಬಣ್ಣನವರನ್ನು ನಿಜಲಿಂಗಪ್ಪನವರು ಮರೆತಿರಲಿಲ್ಲ. ಸುಬ್ಬಣ್ಣನವರನ್ನು ನಿಜಲಿಂಗಪ್ಪನವರು ಮರೆತಿರಲಿಲ್ಲ. ಸುಬ್ಬಣ್ಣನವರಲ್ಲಿ ಅಂಥಹ ದೊಡ್ಡತನ ಎದ್ದು ಕಾಣುತ್ತಿತ್ತು. ಅವರು ಮೈಸೂರು ಜಿಲ್ಲೆಯ ಜನತೆಯ ಪ್ರೀತಿ ವಿಶ್ವಾಸಗಳನ್ನು ಚಿಕ್ಕವಯಸ್ಸಿನಲ್ಲೇ ಗಳಿಸಿಕೊಂಡಿದ್ದರು.

ಕೆ.ಸಿ.ಸುಬ್ಬಣ್ಣನವರು ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿದ್ದ ಕಾಲವದು. 1930ನೇ ಇಸವಿ ಬಸವಜಯಂತಿಯ ದಿನ ಹೆಚ್.ಸಿ.ಚನ್ನಬಸಪ್ಪ ಎಂಬ ಬಾಲಕ ತನ್ನ ಹುಟ್ಟೂರಾದ ಹೊರೆಯಾಲ ಗ್ರಾಮದಿಂದ ಹೊರಟು ಕಬ್ಬಹಳ್ಳಿ ಗ್ರಾಮಕ್ಕೆ ಬಂದು ಅಲ್ಲಿನ ಮಾಧ್ಯಮಿಕ ಶಾಲೆಗೆ ಸೇರಿದನು. ಆ ಬಾಲಕ ಸಾಧಾರಣ ರೈತಕುಟುಂಬದಿಂದ ಬಂದವನಾಗಿದ್ದ. ಆತನ ಆರ್ಥಿಕ ಸ್ಥಿತಿ ಅಷ್ಟಕಷ್ಟೆ. ಆದ್ದರಿಂದ ತನ್ನ ಅಶನ ವಸತಿಗಳಿಗಾಗಿ

ಸಾಹುಕಾರ್ ಚನ್ನಬಸಪ್ಪನವರ ಮನೆಯ ಆಶ್ರಯ ಪಡೆದನು. ಅಷ್ಟರಲ್ಲಾಗಲೇ ಚನ್ನಬಸಪ್ಪನವರು ಲಿಂಗೈಕ್ಯರಾಗಿದ್ದಾರೆಂಬುದನ್ನು ಹಿಂದೆಯೇ ತಿಳಿಸಲಾಗಿದೆ. ಮನೆಯ ಆಡಳಿತವೆಲ್ಲವೂ ಚನ್ನಬಸಪ್ಪನವರ ಧರ್ಮಪತ್ನಿ ಮಲ್ಲವ್ವೆಯವರ ಕೈಯಲ್ಲಿ ಇತ್ತು. ಸುಬ್ಬಣ್ಣನವರು ತಾಯಿಯ ಆಸರೆಯಲ್ಲೇ ಸಾಮಾಜಿಕ ಸೇವೆ ಮಾಡುತ್ತಿದ್ದರು. ಕರುಣಾಮಯಿ ತಾಯಿ ಮಲ್ಲವ್ವೆ ತಮ್ಮ ಮನೆಯಲ್ಲಿದ್ದ ವಿದ್ಯಾರ್ಥಿಗಳಿಗೆ ವಾತ್ಸಲ್ಯಧಾರೆ ಹರಿಸುತ್ತಿದ್ದಂತೆಯೇ ಸುಬ್ಬಣ್ಣನವರು ವಿದ್ಯಾರ್ಥಿಗಳನ್ನು ಕಂಡರೆ ಪ್ರೀತಿಯಿಂದ ಉಪಚರಿಸುತ್ತಿದ್ದರು. ಹೊರೆಯಾಲದಿಂದ ಬಂದ ವಿದ್ಯಾರ್ಥಿ ಹೆಚ್.ಸಿ. ಚನ್ನಬಸಪ್ಪ ಕಬ್ಬಹಳ್ಳಿಯ ಮಾಧ್ಯಮಿಕ ಶಾಲೆಯಲ್ಲಿ ಲೋಯರ್ ಸೆಕಂಡರಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದ ಆತನನ್ನು ಕೆ.ಸಿ.ಸುಬ್ಬಣ್ಣನವರೇ ಮೈಸೂರಿಗೆ ಕರೆದುಕೊಂಡು ಹೋಗಿ ಮರಿಮಲ್ಲಪ್ಪನವರ ಪ್ರೌಢಶಾಲೆಗೆ ಸೇರಿಸಿದ್ದರು. ಅದಾದನಂತರ ತಮ್ಮ ತಂದೆ ಚನ್ನಬಸಪ್ಪನವರು ಝಾನ್ಸಿಲಕ್ಷ್ಮಿಬಾಯಿ ರಸ್ತೆಯಲ್ಲಿ ಪ್ರಾರಂಭಿಸಿದ್ದ ಕಬ್ಬಹಳ್ಳಿ ವಿದ್ಯಾರ್ಥಿನಿಲಯದಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿಕೊಟ್ಟಿದ್ದರು. ಹೆಚ್.ಸಿ.ಚನ್ನಬಸಪ್ಪ ಓದಿ 1937ರಲ್ಲಿ S.S.L.C. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು ನಂತರ ಕೆ.ಸಿ. ಸುಬ್ಬಣ್ಣನವರೇ ಆತನನ್ನು ಕಾಲೇಜಿಗೆ ಸೇರಿಸಿದ್ದರು. ಆತ ಇಂಟರ್‌ಮೀಡಿಯಟ್ ಕೋರ್ಸ್ ಮುಗಿಸಿದೊಡನೆ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಕೆಲಸಕ್ಕೆ ಸೇರಿಕೊಂಡು ಸ್ವತಂತ್ರ ಜೀವನ ನಡೆಸುತ್ತಿದ್ದ. ಹೀಗೆ ಆತನ ಸ್ವತಂತ್ರ ಜೀವನಕ್ಕೆ ಕೆ.ಸಿ. ಸುಬ್ಬಣ್ಣನವರು ಅನುವು ಮಾಡಿಕೊಟ್ಟಿದ್ದ ಸಂಗತಿ ಮೆಚ್ಚುವಂತದಾಗಿದೆ. ಹೀಗೆ ಸುಬ್ಬಣ್ಣನವರ ಆಶ್ರಯದಿಂದಾಗಿ ಆತನ ಬಾಳುಬಂಗಾರವಾಯಿತು. ಅಸನವಾಯಿತು. ಅವರು ನಿವೃತ್ತಿ ಹೊಂದಿದ ನಂತರವೂ ಕಬ್ಬಹಳ್ಳಿ ದಾನಿಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತಿದ್ದರಂತೆ. ಹೀಗೆಯೇ ಅನೇಕ ವಿದ್ಯಾರ್ಥಿಗಳ ಬಾಳು ಅಸನವಾಗಲು ಈ ದಾನಿಗಳು ಕಾರಣವಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಕೆ.ಸಿ.ಸುಬ್ಬಣ್ಣನವರ ಧರ್ಮಪತ್ನಿ ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರೂ ಸಹ ಹೊರೆಯಾಲದ ಹೆಚ್.ಸಿ.ಚನ್ನಬಸಪ್ಪನವರನ್ನು ವಾತ್ಸಲ್ಯದಿಂದ ಒಡಹುಟ್ಟಿದವರಂತೆ ನೋಡಿಕೊಳ್ಳುತ್ತಿದ್ದರೆಂಬುದನ್ನು ನೋಡಿದರೆ ಅಮ್ಮನವರದು ಎಂತಹ ಕರುಣಾಮಯಿ ಹೃದಯ ಎಂದು ತಿಳಿಯುವುದು.

ಕೆ.ಸಿ.ಸುಬ್ಬಣ್ಣನವರು ತಮ್ಮ ಕಾರ್ಯಗೌರವಗಳ ನಡುವೆ ತಂದೆಯವರು ಕೈಗೊಂಡಿದ್ದ ಶಿಕ್ಷಣದ ಅಭಿವೃದ್ಧಿ ಕಾರ್ಯಗಳನ್ನು ಮರೆತಿರಲಿಲ್ಲ. ಸುಬ್ಬಣ್ಣನವರು ಮೈಸೂರಿಗೆ ಹೋಗಿ ನೆಲೆಸಿದ ಮೇಲೆ ತಂದೆ ತಾಯಿಗಳು ಆಶ್ರಯ ನೀಡಿದ್ದ ಮಕ್ಕಳ ಬಗ್ಗೆ ಯೋಚಿಸತೊಡಗಿದರು. ಅದಕ್ಕಾಗಿ ಅವರು ಕಬ್ಬಹಳ್ಳಿಯಲ್ಲಿ ಒಂದು ಪ್ರತ್ಯೇಕ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು. ಕಾಲಾನಂತರ ಆ ವಿದ್ಯಾರ್ಥಿನಿಲಯವನ್ನು ಪಡಗೂರು ಶ್ರೀ ಮದ್ದಾನೇಶ್ವರ ಮಠದ ಶ್ರೀ ನಿರಂಜನ ಪ್ರಣವ ಸ್ವರೂಪಿ ಶಿವಕುಮಾರ ಸ್ವಾಮಿಗಳವರ ನೇತೃತ್ವದ ವಿದ್ಯಾರ್ಥಿನಿಲಯವನ್ನಾಗಿ ಮಾರ್ಪಾಡು ಮಾಡಿದರು. ಈ ನಿಲಯ ಪ್ರಾರಂಭವಾದ ಮೇಲೆ ಬೇರೆ ಗ್ರಾಮಗಳಿಂದ ಬಂದು ಮಾಧ್ಯಮಿಕ ಶಾಲೆಗೆ ಸೇರುತ್ತಿದ್ದ ವಿದ್ಯಾರ್ಥಿಗಳಿಗೆ ಅನುಕೂಲವಾಗಿತ್ತು. ಜೊತೆಗೆ ಆ ವಿದ್ಯಾರ್ಥಿನಿಲಯದ ನಿರ್ವಹಣೆಗೆ ಬೇಕಾದ ಹಣವನ್ನು ದವಸಧಾನ್ಯಗಳನ್ನು ಕೊಡಲಾರಂಭಿಸಿದರು. ಜೊತೆಗೆ ತಮ್ಮ ತಂದೆಯವರು ಮೈಸೂರಿನಲ್ಲಿ ನಿರ್ಮಿಸಿದ್ದ ವಿದ್ಯಾರ್ಥಿನಿಲಯದ

ವಿದ್ಯಾರ್ಥಿಗಳ ಅನುಕೂಲಕ್ಕಾಗಿ 10 ಸ್ನಾನದ ಗೃಹಗಳನ್ನು ಕಟ್ಟಿಸಿದರು. ಮೈಸೂರಿಗೆ ವಿದ್ಯಾಭ್ಯಾಸಕ್ಕಾಗಿ ತೆರಳುತ್ತಿದ್ದ ವಿದ್ಯಾರ್ಥಿಗಳಿಗೆ ತಮ್ಮ ತಂದೆಯವರು ತೆರೆದಿದ್ದ ನಿಲಯದಲ್ಲಿ ಉಚಿತ ವಸತಿ ವ್ಯವಸ್ಥೆ ಮಾಡಲಾಗಿತ್ತು. ಆದರೆ ಕೆ.ಸಿ.ಸುಬ್ಬಣ್ಣನವರು ಉಚಿತ ವಸತಿ ವ್ಯವಸ್ಥೆಯ ಜೊತೆಗೆ ಊಟದ ವ್ಯವಸ್ಥೆ ಮಾಡಲು ಗುಂಡ್ಲುಪೇಟೆ ಸಮೀಪವಿರುವ ಕೋಡಹಳ್ಳಿ ಗ್ರಾಮಕ್ಕೆ ಸೇರಿದ 60 ಎಕರೆ ನೀರಾವರಿ ಸೌಲಭ್ಯವಿರುವ ಭೂಮಿಯನ್ನು ನಿಲಯಕ್ಕೆ ದಾನ ಮಾಡಿದರು. ಇದರಿಂದಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಮೈಸೂರಿಗೆ ಹೋಗಿ ವಿದ್ಯಾವಂತರಾಗಲು ಅನುಕೂಲವಾಯಿತು. ಕಾಲಕ್ರಮೇಣ ಈ 60 ಎಕರೆ ಭೂಮಿಯನ್ನೇ ಅಜುಬಾಜಿನ ಜನರು ಉಳುಮೆ ಮಾಡಲು ಆರಂಭಿಸಿದ್ದರು. ಇದು ಮುಂದುವರಿಯುತ್ತಲೇ ಇತ್ತು. ಕಾಲಕ್ರಮೇಣ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಡಿ. ದೇವರಾಜು ಅರಸ್‌ರವರು ಕ್ರಾಂತಿಕಾರಕ ಬದಲಾವಣೆಗಳನ್ನು ಜಾರಿಗೆ ತಂದು ಉಳುವವನೇ ಭೂಮಿಯ ಒಡೆಯ ಎಂಬ ಕಾನೂನು ಜಾರಿಗೊಳಿಸಿದರು. ಇದರಿಂದಾಗಿ 60 ಎಕರೆ ಭೂಮಿ ಉಳುವವರ ಪಾಲಾಯಿತು. ಇದರಿಂದಾಗಿ ವಿದ್ಯಾರ್ಥಿನಿಲಯಕ್ಕೆ ಬರುತ್ತಿದ್ದ ಭತ್ತದ ಸರಬರಾಜು ನಿಂತಿತು. ತತ್ಪರಿಣಾಮ ವಿದ್ಯಾರ್ಥಿಗಳಿಗೆ ಒದಗಿಸುತ್ತಿದ್ದ ಊಟದ ವ್ಯವಸ್ಥೆ ಕ್ರಮೇಮ ಸ್ಥಗಿತಗೊಂಡಿತು[8].

ಹೀಗೆ ಅನ್ನದಾನ ಮಾಡುವುದು, ಶಾಲೆಗಳನ್ನು ಸ್ಥಾಪಿಸುವುದು, ಸಮಾಜಸೇವೆ ಮಾಡುವುದು, ಈ ಘನತರ ಸೇವೆಗಳ ಜೊತೆಗೆ ಧಾರ್ಮಿಕ ಚಿಂತನೆಯ ಕಡೆಗೂ ಅವರ ಮನಸ್ಸು ಹರಿದಿತ್ತು. ಕೆ.ಸಿ.ಸುಬ್ಬಣ್ಣನವರ ಸಮಕಾಲೀನರಲ್ಲಿ ಶ್ರೀಮಾನ್ ಬಿ.ಎಸ್.ಪುಟ್ಟಸ್ವಾಮಿಯವರು ಒಬ್ಬರು. ಅವರ ಸಲಹೆ ಮೇರೆಗೆ ವೀರಶೈವ ಸಮ್ಮೇಳನಗಳನ್ನು ನಡೆಸಿದರು. ಈ ಸಮ್ಮೇಳನವು ಮೈಸೂರು ಮಹಾರಾಜರವರ ಸರ್ಕಾರದಲ್ಲಿ ದಿವಾನರಾಗಿದ್ದ ಶ್ರೀ ಮಿರ್ಜಾ ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೆಲವು ಕಡೆ ರಸ್ತೆಗಳ ನಿರ್ಮಾಣಕ್ಕೆ ಇವರು ಕೈಹಾಕಿದ್ದರು. ಇದರಿಂದಾಗಿ ಅನೇಕರು ತಮ್ಮ ಮನೆಗಳನ್ನು ಕಳೆದುಕೊಂಡರು. ಅವರೆಲ್ಲರಿಗೂ ಸಾಂತ್ವನ ಹೇಳಿ ಸುಬ್ಬಣ್ಣನವರು ತಮ್ಮ ಸ್ವಂತ ಜಮೀನಿನಲ್ಲಿ ನಿವೇಶನಗಳನ್ನು ಕೊಟ್ಟು ಮನೆ ಕಟ್ಟಿಸಿಕೊಳ್ಳಲು ಧನಸಹಾಯ ಮಾಡಿದರು. ಹೀಗೆ ಸುಬ್ಬಣ್ಣನವರ ಸಾಮಾಜಿಕ ಸೇವಾಕಾರ್ಯ ಅವಿರತವಾಗಿ ನಡೆಯಿತೆಂಬುದನ್ನು ನಾಡಿನ ಜನತೆ ಇಂದಿಗೂ ಸ್ಮರಿಸಬೇಕಾಗಿತ್ತು.

ಕಾಲಚಕ್ರ ತಿರುಗುತ್ತಲೇ ಇತ್ತು. ಆಗಲೇ ಹಗಲಿರುಳು ಸಮಾಜಸೇವೆ ಮಾಡುತ್ತಿದ್ದ ಸುಬ್ಬಣ್ಣನವರ ಆರೋಗ್ಯ ಹದಗೆಡಲು ಪ್ರಾರಂಭವಾಗಿತ್ತು. ಪತ್ನಿ ನಾಗರತ್ನಮ್ಮನವರು ಪತಿಯ ಆರೋಗ್ಯ ಸುಧಾರಿಸಲು ಮಾಡಿದ ಪ್ರಯತ್ನಗಳು ಫಲ ನೀಡಲಿಲ್ಲ. ಅನಾರೋಗ್ಯದಿಂದ ಬಳಲುತ್ತಿದ್ದ ಕೆ.ಸಿ.ಸುಬ್ಬಣ್ಣನವರು ತಾವು ಬದುಕುವುದಿಲ್ಲವೆಂಬ ಸತ್ಯವನ್ನು ಅರಿತಿದ್ದಂತೆ ತೋರುತ್ತದೆ. ಅವರು ದಾನಿಗಳ ಕುಟುಂಬಕ್ಕೆ ಉತ್ತರಾಧಿಕಾರಿಗಳಿಲ್ಲದೆ ಅನಾಥವಾಗಬಾರದೆಂದು ಯೋಚಿಸುತ್ತಿದ್ದರು. ತಮ್ಮ ತಂಗಿಯನ್ನು ಕೊಳ್ಳೇಗಾಲ ತಾಲ್ಲೂಕಿನ ಪಾಳ್ಯ ಗ್ರಾಮದ ಶಿವನಂಜಪ್ಪನವರಿಗೆ ಕೊಟ್ಟು ವಿವಾಹ ಮಾಡಿದ್ದರು. ರಕ್ತಸಂಬಂಧ ಎಂದೆಂದಿಗೂ ದೂರವಾಗುವುದಿಲ್ಲ ಎಂಬುದನ್ನು ಅರಿತ ಕೆ.ಸಿ.ಸುಬ್ಬಣ್ಣನವರು ತಾವು ಮರಣ ಹೊಂದುವುದಕ್ಕೆ ಮೊದಲು ಪತ್ನಿ ನಾಗರತ್ನಮ್ಮನವರ ತೊಳಲಾಟದ ಒಪ್ಪಿಗೆಯ ಮೇರೆಗೆ ತಮ್ಮ ತಂಗಿ ಪಾಳ್ಯದ ಸುಬ್ಬಮ್ಮನವರ

ಮಕ್ಕಳುಗಳಿಗೆ ತಮಗಿದ್ದ ಆಸ್ತಿ, ಮನೆ ಮುಂತಾದುವುಗಳಲ್ಲಿ ಅರ್ಧ ಆಸ್ತಿಯನ್ನು ಮರಣಶಾಸನದ (will) ಮೂಲಕ ಹಕ್ಕು ಹಸ್ತಾಂತರ ಮಾಡಿಸಿದ್ದರು. 36 ವರ್ಷದ ಸುಬ್ಬಣ್ಣನವರಿಗೆ 1947ರ ಆಗಸ್ಟ್ ಮಾಸವು ಒಂದು ಕರಾಳ ಸನ್ನಿವೇಶವಾಗಿತ್ತು. ಅವರು ತಮ್ಮ ಚಿಕ್ಕ ವಯಸ್ಸಿನಲ್ಲೇ ವಿಧಿವಶವಾದುದು ದಾನಿಗಳ ಮನೆತನಕ್ಕೂ, ಸಮಾಜಕ್ಕೂ ತುಂಬಲಾರದ ನಷ್ಟವಾಯಿತು. ನಾಗರತ್ನಮ್ಮನವರು ಆ ಮನೆತನದ ಒಂಟಿ ಮಹಿಳೆಯಾಗಿ ಆಸ್ತಿಯ ವಹಿವಾಟನ್ನು ನಡೆಸಿಕೊಂಡು ದುಃಖವನ್ನೆಲ್ಲಾ ಬದಿಗೊತ್ತಿ ಜೀವನವನ್ನು ಸಾಗಿಸುತ್ತಿದ್ದರು.

2.1 ಬಾಲ್ಯ, ವಿದ್ಯಾಭ್ಯಾಸ

ನಾಗರತ್ನಮ್ಮನವರ ತಂದೆ ರಾಮಲಿಂಗೇಗೌಡರು. ಇವರನ್ನು C.R.ಗೌಡರೆಂದು ಕರೆಯುವುದು ವಾಡಿಕೆ. C.R.ಗೌಡರು ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಚೌಳಗೆರೆಯವರು. ಇವರು ತುಮಕೂರು ಜಿಲ್ಲೆಯ ಮುಖ್ಯಎಂಜಿನಿಯರ್ ಆಗಿದ್ದರು. ಆಗಿನ ಸರ್ಕಾರದ ವಿವಿಧ ಸ್ತರದ ಸ್ಥಾನ ಅಲಂಕರಿಸಿ ಸೇವೆ ಸಲ್ಲಿಸಿದ್ದವರು. ಇವರು ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕು ಮೂಗೂರು ಗ್ರಾಮದ ಗೌಡರ ಬಸಪ್ಪನವರು ಮಗಳು ಚನ್ನಮ್ಮನವರನ್ನು ವಿವಾಹವಾಗಿದ್ದರು. ಈ ದಂಪತಿಗಳಿಗೆ 6 ಜನ ಹೆಣ್ಣು ಮಕ್ಕಳು. ಇಬ್ಬರು ಗಂಡು ಮಕ್ಕಳು ಇದ್ದರೆಂದು ತಿಳಿದುಬಂದಿದೆ. ಈ ದಂಪತಿಗಳ ಜ್ಯೇಷ್ಠ ಪುತ್ರಿಯಾಗಿ ನಾಗರತ್ನಮ್ಮನವರು 23.11.1923ರಲ್ಲಿ ಜನಿಸಿದರು. 2ನೆಯವರು ಶ್ರೀಮತಿ ಮಂಜುಳ ಎಂ.ಪಂಡಿತ್, 3ನೆಯವರು ಶ್ರೀಮತಿ ಮಣಿಬಳಿಯಂಗಡಿಯವರು, 4ನೆಯವರು ಶ್ರೀಮತಿ ಮುತ್ತುನವನೀತಂ, 5ನೆಯವರು ಶ್ರೀಮತಿ ಶಕುಂತಲಾ ಮಲ್ಲಪ್ಪ, ಇವರುಗಳ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯ ಇಲ್ಲ. 6ನೆಯವರು ಡಾ. ಸುಲೋಚನಾ. ಇವರು ಬೆಂಗಳೂರಿನ ಬಸವನಗುಡಿಯಲ್ಲಿ ಖಾಸಗಿ ನರ್ಸಿಂಗ್ ಹೋಂ ನಡೆಸುತ್ತಿದ್ದಾರೆಂದು ತಿಳಿದುಬಂದಿದೆ. ನಾಗರತ್ನಮ್ಮನವರ ಸಹೋದರರಾದ ಶ್ರೀಮತಿ ಸುರೇಶ್‌ರವರು ಯಾವುದೇ ಒಂದು ದೊಡ್ಡ ಅಂಗಡಿಯ ಮಾಲೀಕರಾಗಿದ್ದಾರೆಂದು ತಿಳಿದುಬಂದಿದೆ. ಇನ್ನೊಬ್ಬರ ಬಗ್ಗೆ ಮಾಹಿತಿ ಲಭ್ಯ ಇಲ್ಲ. ನಾಗರತ್ನಮ್ಮನವರ ತಂದೆ ತಾಯಿಗಳು ಪರಮ ಸಾತ್ವಿಕರು ಅವರ ತಂದೆ ದಕ್ಷ ಆಡಳಿತಗಾರರು. ಅನ್ಯಾಯವನ್ನು ಕಂಡು ಪ್ರತಿಭಟಿಸುವ ಮನೋಭಾವ ಉಳ್ಳವರು. C.R.ಗೌಡರು ಸಿದ್ಧಲಿಂಗಾ ಮಠದ ಲಿಂಗೈಕ್ಯ ಜಗದ್ಗುರುಗಳಾದ ಶ್ರೀ..ಮ..ನಿ....ಪ್ರ....ಶ್ರೀ ಉದ್ಧಾನ ಶಿವಯೋಗಿಗಳಿಂದ ಶಿವದೀಕ್ಷೆ ಪಡೆದು ಶಿವನ ಕರುಣೆಗೆ ಪಾತ್ರರಾಗಿದ್ದರು. ಇಂತಹ ದಂಪತಿಗಳ ಉದರದಲ್ಲಿ ಜನಿಸಿದ ನಾಗರತ್ನಮ್ಮನವರನ್ನು ಅತ್ಯಂತ ವಾತ್ಸಲ್ಯದಿಂದ ಎಲ್ಲರೂ ನೋಡಿಕೊಳ್ಳುತ್ತಿದ್ದರು. ಅವರ ಜನನದಿಂದ ಬಡವರ ಭಾಗ್ಯೋದಯದ ಬಾಗಿಲು ತೆರೆದಂತೆ ಆಗಿರಬೇಕು. ಇವರಿಗೆ 5 ವರ್ಷ ತುಂಬುತ್ತಲೇ ಮೈಸೂರಿನಲ್ಲಿದ್ದ ಪಾಶ್ಚಿಮಾತ್ಯ ರಾಷ್ಟ್ರ ಮಾದರಿ ಕಾನ್ವೆಂಟಿಗೆ ಸೇರಿಸಿದರು. ಕಾನ್ವೆಂಟಿನಲ್ಲಿ ಅವರು ಕೇಂಬ್ರಿಡ್ಜ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು[9]. ಇಂಗ್ಲೀಷ್ ಭಾಷೆಯಲ್ಲಿ ಪ್ರೌಢಿಮೆ ಬೆಳೆಸಿಕೊಂಡಿದ್ದರಂತೆ. ಸಾಂಪ್ರದಾಯದ ಮನೆತನಕ್ಕೆ ಸೇರಿದ ನಾಗರತ್ನಮ್ಮನವರು ಹೆಚ್ಚಿಗೆ ಓದಲಾಗಲಿಲ್ಲ. ತಂದೆತಾಯಿಗಳ ಅಪೇಕ್ಷೆಯಂತೆ 11ನೇ ವಯಸ್ಸಿನ

ನಾಗರತ್ನಮ್ಮನವರ ವಿವಾಹ ಕಬ್ಬಹಳ್ಳಿ ಸಾಹುಕಾರ್ ಕೆ.ಸಿ.ಸುಬ್ಬಣ್ಣನವರ ಜೊತೆ 1934ರಲ್ಲಿ ವಿವಾಹ ನೆರವೇರಿತು.

2.2 ವೈವಾಹಿಕ ಜೀವನ

ಶ್ರೀಮತಿ ನಾಗರತ್ನಮ್ಮನವರು ತಮ್ಮ ಹನ್ನೊಂದನೇ ವಯಸ್ಸಿನಲ್ಲೇ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಇವರು ಸದಾ ವಿನಯಸಂಪನ್ನರು. ಆಗಲೇ ದೇಶಪ್ರೇಮದ ಬಗ್ಗೆ ಅಲ್ಪಸ್ವಲ್ಪ ಅರಿತಿದ್ದವರು. ತಂದೆತಾಯಿಗಳಂತೆ ದೇಶಭಕ್ತರು. ಸಣ್ಣವಯಸ್ಸಿನಲ್ಲೇ ವಿವಾಹ ಆದುದರಿಂದ ಅವರ ಜೀವನ ಹಳೆಯ ಸಂಪ್ರದಾಯಸ್ಥ ಸಮಾಜದ ದಾರಿಯನ್ನು ಹಿಡಿಯಿತು. ಎಳೆಯ ವಯಸ್ಸಿನಲ್ಲೇ ಹಸೆಮಣೆ ಏರಿದ ಶ್ರೀಮತಿ ನಾಗರತ್ಮಮ್ಮನವರು ಗುಂಡ್ಲುಪೇಟೆ ತಾಲ್ಲೂಕಿನ ಕಬ್ಬಹಳ್ಳಿ ದಾನಿಗಳ ಮನೆತನದ ಸೊಸೆಯಾಗಿ ಬಂದುದು ಆಶ್ಚರ್ಯವೇ ಸರಿ. ಕೆ.ಸಿ.ಸುಬ್ಬಣ್ಣನವರಿಗೆ 2ನೇ ಪತ್ನಿಯಾಗಿ ಬಂದ ಈ ಎಳೆ ಬಾಲಕಿಯ ಬದುಕು ಮುಂದೆ ಹೊಣೆಗಾರಿಕೆ ಮತ್ತು ಸವಾಲುಗಳು ಸರಮಾಲೆಯೇ ಆಗುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಶ್ರೀಮತಿ ನಾಗರತ್ನಮ್ಮನವರು ಪತಿಗೆ ತಕ್ಕ ಸತಿಯಾಗಿದ್ದು ಮನೆಯನ್ನು ಬೆಳಗಿಸಿದರು. ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬಂತೆ ಪತಿಯ ಮನವನ್ನು ಅರಿತು ನಡೆಯುತ್ತಿದ್ದರು. ಕೆ.ಸಿ.ಸುಬ್ಬಣ್ಣನವರ ಸ್ಫೂರ್ತಿಗಿ ಚಿಲುಮೆಯಾದರು. ಅವರ ಜೀವನಕ್ಕೆ ಚೇತನವಾದರು. ಇದರ ಪರಿಣಾಮವಾಗಿ ಸುಬ್ಬಣ್ಣನವರು ಮತ್ತೆ ಸಾಮಾಜಿಕ ಸೇವಾಕಾರ್ಯಗಳ ಕಡೆಗೆ ತೊಡಗಿಸಿಕೊಂಡರು. ಒಳ್ಳೆಯ ಗುಣವಂತನಾದ ಪತಿಯನ್ನು ಪಡೆದ ತೃಪ್ತಿ ಕೆ.ಎಸ್.ನಾಗರತ್ನಮ್ಮನವರಿಗೂ ದೊರಕಿತ್ತು. ಸಾಗರವು ಚಂದ್ರನನ್ನು ಕಂಡು ಸಂತೋಷಪಡುವಂತೆ ನಾಗರತ್ನಮ್ಮನವರ ಜೀವನದ ಸಂತೋಷದ ಕೊಡ ತುಂಬಿತ್ತು. ಸೂರ್ಯನ ಕಿರಣ ಏರುವಂತೆ ಜೀವನದ ಆಶೋತ್ತರಗಳು ಏರತೊಡಗಿದವು. ಪತಿಯ ಇಂಗಿತವನ್ನು ಅರಿತು ಶ್ರೀಮತಿ ನಾಗರತ್ನಮ್ಮನವರು ನಡೆಯುತ್ತಿದ್ದರು. ಪತಿಯ ಕಾಯಕಕ್ಕೆ ಸೂಕ್ತ ಸಹಕಾರ ನೀಡುತ್ತಿದ್ದರು. ಕೆ.ಸಿ.ಸುಬ್ಬಣ್ಣನವರ ಪೂರ್ವಜರು ಮಾಡುತ್ತಿದ್ದ ಪ್ರತಿಯೊಂದು ಕಾರ್ಯಗಳನ್ನು ಸುಬ್ಬಣ್ಣನವರು ಪತ್ನಿಯ ಸ್ಫೂರ್ತಿಯಿಂದ ಚಿಮ್ಮಿ ಸಮಾಜಸೇವೆಯ ಕಡೆಗೆ ಚಿಂತನೆ ಮಾಡುತ್ತಿದ್ದರು.

1935ರಲ್ಲಿ ಕಬ್ಬಹಳ್ಳಿ ಗ್ರಾಮ ಸಾಂಕ್ರಾಮಿಕ ರೋಗದಿಂದ ತತ್ತರಿಸಿತು. ಅನೇಕರು ಮನೆಮಾರುಗಳನ್ನು ಬಿಟ್ಟು ಕಬ್ಬಹಳ್ಳಿಯಿಂದ ಬೇರೆ ಬೇರೆ ಗ್ರಾಮಗಳಿಗೆ ತೆರಳಿದರು. ಈ ಸಂದರ್ಭದಲ್ಲಿ ನಾಗರತ್ನಮ್ಮನವರು ಪತಿ ಕೆ.ಸಿ.ಸುಬ್ಬಣ್ಣನವರೊಡನೆ ಕಬ್ಬಹಳ್ಳಿ ಗ್ರಾಮವನ್ನು ಬಿಟ್ಟು ಮೈಸೂರು ಪಟ್ಟಣದಲ್ಲಿ ನೆಲೆಸುವಂತಾಯಿತು. ಹೀಗಾಗಿ ಶ್ರೀಮತಿ ನಾಗರತ್ನಮ್ಮನವರು ಕಬ್ಬಹಳ್ಳಿಯಲ್ಲಿ ವಾಸಿಸುವುದಕ್ಕಿಂತ ಹೆಚ್ಚಾಗಿ ಪಟ್ಟಣದಲ್ಲೇ ವಾಸಮಾಡುವ ಪರಿಸ್ಥಿತಿ ಸೃಷ್ಟಿಯಾಯಿತು. ಮೈಸೂರಿನಲ್ಲಿದ್ದರೂ ಅವರ ಆಗಿಂದಾಗ್ಗೆ ಕಬ್ಬಹಳ್ಳಿ ಗ್ರಾಮಕ್ಕೆ ಭೇಟಿ ಕೊಟ್ಟು ವ್ಯವಸಾಯ ಕಾರ್ಯಕ್ರಮಗಳಲ್ಲಿ ತೊಡಗುತ್ತಿದ್ದರು[10].

ಆಗ ಸುಬ್ಬಣ್ಣನವರಿಗೆ ಸುಮಾರು 23ರ ವಯಸ್ಸು. ವಿಧಿಯ ಆಟ ಬಲ್ಲವರ್‍ಯಾರು?. ಅಂದಚಂದದ ಸಂಸಾರ ಸಾಗುತ್ತಲೇ ಇತ್ತು. ಸಂಸಾರ ಬಾಳನೌಕೆಯು ಛಿದ್ರವಾಗುವ ಕಾಲ ದೂರ ಉಳಿದಿರಲಿಲ್ಲ. ಕಾಲಚಕ್ರ

ಉರುಳುತ್ತಲೇ ಇತ್ತು. ಅಂದ ಸ್ವತಂತ್ರ ಸಂಗ್ರಾಮದ ಸಮಯವದು. ದಂಪತಿಗಳು ಆ ಸಂಗ್ರಾಮದಲ್ಲಿ ತೊಡಗಿಸಿಕೊಳ್ಳಲು ಕಾಲಪಕ್ವವಾಗಿತ್ತು. ಆದರೆ ತಮಗೆ ಮಕ್ಕಳಿಲ್ಲದ ಚಿಂತೆ ಅವರನ್ನು ಹೋರಾಟದಿಂದ ದೂರ ಉಳಿಯುವಂತೆ ಮಾಡಿತು. ನಾಗರತ್ನಮ್ಮನವರಿಗೆ ಅಲ್ಲಿಯವರೆಗೂ ಮಕ್ಕಳಾಗುವ ಯೋಗ ಕೂಡಿ ಬರಲೇ ಇಲ್ಲ. ಆಗ ಸುಬ್ಬಣ್ಣನವರಿಗೆ ಸುಮಾರು 36 ವರ್ಷ ವಯಸ್ಸಾಗಿರಬೇಕು. ನಾಗರತ್ನಮ್ಮನವರು 25 ವರ್ಷದ ಯುವತಿ. ಹಗಲಿರುಳು ಸಮಾಜ ಸೇವೆಯಲ್ಲಿ ಸುಬ್ಬಣ್ಣನವರು ತೊಡಗಿಸಿಕೊಂಡಿದ್ದರೂ ಯುವತಿ ನಾಗರತ್ನಮ್ಮ ಮಕ್ಕಳಿಲ್ಲದ ಕೊರಗಿನಿಂದ ಬಳಲುತ್ತಲೇ ಇದ್ದರು.

ಈ ಕೊರಗು ಒಂದೆಡೆಯಾದರೆ ಸುಬ್ಬಣ್ಣನವರ ಅನಾರೋಗ್ಯದ ಚಿಂತೆ ಅವರನ್ನು ಬಲವಾಗಿ ಕಾಡುತ್ತಲೇ ಇತ್ತು. ಸಮಾಜ ಸೇವಗಳ ನಡುವೆ ತೊಡಗಿಸಿಕೊಂಡಿದ್ದ ಸುಬ್ಬಣ್ಣನವರು ಅನಾರೋಗ್ಯ ನಿಮಿತ್ತ ಹಾಸಿಗೆ ಹಿಡಿದು ಸೇವಾಕಾರ್ಯಗಳಿಂದ ದೂರವಾಗಬೇಕಾಯಿತು. ಹೊರಗಿನವರು ಸುಬ್ಬಣ್ಣನವರನ್ನು ಭೇಟಿ ಮಾಡುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ನಾಗರತ್ನಮ್ಮನವರ ಅಪ್ಪಣೆಯಿಲ್ಲದೇ ಸುಬ್ಬಣ್ಣನವರನ್ನು ಭೇಟಿ ಮಾಡುವುದು ಸ್ವಲ್ಪ ಕಷ್ಟದ ಕೆಲಸವೇ ಆಗಿತ್ತು. ಏಕೆಂದರೆ ತಮಗಿದ್ದ ಆಸ್ತಿಯನ್ನು ತಮ್ಮ ಗೈರುಹಾಜರಿಯಲ್ಲಿ ಬೇರೆಯವರು ಸುಬ್ಬಣ್ಣನವರನ್ನು ಪ್ರೇರೇಪಿಸಿ ಲಪಟಾಯಿಸಬಹುದೆಂಬ ಶಂಕೆ ಅಮ್ಮನವರನ್ನು ಆವರಿಸಿಕೊಂಡಿತ್ತು. ಈ ಕಾರಣದಿಂದಾಗಿ ಸಾರ್ವಜನಿಕರ ಭೇಟಿ ವಿಳಂಬವಾಗುತ್ತಿತ್ತು. ಕೆಲವು ದಿನಗಳ ತರುವಾಯ ಸುಬ್ಬಣ್ಣನವರು ಚೇತರಿಸಿಕೊಳ್ಳಬಹುದೆಂಬ ನಾಗರತ್ನಮ್ಮನವರ ಊಹೆ ಸುಳ್ಳಾಯಿತು. ಕೊನೆಗೂ ಸುಬ್ಬಣ್ಣನವರನ್ನು 25 ವರ್ಷದ ಯುವತಿ ಕಳೆದುಕೊಂಡು ವಿಧವೆಯಾಗಬೇಕಾಯಿತು. ಹೀಗಾಗಿ ನಾಗರತ್ನಮ್ಮನವರು ದಾನಿಗಳ ಕೊನೆಯ ತಲೆಮಾರಿನವರಾದರು. ಹೀಗೆ ಒಂಟಿ ಮಹಿಳೆಯಾಗಿ ಆಸ್ತಿಪಾಸ್ತಿಗಳ ಮೇಲ್ವಿಚಾರಣೆಗಾಗಿ ಕೆಲವು ನಂಬಿಕಸ್ಥ ಸೇವಕರನ್ನು ಗೊತ್ತುಪಡಿಸಿಕೊಂಡು ಜೀವನ ಸಾಗಿಸುತ್ತಲೇ ಇದ್ದರು. ಶ್ರೀಮತಿ ನಾಗರತ್ನಮ್ಮನವರ ಮುಂದೆ 'ಕೆ.ಎಸ್.' ಎಂಬ ಆಧ್ಯಕ್ಷರಗಳಿವೆ. ಇವು ಕಬ್ಬಳ್ಳಿ ಸುಬ್ಬಣ್ಣ ನಾಗರತ್ನಮ್ಮ ಎಂಬುದನ್ನು ಸೂಚಿಸುತ್ತವೆಂದು ತಿಳಿದುಬರುತ್ತದೆ.

ಅಡಿ ಟಿಪ್ಪಣಿಗಳು

1. ದಿವ್ಯಚೇತನಗಳು : ರಾಜೇಂದ್ರಶಿಶು, ಪುಟಸಂಖ್ಯೆ 04
2. ದಿವ್ಯಚೇತನಗಳು: ರಾಜೇಂದ್ರಶಿಶು, ಪುಟಸಂಖ್ಯೆ 05
3. ದಿವ್ಯಚೇತನಗಳು : ರಾಜೇಂದ್ರಶಿಶು, ಪುಟಸಂಖ್ಯೆ 07

4. ದಿವ್ಯಚೇತನಗಳು: ರಾಜೇಂದ್ರಶಿಶು, ಪುಟಸಂಖ್ಯೆ 10
5. ಮಾಹಿತಿ ನೀಡಿದವರು : ಪಿ.ಎಸ್.ನಾಗರಾಜುರವರು, ಮಾಜಿ ತಾಲ್ಲೂಕು ಪಂಚಾಯಿತಿ ಸದಸ್ಯರು
6. ದಿವ್ಯಚೇತನಗಳು: ರಾಜೇಂದ್ರಶಿಶು, ಪುಟಸಂಖ್ಯೆ 14
7. ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆ, ಪುಟಸಂಖ್ಯೆ 03
8. ದಿವ್ಯಚೇತನಗಳು : ರಾಜೇಂದ್ರಶಿಶು, ಪುಟ ಸಂಖ್ಯೆ 25
9. ಹೊನ್ನುಹೊಳೆ: ಮಲೆಯೂರು ಗುರುಸ್ವಾಮಿ, ಪುಟಸಂಖ್ಯೆ 456
10. ದಿವ್ಯಚೇತನಗಳು : ರಾಜೇಂದ್ರಶಿಶು, ಪುಟಸಂಖ್ಯೆ 32

ಅಧ್ಯಾಯ - ೩

ರಾಜಕೀಯ ಪ್ರವೇಶ ಹಾಗೂ ಚಿಂತನೆ

ಅಧ್ಯಾಯ - 3

ರಾಜಕೀಯ ಪ್ರವೇಶ ಹಾಗೂ ಚಿಂತನೆ

ಕರ್ನಾಟಕದ ಇತಿಹಾಸದಲ್ಲಿ ಅನೇಕ ಮಹಿಳೆಯರು ರಾಜ್ಯವಾಳಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ಚಿರಸ್ಥಾಯಿಯಾಗಿದ್ದಾರೆ. ಇಂದಿಗೂ ಈ ಮಹಿಳೆಯರ ಆದರ್ಶನದ ಬದುಕು ಯುವ ಪೀಳಿಗೆಗೆ ಆದರ್ಶವಾಗಿದೆ. ಕೆಲವು ಮಹಿಳೆಯರು ತಮ್ಮ ಸ್ವಾಭಿಮಾನವನ್ನು ಕಾಪಾಡಿಕಂಡು ರಾಜ್ಯಾವಾಳಿದ ಉದಾಹರಣೆಗಳಿಗೆ ಕಡಿಮೆ ಇಲ್ಲ. ಇದು ಇತಿಹಾಸದ ಪುಟಪುಟಗಳಲ್ಲಿ ಎದ್ದು ಕಾಣುತ್ತಿದೆ. 20ನೇ ಶತಮಾನದ ಆದಿ ಭಾಗದಲ್ಲಿ ಮಹಿಳೆಯರಿಗೆ ಕರ್ನಾಟಕದಲ್ಲಿ ಉತ್ತಮವಾದ ಸ್ಥಾನಮಾನ ದೊರಕುವಂತಾಯಿತು. ಮಹಿಳೆಯರು ಶಿಕ್ಷಣ ಕ್ಷೇತ್ರದಲ್ಲಿ ಮತ್ತು ರಾಜಕೀಯ ಕ್ಷೇತ್ರದಲ್ಲಿ ಪಾದಾರ್ಪಣೆ ಮಾಡಿ ಸಾಹಿತ್ಯ ಮತ್ತು ರಾಜಕೀಯ ಕ್ಷೇತ್ರದಲ್ಲಿ ಅಪಾರ ಸ್ಥಾನಮಾನ ಗಳಿಸಿದ್ದಾರೆ. ಇಂತಹ ಮಹಿಳೆಯರ ಪಂಕ್ತಿಯಲ್ಲಿ ಗುಂಡ್ಲುಪೇಟೆ ತಾಲೂಕಿನ ಕಬ್ಬಹಳ್ಳಿ ಗ್ರಾಮದ ಕೆ.ಎಸ್. ನಾಗರತ್ನಮ್ಮನವರ ಹೆಸರು ಎಂದೆಂದಿಗೂ ಚಿರಸ್ಥಾಯಿಯಾಗಿ ನಿಲ್ಲುವಂತಹ ಹೆಸರಾಗಿದೆ. ಇಂಥಹ ಮಹಿಳಾ ಮಣಿಗಳ ಬಗ್ಗೆ ತಿಳಿದುಕೊಳ್ಳುವುದು ಅತ್ಯವಶ್ಯಕ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಪತಿ ಕೆ.ಸಿ. ಸುಬ್ಬಣ್ಣನವರು ಅನಾರೋಗ್ಯ ನಿಮಿತ್ತ 1947 ನಿಧನರಾದರು. ಆಗ ಭಾರತದ ಎಲ್ಲೆಡೆ ಸ್ವಾಂತಂತ್ರೋತ್ಸವದ ಸಂಭ್ರಮ ಕೆ.ಎಸ್. ನಾಗರತ್ನಮ್ಮನವರು ಪತ್ರಿಕೆಗಳ ಮೂಲಕ ಸ್ವಾತಂತ್ರ್ಯ ಚಳುವಳಿಯ ಹೋರಾಟಗಾರರ ಬಗ್ಗೆ ಓದಿ ತಿಳಿದುಕೊಳ್ಳುತ್ತಿದ್ದರು. ಮಾಧ್ಯಮಗಳ ಮೂಲಕ ದೇಶದಲ್ಲಿ ನಡೆಯುತ್ತಿದ್ದ ರಾಜಕೀಯ ಚಟುವಟಿಕೆಗಳನ್ನೆಲ್ಲಾ ಗಮನಿಸುತ್ತಿದ್ದರು. ಪತಿಯ ನಿಧನದಿಂದ ಕಂಗಾಲಾಗಿದ್ದ ನಾಗರತ್ನಮ್ಮನವರು ನಾಲ್ಕು ಗೋಡೆಗಳ ನಡುವೆಯೇ ಜೀವನ ಸಾಗಿಸಲು ಬಯಸಿರಲಿಲ್ಲ. ಕಾನ್ವೆಂಟ್ ಶಾಲೆಯ ವ್ಯಾಸಂಗದ ಪ್ರಭಾವದಿಂದಾಗಿ ಉತ್ತಮ ಪ್ರಜೆಯಾಗಿ ಹೇಗೆ ಬದುಕಬೇಕೆಂಬ ಆಲೋಚನೆ ಅವರ ಮನಸ್ಸಿನಲ್ಲಿ ಮನೆ ಮಾಡಿತ್ತು ಕೆ.ಸಿ. ಸುಬ್ಬಣ್ಣನವರು ಗಳಿಸಿದ್ದ ಚರ, ಸ್ಥಿರ ಆಸ್ತಿಗಳ ಜವಾಬ್ದಾರಿಯನ್ನೂ ಸ್ವತಹ ತಾವೇ ನಿರ್ವಹಿಸುತ್ತಾ ಕೆಲವು ವರ್ಷಗಳ ಕಾಲ ಕಳೆದರು. ಅಷ್ಟರಲ್ಲಿ ಆಗಲೇ ಮೊದಲನೇ ಸಾರ್ವತ್ರಿಕ ಚುನಾವಣೆ ನಡೆದು 5 ವರ್ಷಗಳ ಕಾಲ ಮೈಸೂರು ಸರ್ಕಾರ ಆಡಳಿತ ನಡೆಸಿತ್ತು. ತರುವಾಯ 2ನೆಯ ಸಾರ್ವತ್ರಿಕ ಚುನಾವಣೆ ಪ್ರಾರಂಭವಾಗತೊಡಗಿತ್ತು. ಆ ಸಂದರ್ಭದಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಅನೇಕ ಅಭಿಮಾನಿಗಳು ಕೆ.ಎಸ್. ನಾಗರತ್ನಮ್ಮನವರನ್ನು ಚುನಾವಣೆಗೆ ನಿಲ್ಲಿಸಬೇಕೆಂಬ ಬಯಕೆಯನ್ನು ವ್ಯಕ್ತ ಪಡಿಸಿದ್ದರು. ಪತಿಯನ್ನು ಕಳೆದುಕೊಂಡಿದ್ದ ನಾಗರತ್ನಮ್ಮನವರು ತಮ್ಮ ಮನೋಸ್ಥೈರ್ಯದಿಂದ ಕುಂದಿರಲಿಲ್ಲ. ಅವರಿಗೆ ಸಮಾಜ ಸೇವೆ ಮಾಡುವ ಹಂಬಲ ಅತಿಯಾಗಿತ್ತು. ಅವರಿಗೆ ಚುನಾವಣೆಗೆ ಸ್ಪರ್ಧಿಸಲು ಸಲಹೆ ಕೊಟ್ಟ ಅನೇಕರು ಅವರಲ್ಲಿ ಆತ್ಮ ವಿಶ್ವಾಸ ತುಂಬುವ ಕೆಲಸ ಮಾಡಿದರು. ಇದರಿಂದಾಗಿ ನಾಗರತ್ನಮ್ಮನವರ ಮನೋಬಲ ಹೆಚ್ಚಾಯಿತು. ತಮ್ಮ ಮುಂದಿರುವ ಸಮಸ್ಯೆಗಳಿಗೆ ಹೆದರಿದರೆ ದಿನವೂ ಸಾಯಬೇಕಾಗುತ್ತದೆ. ಅದಕ್ಕೆ ಬದಲು ಸಮಸ್ಯೆಗಳನ್ನು ಎದುರಿಸಿ ಧೈರ್ಯ ತುಂಬಿಕೊಳ್ಳುವುದು ಉತ್ತಮ ಎಂಬ ಭಾವನೆ ಅವರ ಮನದಾಳದಲ್ಲಿ ಮನೆ ಮಾಡಿತು. ಗುಂಡ್ಲುಪೇಟೆ ತಾಲ್ಲೂಕಿನ ಗೌರವಾನ್ವಿತ ರಾಜಕಾರಣಿಗಳು ಅವರಿಗೆ ಧೈರ್ಯ ತುಂಬುವ ಕೆಲಸ ಮಾಡಿದ್ದರ ಪರಿಣಾಮವಾಗಿ

ನಾಗರತ್ನಮ್ಮನವರ ನೈತಿಕ ಸ್ಥೈರ್ಯ ಹೆಚ್ಚುವುದರ ಜೊತೆಗೆ ಅವರ ಮನೋಬಲವು ಬೆಳೆಯಿತು. ಮಹಿಳೆ ಕೇವಲ ಮನೆಯಲ್ಲಿ ಮಾತ್ರವಲ್ಲದೆ ಹೊರ ಪ್ರಪಂಚದಲ್ಲೂ ಸಾಮಾಜಿಕ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂಬುವುದು ಅವರ ಮೂಲಮಂತ್ರವಾಗಿತ್ತು. ಕೆಲವರು ಮಹಿಳೆ ಹೊರ ಹೋಗಿ ದುಡಿಯಲು ಸಾಧ್ಯವಿಲ್ಲ ಎಂದು ಹೇಳಬಹುದು. ಅದು ಕೇವಲ ಕೆಲವೇ ವ್ಯಕ್ತಿಗಳ ಅಭಿಪ್ರಾಯ. ಆದರೆ ಮಹಿಳೆಯಲ್ಲಿ ಅಪಾರವಾದ ಶಕ್ತಿ ಇದೆ ಮಹಿಳೆಯಲ್ಲಿ ಸ್ವಾಭಾವಿಕ ಗುಣಗಳಿವೆ ಎಂಬುದನ್ನು ನಾಗರತ್ನಮ್ಮನವರು ಅರಿತಿದ್ದರು. ಆದ್ದರಿಂದ ಹೆಣ್ಣು ಕೈ ಕಟ್ಟಿ ಕುಳಿತುಕೊಳ್ಳುವಲ್ಲಿ ಅರ್ಥವಿಲ್ಲ ಎಂಬ ಮೂಲ ಮಂತ್ರ ಅವರ ಮನಸ್ಸಿನಲ್ಲಿ ಮೊಳಕೆಯೊಡೆದಿತ್ತು. ಆದ್ದರಿಂದ ನಾಗರತ್ನಮ್ಮನವರು ಸಮಾಜ ಸೇವೆ ತಮ್ಮನ್ನು ಅರ್ಪಿಸಿಕೊಳ್ಳಲು ಮುಂದಾದರು. ಮಹಿಳೆ ಅಬಲೆಯಲ್ಲ ಸಬಲೆ ಮತ್ತು ಪುರುಷರಿಗೆ ಸರಿಸಮನಾಗಿ ಬೆಳೆದು ಗೌರವಯುತವಾದ ಬದುಕನ್ನು ಸಾಗಿಸುವುದು ಸೂಕ್ತ ಎಂದು ಅವರು ಭಾವಿಸಿದ್ದರು. ಇದೇ ಸನ್ನಿವೇಶವನ್ನು ಉಪಯೋಗಿಸಿಕೊಂಡ ನಾಗರೀಕ ಬಂಧುಗಳು ನಾಗರತ್ನಮ್ಮನವರನ್ನು ಉಪಯೋಗಿಸಿಕೊಂಡ ನಾಗರೀಕ ಬಂಧುಗಳು ನಾಗರತ್ನಮ್ಮನವರನ್ನು ಭೇಟಿಯಾಗಿ ಚುನಾವಣೆಗೆ ನಿಲ್ಲುವಂತೆ ಒತ್ತಾಯ ಮಾಡಿದರು. ಅಂಥಹ ಗೌರವಾನ್ವಿತ ವ್ಯಕ್ತಿಗಳಲ್ಲಿ ಗುಂಡ್ಲುಪೇಟೆ ವಿ.ಕೆ. ನಂಜುಂಡಯ್ಯನವರು, ತಿಮ್ಮ ಜಮರಿಯಪ್ಪನವರು, ಬರಗಿ ನಾಗಮಲ್ಲಪ್ಪನವರು, ಮೂಡಗೂರು ಎಂ.ಎಸ್. ಪುಟ್ಟವೀರಪ್ಪನವರು, ಪಡಗೂರು ಅಡವಿಮಠದ ಶ್ರೀ ಶ್ರೀ ಶಿವಕುಮಾರಸ್ವಾಮಿಗಳು, ಕಬ್ಬಹಳ್ಳಿ ಗ್ರಾಮದ ಜೆ.ಸಿ. ಗುರುಮಲ್ಲಪ್ಪನವರು, ಮಾಜಿ ಛೇರ್‌ಮನ್ ಹೆಚ್.ಪಿ. ಬಸಪ್ಪನವರು, ಅಗತಗೌಡನಹಳ್ಳಿ ದಿ. ರಾಮಪ್ಪನವರು, ಹಂಗಳದ ರಿ.ಸ್ಕೂ. ಮಾಸ್ಟರ್ ಶಿವಬಸಪ್ಪನವರು, ಅಂಕಹಳ್ಳಿಯ ತೀರ್ಥಪ್ಪನ ಸಿದ್ಧಪ್ಪನವರು, ಬೊಮ್ಮಲಾಪುರದ ಛೇರ್‌ಮನ್ ಬಸಪ್ಪನವರು, ಕೊಡಸೋಗೆ ದಿ. ಕರಿಬಸಪ್ಪನವರು, ದೇಪಾಪುರದ ಸಿದ್ದಪ್ಪನವರು, ಗುಂಡ್ಲುಪೇಟೆ ಜಿ.ಬಿ.ಚಿಕ್ಕಣ್ಣನವರು, ಬೇರಂಬಾಡಿಯ ಗೌಡರ ಗೋಪಪ್ಪ ಇವರುಗಳು ನಾಗರತ್ನಮ್ಮನವರಿಗೆ ಪ್ರೇರಕ ಶಕ್ತಿಯಾಗಿ ನಿಂತಿದ್ದರು.[1] ಹೀಗೆ ಅನೇಕರು ನಾಗರತ್ನಮ್ಮನವರ ಬೆಂಬಲಕ್ಕೆ ನಿಂತಿದ್ದ ಸಂದರ್ಭದಲ್ಲಿ ಅನೇಕ ಜನ ಈ ಮಹಿಳೆಯನ್ನು ವಿರೋದಿಸಿದುದ್ದೂ ಉಂಟು, ಅಂತಹ ವಿರೋಧಿಗಳಲ್ಲಿ ಹಂಗಳ ಗ್ರಾಮದ ದಿ. ಸುಬ್ಬಪ್ಪನವರು, ದಿ. ಮರಿಯಪ್ಪನವರು, ಗುಂಡ್ಲುಪೇಟೆ, ದಿ. ಶ್ಯಾನುಬೋಗ್ ಮಾದನಾಯಕ ಇವರುಗಳು ಪ್ರಮುಖರೆನಿಸಿದರೆ ತಪ್ಪಾಗಲಾರದು. ಈ ವಿರೋದಿಗಳು ಹುಂಡೀಪುರದ ದಿ. ಹೆಚ್.ಕೆ. ಶಿವರುದ್ರಪ್ಪನವರ ಅನುಯಾಯಿಗಳಾಗಿದ್ದರು. ಈ ರಾಜಕೀಯ ವಿರೋಧಿಗಳ ನಡುವೆಯೂ ನಾಗರತ್ನಮ್ಮನವರು ತಮ್ಮ ಬೆಂಬಲಿಗರ ಮಾರ್ಗದರ್ಶನದಂತೆ ಸ್ವತಂತ್ರ ಅಭ್ಯರ್ಥಿಯಾಗಿ 2ನೇ ಸಾರ್ವತ್ರಿಕ ಚುನಾವಣೆ ಸೈಕಲ್ ಚಿಹ್ನೆಯೊಂದಿಗೆ ಧುಮುಕಿದರು. ಚುನಾವಣೆಗೆ ನಿಲ್ಲಲು ಬೇಕಾದ ನಾಮಪತ್ರವನ್ನು ಸಲ್ಲಿಸಿ ಮುಂದಿನ ಗೆಲುವಿಗೆ ಕಾರ್ಯ ತಂತ್ರವನ್ನು ರೂಪಿಸತೊಡಗಿದರು. ಚುನಾವಣಾ ಪ್ರಚಾರಕ್ಕೆ ತೆರಳುವ ಮುನ್ನ ತಾವು ಯಾವ ಯಾವ ಗ್ರಾಮಗಳಿಗೆ ಭೇಟಿ ಕೊಡಬೇಕೆಂಬ ಬಗ್ಗೆ ಬಂದು ವೇಳಾಪಟ್ಟಿಯನ್ನು ತಯಾರಿಸಿಕೊಂಡಿದ್ದರು. ಆ ವೇಳಾಪಟ್ಟಿಯ ಪ್ರಕಾರ ಅವರು ತೆರಳಬೇಕಾಗಿದ್ದ ಹಳ್ಳಿಗೆ ಮೊದಲೆ ತಮ್ಮ ಆಗಮನದ ಮಾಹಿತಿ ತಲುಪಿಸುತ್ತಿದ್ದರು. ಈ ಮಾಹಿತಿಯನ್ನು ಪಡೆದ ಜನರು ನಾಗರತ್ನಮ್ಮನವರನ್ನು ತಮ್ಮ ಗ್ರಾಮಕ್ಕೆ ಬರ

ಮಾಡಿಕೊಳ್ಳಲು ಊರಿನ ಮಹಾದ್ವಾರಗಳನ್ನು ತಳಿರು ತೋರಣಗಳಿಂದ ಸಿಂಗರಿಸುತ್ತಿದ್ದರು, ನಾಗರತ್ನಮ್ಮನವರು ಆ ಊರಿನ ಹೆಬ್ಬಾಲಿಗೆ ಬರುತ್ತಿದ್ದಂತೆಯೇ ಕೊಂಬು, ತಮಟೆ, ಕಹಳೆ ಸತ್ತಿಗೆ, ಸೂರಿ ಪಾಣಿ ಮೊದಲಾದವುಗಳನ್ನು ಹೊತ್ತು ಅವರಿಗೆ ಸ್ವಾಗತ ಕೋರುತ್ತಿದ್ದರು. ಅಗಿನ ಕಾಲದಲ್ಲಿ ತಮ್ಮ ತಮ್ಮ ಗ್ರಾಮಗಳಿಗೆ ಏನು ಏನು ಬೇಕು ಎಂಬ ಬೇಡಿಕೆಯನ್ನು ಗ್ರಾಮೀಣ ಜನರು ಮಂಡಿಸುತ್ತಿರಲಿಲ್ಲ. ಜನರ ಬೇಡಿಕೆಯನ್ನು ಪೂರೈಸುವ ಸ್ಥಿತಿ ನಾಗರತ್ನಮ್ಮನವರಿಗೂ ಇರಲಿಲ್ಲ. ಆದರೆ ಅಮ್ಮನವರು ಗೌರವಾನ್ವಿತ ಕುಟುಂಬದಿಂದ ಬಂದಿರುವ ಮಹಿಳೆ ಎಂಬ ಉದ್ದೇಶದಿಂದ ಜನರು ಅವರ ಬೆಂಬಲಕ್ಕೆ ನಿಂತಿದ್ದರು.

ಒಮ್ಮೆ ಹಳ್ಳಿಗಳ ಮೂಲಕ ಪ್ರಚಾರ ನಡೆಸುತ್ತಾ ಹೋಬಳಿ ಮಟ್ಟದ ಗ್ರಾಮವಾದ ತೆರಕಣಾಂಬಿಗೆ ಬರಬೇಕಾಯಿತು. ಅಲ್ಲಿ ಸಣ್ಣದಾದ ಒಂದು ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಯಿತು. ಆ ಸಭೆಯನ್ನು ಕುರಿತು ನಾಗರತ್ನಮ್ಮನವರು ಚುನಾವಣಾ ಭಾಷಣ ಮಾಡಬೇಕಾಯಿತು. ಇದು ಬಹುಶಹ ಅವರ ಮೊಟ್ಟ ಮೊದಲ ಚುನಾವಣಾ ಭಾಷಣವಾಗಿತ್ತು. ಅಂದು ಅವರು ತಡವರಿಸಿ ನಾಗರೀಕರ ಮುಂದೆ ಮಾತನಾಡಿದಾಗ ಈ ಮಹಿಳೆ ಇಲ್ಲಿಯೇ ತಡವರಿಸುತ್ತಿದ್ದಾರೆ, ಇನ್ನೂ ವಿಧಾನ ಸಭೆಯನ್ನು ಪ್ರವೇಶಿಸಿದರೆ ಏನು ಮಾಡಬಲ್ಲಳು? ಎಂಬ ಮಾತುಗಳನ್ನು ಕೆಲವರು ಆಡಿದ್ದು, ಉಂಟು. ಆದರೂ ನಾಗರತ್ನಮ್ಮನವರು ಎದೆ ಗುಂದದೆ ದಿಟ್ಟತನದಿಂದ ಸಬೆ ಮುಂದೆ ತಮ್ಮ ಮೊದಲು ನುಡಿಗಳನ್ನು ನುಡಿಯುವ ಮೂಲಕ ಜನರ ಅಚ್ಚರಿ ಮೂಡಿಸಿದ್ದರು. ಹೀಗೆ ಚುನಾವಣಾ ಪ್ರಚಾರ ಭಾಷಣ ಮಾಡುತ್ತಾ ಮಾಡುತ್ತಾ ಉತ್ತಮ ವಾಗ್ಮಾಟುಗಳಾಗಿ ರೂಪುಗೊಂಡರು.

ಹೀಗೆ ಚುನಾವಣಾ ಭಾಷಣ ಮಾಡುತ್ತಾ ಅನೇಕ ಹಳ್ಳಿಗಳನ್ನು ಸುತ್ತಾಡಿಕೊಂಡು ಒಂದು ದಿನ ನಾಗರತ್ನಮ್ಮನವರು ಗುಂಡ್ಲುಪೇಟೆ ತಾಲ್ಲೂಕಿನ ಬನ್ನಿತಾಳಪುರ ಎಂಬ ಗ್ರಾಮಕ್ಕೆ ಹೋಗಬೇಕಾಯಿತು. ಆ ಊರಿಗೆ ಅಮ್ಮನವರು ಬರುತ್ತಿರುವ ಸಂಗತಿ ಮೊದಲೇ ಗೊತ್ತಿತ್ತು. ಆ ಊರಿನಲ್ಲಿ ಮೇಲು ಸಕ್ಕರೆ ಜಾತಿ (ಉಪ್ಪಾರ) ಜನಾಂಗದವರು ವಾಸಿಸುತ್ತಿದ್ದರು. ಅವರೆಲ್ಲರೂ ಸೇರಿ ಗ್ರಾಮವನ್ನು ಅಲಂಕರಿಸಿ ಅಮ್ಮನವರನ್ನು ಮೆರವಣಿಗೆಯ ಮೂಲಕ ಊರಿನ ಮಧ್ಯದ ಚಾವಡಿಗೆ ಕರೆದುಕೊಂಡು ಹೋದರು ಆಗ ನಾಗರತ್ನಮ್ಮನವರು ತಾವು ಹೊಂದಿರುವ ಸಾಮಾಜಿಕ ಕಳಕಳಿಯ ಸಂಗತಿಗಳನ್ನು ಅವರ ಮುಂದೆ ವಿವರಿಸಿದರು. ಗ್ರಾಮದ ಅಭಿವೃದ್ಧಿಗಾಗಿ ತಾವು ಕೈಗೊಳ್ಳುವ ಕ್ರಮಗಳ ಬಗ್ಗೆಯೂ ವಿವರಿಸಿದರು. ಅಷ್ಟರಲ್ಲಿ ಆಗಲೇ ಆ ಗ್ರಾಮದ ಯುವಕನೊಬ್ಬ ಅಮ್ಮನವರಿಗೆ ಕೆಲವು ಸಮಸ್ಯೆಗಳನ್ನು ತಂದೊಡ್ಡುವ ಅಭಿಪ್ರಾಯದ ಬಗ್ಗೆ ಚಿಂತೆ ನಡೆಸಿದ್ದಂತೆ ತೋರುತ್ತದೆ. ಆ ಯುವಕ ಅಮ್ಮನವರನ್ನು ಪ್ರಶ್ನಿಸಿ "ಅನೇಕ ರಾಜಕಾರಣಿಗಳು ತಾವು ಕೊಟ್ಟ ಭರವಸೆಗಳನ್ನು ಈಡೇರಿಸಿಲ್ಲಾ ನೀವು ನಮ್ಮ ಗ್ರಾಮವನ್ನು ಅಭಿವೃದ್ಧಿಪಡಿಸುವ ಬಗ್ಗೆ ಮಾತನಾಡುತ್ತಿದ್ದೀರಿ, ಮಹಿಳೆಯಾದ ನೀವು ಹೇಗೆ ಸಾಧನೆ ಮಾಡಲು ಸಾಧ್ಯ. ನಮ್ಮ ಊರಿಗೆ ಸರಿಯಾದ ರಸ್ತೆಗಳಿಲ್ಲ, ಆಸ್ಪತ್ರೆಯ ಸೌಲಭ್ಯಗಳಿಲ್ಲ. ಹೀಗೆ ನಮ್ಮ ಗ್ರಾಮ ಸೌಲಭ್ಯಗಳಿಲ್ಲದೆ ವಂಚಿತವಾಗಿದೆ" ಎಂದು ಅಮ್ಮನವರಿಗೆ ಪ್ರಶ್ನೆಗಳನ್ನು ಹಾಕಲಾರಂಭಿಸಿದನು.[2] ಆಗ ಅಮ್ಮನವರು ಮರು ಮಾತನಾಡದೆ ನೆರೆದಿದ್ದವರ ಸಮ್ಮುಖದಲ್ಲಿ ತಮ್ಮ ಎರಡು ಕೈಗಳಲ್ಲಿದ್ದ ಚಿನ್ನದ ಬಳೆಗಳನ್ನು ಹೊರ ತೆಗೆದು ಇಗೋ ಈ ಎರಡೂ ಬಳೆಗಳನ್ನು ತೆಗೆದುಕೊಂಡು

ಮಾರಿ ನಿಮ್ಮ ಗ್ರಾಮದ ಅಭಿವೃದ್ಧಿ ಮಾಡಿಕೊಳ್ಳಿ ಎಂದು ಆ ಬಳೆಗಳನ್ನು ಯುವಕನ ಕೈಗೆ ಕೊಡಲು ಮುಂದಾದರು ಆಗ ಅಲ್ಲಿದ್ದ ಅಭಿಮಾನಿಗಳು ಅಮ್ಮನವರ ಉದಾರತೆಯನ್ನು ನೋಡಿ ಬೆರಗಾಗಿ ಅವರ ಬಳೆಗಳನ್ನು ಪುನಃ ಕೈಗೆ ತೊಟ್ಟಿಕೊಳ್ಳುವಂತೆ ವಿನಂತಿಸಿಕೊಂಡರು. ಈ ಘಟನಾವಳಿ ನಡೆದ ನಂತರ ಆ ಗ್ರಾಮದ ಪ್ರತಿಯೊಬ್ಬರೂ ಅಮ್ಮನವರ ಅನುಯಾಯಿಗಳಾಗಿ ಅವರ ಗೆಲುವಿಗೆ ಶ್ರಮಿಸುತ್ತಾ ಬಂದಿದ್ದಾರೆಂಬುದು ಹೆಮ್ಮೆಯ ಸಂಗತಿ. ಆ ಊರಿಗೆ ಗುಂಡ್ಲುಪೇಟೆ ತಾಲ್ಲೂಕಿನ ಹುಂಡೀಪುರ ಗ್ರಾಮದ ಹೆಚ್‌ಕೆ. ಶಿವರುದ್ರಪ್ಪನವರು ಚುನಾವಣಾ ಪ್ರಚಾರಕ್ಕಾಗಿ ಹೋಗಿದ್ದರು. ಆ ಗ್ರಾಮದ ಜನರು ಅವರನ್ನು ಅಭಿಮಾನದಿಂದ ಸ್ವಾಗತಿಸಿದ್ದರೂ ಗ್ರಾಮದ ತಮ್ಮ ಮತಗಳನ್ನು ನಾಗರತ್ನಮ್ಮನವರಿಗೆ ಚಲಾಯಿಸಿ ಎಲ್ಲರಲ್ಲೂ ಅಚ್ಚರಿ ಮೂಡಿಸಿದ್ದರು. ಹೀಗೆ ಕೆ.ಎಸ್. ನಾಗರತ್ನಮ್ಮನವರು ಗುಂಡ್ಲುಪೇಟೆ ತಾಲ್ಲೂಕಿನ ಎಲ್ಲಾ ಹಳ್ಳಿಗಳಿಗೂ ಭೇಟಿ ಕೊಟ್ಟು ತಮ್ಮ ಗೆಲುವಿಗೆ ಸಹಕರಿಸಿ ಎಂದು ಮನವಿ ಮಾಡುತ್ತಿದ್ದರು. ಇಂತಹ ಮನವಿಗೆ ಓಗೊಟ್ಟ ಜನರು ನಾಗರತ್ನಮ್ಮನವರನ್ನು ಚುನಾವಣೆಯಲ್ಲಿ ಜಯಭೇರಿ ಬಾರಿಸುವಂತೆ ಮಾಡಿದರು. ಆ ವೇಳೆಗಾಗಲೇ ಮೂಡಗೂರು ಎಂ.ಎಸ್. ಪುಟ್ಟವೀರಪ್ಪನವರ ಮಗನಾದ ಎಂ.ಪಿ. ವೃಷಬೇಂದ್ರಪ್ಪ ಎಂಬುವರು ಅಮ್ಮನವರ ಒಡನಾಡಿಯಾಗಿ ಅನೇಕ ವಿಚಾರಗಳಲ್ಲಿ ಅವರಿಗೆ ಮಾರ್ಗದರ್ಶನ ಮಾಡುತ್ತಾ ಬಂದಿದ್ದರೂ. ಇದರಿಂದ ಮೂಡಗೂರು ಗೌಡರ ಮನೆಗೂ ಕಬ್ಬಹಳ್ಳಿಯ ಕೆ.ಸಿ. ಸುಬ್ಬಣ್ಣನವರ ಪತ್ನಿ ಕೆ.ಎಸ್. ನಾಗರತ್ನಮ್ಮನವರ ಬಳಗಕ್ಕೂ ಹೆಚ್ಚು ನಿಕಟತೆ ಬೆಳೆಯ ತೊಡಗಿತು. ಅಮ್ಮನವರಿಗೆ ಪ್ರತಿಸ್ಪರ್ಧಿಯಾಗಿ ಕಬ್ಬಹಳ್ಳಿ ಗ್ರಾಮದ ಯುವ ವಕೀಲರಾಗಿದ್ದ ಜಯದೇವಪ್ಪ ಎಂಬುವರೂ ಮತ್ತು ಹೆಗ್ಗಡಹಳ್ಳಿ ಗ್ರಾಮದ ಯುವ ವಕೀಲರಾಗಿದ್ದ ಬಸಪ್ಪ ಎಂಬುವರೂ ಚುನಾವಣೆಯಲ್ಲಿ ನಿಂತು ಸೋಲು ಅನುಭವಿಸಿದ್ದರು ಎಂಬುದು ಗಮನಾರ್ಹವಾದ ಸಂಗತಿಯಾಗಿದೆ.

ಗುಂಡ್ಲು ಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ 'ಅಮ್ಮ' ಎಂದೇ ಜನಪ್ರಿಯವಾಗಿದ್ದ ಮಾಜಿ ಸಚಿವರು ಹಾಗೂ ಮಾಜಿ ವಿಧಾನ ಸಭಾಧ್ಯಕ್ಷರು ಆಗಿದ್ದ ಕೆ.ಎಸ್. ನಾಗರತ್ನಮ್ಮನವರು 7 ಬಾರಿ ಒಂದೇ ಕ್ಷೇತ್ರದಿಂದ ಆಯ್ಕೆಯಾಗಿ ದಾಖಲೆ ನಿರ್ಮಿಸಿರುವುದು ಅವರ ಶ್ರೇಷ್ಠ ವ್ಯಕ್ತಿತ್ವವನ್ನು ತಿಳಿಸುತ್ತದೆ. 1952 ರಲ್ಲಿ ಮೊದಲ ಭಾರಿಗೆ ನಡೆದ ಚುನಾವಣೆಯಲ್ಲಿ ಹುಂಡೀಪುರ ಹೆಚ್.ಕೆ. ರುದ್ರಪ್ಪನವರು ಆಯ್ಕೆಯಾಗಿದ್ದರು. 1957ರಿಂದ 1989ರ ವರೆಗೆ ಸತತವಾಗಿ ಆಯ್ಕೆಯಾಗಬೇಕಾಗಿತ್ತು. ಆದರೆ 1978ರಲ್ಲಿ ಅವರು ಸೋಲು ಅನುಭವಿಸಬೇಕಾಯಿತು. ಒಟ್ಟಿನಲ್ಲಿ ಸೋತಿದ್ದರೂ ಅವರು ಕ್ಷೇತ್ರದ ಕೆಲಸ ಕಾರ್ಯಗಳನ್ನು ಮರೆತಿರಲಿಲ್ಲ. ಆದ್ದರಿಂದ ಅವರು ಸತತವಾಗಿ ವಿಧಾನ ಸಭಾ ಸದಸ್ಯರಾಗಿದ್ದರೆಂದೇ ಪರಿಗಣಿಸಬಹುದು. ಒಟ್ಟಿನಲ್ಲಿ ಅಮ್ಮನವರು ಒಂದು ಭಾರಿ ಹೊರತು ಪಡಿಸಿ ತಮ್ಮ ಜೀವಿತ ಅವಧಿಯಲ್ಲಿ ಅವರು ತಮ್ಮ ಕ್ಷೇತ್ರವನ್ನು ಯಾರಿಗೂ ಬಿಟ್ಟುಕೊಟ್ಟಿರಲಿಲ್ಲ. ಹೀಗೆ ಅಮ್ಮನವರು ತಮ್ಮ ಕ್ಷೇತ್ರದಲ್ಲಿ ಜಯಭೇರಿ ಭಾರಿಸುತ್ತಾ ಸಾಗಿದ್ದರು. ಇವರ ಎದುರು ಯಾರೇ ನಿಂತರೂ ಅವರು ಕೇವಲ ಸಾಂಕೇತಿಕವಾದ ಸ್ಪರ್ಧೆಯಾಗಿರುತ್ತಿತ್ತು. ಈಗಿನ ವಿದಾನ ಸಭಾ ಸದಸ್ಯರಾಗಿರುವ ಗುಂಡ್ಲುಪೇಟೆ ಶಾಸಕರಾದ ಹೆಚ್.ಎಸ್. ಮಹದೇವ ಪ್ರಸಾದ್‌ರವರ ತಂದೆ ಹೆಚ್.ಎನ್. ಶ್ರೀಕಂಠಶೆಟ್ಟರು ಅಮ್ಮನವರ ಎದುರು ಸ್ಪರ್ಧಿಸಿ ಅನೇಕ ಭಾರಿ ಸೋಲು ಅನುಭವಿಸಿದ್ದರು.

ನಂತರ ಹೆಚ್.ಎಸ್. ಮಹದೇವ ಪ್ರಸಾದ್‌ರವರು ಅಮ್ಮನವರ ಎದುರು ನಿಂತು ಎರಡು ಭಾರಿ ಪರಾಭವಗೊಂಡಿದ್ದರು. ಆದರೆ 1989ರಲ್ಲಿ ಹೆಚ್.ಎಸ್. ಮಹದೇವ ಪ್ರಸಾದ್‌ರವರು ಅಮ್ಮನವರಿಗೆ ತೀವ್ರ ಸ್ಪರ್ಧೆ ನೀಡಿ ಧೂಳು ಕುಡಿಸಿದ್ದರು. ನಂತರ 1994ರಿಂದ ಸತತವಾಗಿ ಹೆಚ್.ಎಸ್. ಮಹದೇವ ಪ್ರಸಾದ್‌ರವರು ಬೇರೆ ಬೇರೆ ಚಿಹ್ನೆಗಳ ಅಡಿಯಲ್ಲಿ ಸ್ಪರ್ಧಿಸಿ ಆಯ್ಕೆಯಾಗಿ ಅಮ್ಮನವರು ನಡೆದ ದಾರಿಯನ್ನು 100ಕ್ಕೆ 100 ರಷ್ಟು ತುಳಿಯಲು ಸಾಧ್ಯವಾಗದಿದ್ದರೂ ರಾಜಕೀಯ ಚಾಣಾಕ್ಷತನದಿಂದ ಮುನ್ನಡೆಯುತ್ತಿದ್ದಾರೆ. ಇದು ಅಮ್ಮನವರ ಮರಣದ ತರುವಾಯ ನಡೆದಿರುವ ಚುನಾವಣೆಯ ಅಲೆ ಎಂದು ಭಾವಿಸಬಹುದು. ಅಮ್ಮನವರು ಇಂದು ಜನತೆಯ ಮುಂದೆ ಜೀವಂತವಾಗಿ ಇಲ್ಲದಿದ್ದರೂ ಅವರು ಕೈಗೊಂಡ ಕೆಲಸ ಕಾರ್ಯಗಳು ಜನತೆಯ ಮುಂದೆ ಕಾಣುತ್ತವೆ. ಅಮ್ಮನವರು ಸೋಲನ್ನು ಅನುಭವಿಸಿದ ಸಂದರ್ಭದಲ್ಲಿ ಅವರ ಅನುಯಾಯಿಗಳೆಲ್ಲರೂ ಅವರಿಗೆ ಸಾಂತ್ವಾನ ಹೇಳಿ ಸಮಾಧಾನ ಪಡಿಸುತ್ತಿದ್ದರು. ಅಲ್ಲದೆ ಮುಂದಿನ ಚುನಾವಣೆಯಲ್ಲಿ ತಮ್ಮ ಗೆಲುವಿಗೆ ಏನೇನೂ ಕಾರ್ಯತಂತ್ರ ರೂಪಿಸಬೇಕೆಂದು ಆಲೋಚನೆ ಮಾಡುತ್ತಿದ್ದರು.

ತಮ್ಮ ಪತಿಯು ಮರಣ ಹೊಂದಿದ ನಂತರ ಅಮ್ಮನವರ ಮನೆಯಲ್ಲಿ ಕೃಷಿ ಚಟುವಟಿಕೆ ನೋಡಿಕೊಳ್ಳಲು ಮನೆಯ ಆಡಲಿತ ನಿರ್ವಹಿಸಲು ಇನ್ನಿತರ ಕೆಲಸ ಕಾರ್ಯಗಳನ್ನು ಮಾಡಲು ಅನೇಕ ಜನ ನಂಬಿಕಸ್ಥರು ಅವರ ಮನೆಯಲ್ಲಿ ತಲಾ ಊರಿದ್ದರು. ಅಮ್ಮನವರು ಸರ್ಕಾರದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ತಮ್ಮ ಆಪ್ತ ಸಹಾಯಕನನ್ನಾಗಿ ಶ್ರೀ ಶಾಂತಪ್ಪ ಎಂಬುವವರನ್ನು ನೇಮಿಸಿಕೊಂಡಿದ್ದರು. ತಮ್ಮ ಮನೆಯ ಕೃಷಿ ಚಟುವಟಿಕೆ ಮೇಲ್ವಿಚಾರಣೆಗೆ ಶಿವಮಲ್ಲಪ್ಪ ಎಂಬುವವರನ್ನು ಗೊತ್ತು ಮಾಡಿದ್ದರು. ಆಡಳಿತ ಮೇಲ್ವಿಚಾರಣೆಗಾಗಿ ಬೇಗೂರು ಮಾಸ್ಟರು ಎಂದು ಪ್ರಸಿದ್ಧ ಪಡೆದಿದ್ದ ಮಲ್ಲಿಕಾರ್ಜುನಪ್ಪ ಎಂಬುವವರನ್ನು ನೇಮಕ ಮಾಡಿಕೊಂಡಿದ್ದರು. ಇವರೆಲ್ಲರೂ ಅಮ್ಮನವರ ಮಾರ್ಗದರ್ಶನದಂತೆ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ರಾಜಕೀಯ ಚಿಂತನೆಯ ಜೊತೆಗೆ ಗೃಹ ಕೃತ್ಯದ ಚಿಂತನೆ ನಡೆಯುತ್ತಲೇ ಇತ್ತು. ಸೋಲೇ ಬರಲಿ, ಗೆಲುವೇ ಬರಲಿ ಸೋಲೆಂದು ಕುಗ್ಗದ, ಗೆಲುವೆಂದು ಹಿಗ್ಗದೆ ಕ್ಷೇತ್ರದ ಬೆಳವಣಿಗೆಗಾಗಿ ಏನೇನೋ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸದಾ ಚಿಂತನೆ ನಡೆಸುತ್ತಿದ್ದರು. ತಮ್ಮ ಊರಾದ ಕಬ್ಬಹಳ್ಳಿ ಗ್ರಾಮದ ಅಭಿವೃದ್ಧಿಯ ಜೊತೆಗೆ ಕ್ಷೇತ್ರದೊಳಗಿನ ಎಲ್ಲಾ ಹಳ್ಳಿಗಳ ಪ್ರಗತಿಗಾಗಿ ದುಡಿಯಬೇಕೆಂಬುದು ಅವರ ಚಿಂತನೆಯಾಗಿತ್ತು. ಯಾವ ಯಾವ ಹಳ್ಳಿಗಳಿಗೆ ರಸ್ತೆಗಳು ಆಗಬೇಕು. ಶಾಲೆಗಳಾಗಬೇಕು. ಕುಡಿಯುವ ನೀರಿನ ಸೌಲಭ್ಯವಾಗಬೇಕು, ವಿದ್ಯುತ್ ಸರಬರಾಜಾಗಬೇಕು, ಆಸ್ಪತ್ರೆಗಳಾಗಬೇಕು ಹೀಗೆ ಅನೇಕ ವಿಧಗಳ ಬೇಕು ಬೇಡಗಳ ಬಗ್ಗೆ ಅಮ್ಮನವರು ಒಂದು ವೇಳಾ ಪಟ್ಟಿಯನ್ನೇ ರಚಿಸಿಕೊಂಡು ಅವುಗಳ ಈಡೇರಿಕೆಗಾಗಿ ಸತತ ಪ್ರಯತ್ನ ನಡೆಸುತ್ತಲೇ ಇದ್ದರು. ಅವರ ಚಿಂತನಾ ಲಹರಿ ಕ್ಷೇತ್ರದ ಅಭಿವೃದ್ಧಿಗಾಗಿ ಮಾತ್ರ ಸೀಮಿತವಾಗಿದ್ದುದರಿಂದ ಕೆ.ಎಸ್. ನಾಗಮ್ಮನವರು ಕ್ಷೇತ್ರಕ್ಕಾಗಿ ಏನನ್ನೂ ಮಾಡಲಿಲ್ಲವೆಂಬ ಟೀಕೆಗಳಿದ್ದರೂ ಅವುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡುವುದು ಅವರ ಚಿಂತನೆಯಾಗಿತ್ತು ಕೆಲವು ಹಳ್ಳಿಗಳಿಗೆ ರಸ್ತೆ ಸಂಪರ್ಕಗಳನ್ನು ನಿರ್ಮಿಸಿಕೊಟ್ಟು ಸಾರಿಗೆ ಸೌಲಭ್ಯದ ವ್ಯವಸ್ಥೆ ಮಾಡುವಲ್ಲಿ ಅವರು ಹರಸಾಹಸ ಪಡಬೇಕಾಯಿತು ಅಮ್ಮನವರು. ಆಯ್ಕೆ ಯಾದಗಲೆಲ್ಲಾ

ಹೆಚ್ಚಾಗಿ ಮೈಸೂರಿನಲ್ಲಿ ನೆಲಸುತ್ತಿದ್ದರು. ನಂತರ ಅವರು ಬೆಂಗಳೂರಿನ ಸಮೀಪದಲ್ಲಿ ತೋಟ ಒಂದನ್ನು ಮಾಡಿಕೊಂಡು ಹೆಚ್ಚು ಕಾಲ ಕಳೆಯಲಾರಂಭಿಸಿದರು. ಇದರಿಂದ ಜನತೆ ಅವರು ಕ್ಷೇತ್ರಕ್ಕೆ ಹೆಚ್ಚು ದುಡಿಯಲಿಲ್ಲವೆಂದು ಟೀಕೆ ಮಾಡಿದ್ದೂ ಉಂಟು, ಇದೆಲ್ಲವನ್ನು ಬದಿಗೊತ್ತಿ ಅವರು ಕಾರ್ಯ ಪ್ರವೃತ್ತರಾಗುತ್ತಿದ್ದರು.

ಕೃಷಿ ಮತ್ತು ನೀರಾವರಿ:

ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು, ಗುಂಡ್ಲುಪೇಟೆ ತಾಲ್ಲೂಕಿನ ಕೃಷಿ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕೆಂದು ಚಿಂತನೆ ಮಾಡಿದ್ದರು. ಗುಂಡ್ಲುಪೇಟೆ ತಾಲ್ಲೂಕು ಕರ್ನಾಟಕ ರಾಜ್ಯದ ಗಡೀ ಭಾಗವಾಗಿದ್ದ ತಮಿಳುನಾಡಿಗೆ ಹೊಂದಿಕೊಂಡಂತೆ ಇದು ಇಲ್ಲಿ ಫಲವತ್ತಾದ ಭೂಮಿ ಇದೆ ಕರ್ನಾಟಕದ ಗಡಿ ಭಾಗದಲ್ಲಿ ಅಪಾರವಾದ ವನ ಸಂಪತ್ತಿದೆ ಬಂಡೀಪುರ ಅಭಯಾರಣ್ಯವು ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ನಡುವೆ ಇದ್ದು ಹೇರಳವಾದ ಅರಣ್ಯ ಸಂಪತ್ತನ್ನು ಹೊಂದಿದೆ. ಜೊತೆಗೆ ಅನೇಕ ಪ್ರಾಣಿಗಳ ದಂಡನ್ನೇ ಇಲ್ಲಿ ಕಾಣಬಹುದು ಈ ಪ್ರಾಣಿಗಳ ಅರಣ್ಯ ಪ್ರದೇಶದ ಹಂಚಿನಲ್ಲಿರುವ ರೈತರ ಜಮೀನಿಗೆ ನುಗ್ಗಿ ಅವರು ಬೆಳೆಯುತ್ತಿದ್ದ ಫಲಸನ್ನು ನಾಶ ಮಾಡುತ್ತಿದ್ದವು. ಇದರಿಂದ ಕೃಷಿಕರಿಗೆ ಅಪಾರವಾದ ನಷ್ಟ ಸಂಭವಿಸುತ್ತಿತ್ತು. ಕೃಷಿಕರ ಬದುಕನ್ನೆ ರಕ್ಷಿಸುವುದರ ಜೊತೆಗೆ ಪ್ರಾಣಿ ಸಂಪತ್ತು ಉಳಿಸಬೇಕೆಂಬ ಯೋಜನೆ ನಾಗರತ್ನಮ್ಮನವರಲ್ಲಿತ್ತು. ಅದಕ್ಕಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿ ಸರ್ಕಾರದ ಮುಂದಿಡುವ ಚಿಂತನೆ ಆವರದಾಗಿತ್ತು ಇದು ಈಡೇರದ ನಂತರ ಹೆಚ್.ಡಿ. ಕೋಟೆ ತಾಲ್ಲೂಕಿನ ಬಿರ್‌ವಾಳ್ ಜಲಾಶಯದಿಂದ ಗುಂಡ್ಲುಪೇಟೆ ತಾಲ್ಲೂಕಿಗೆ ನೀರನ್ನು ತರುವ ಯೋಜನೆ ಅವರ ಮನಸ್ಸಿನಲ್ಲಿತ್ತು. ಅ ಮೂಲಕ ಕೃಷಿಕರ ಬದುಕನ್ನು ಅಸನು ಮಾಡುವುದು ಅವರ ಚಿಂತನೆಯಾಗಿತ್ತು. ಆದರೆ ನಾಗರತ್ನಮ್ಮನವರ ರಾಜಕೀಯ ಬದುಕು ಬಹು ಎತ್ತರದಲ್ಲಿ ಇದ್ದುದರಿಂದ ಇವುಗಳ ಕಡೆಗೆ ಅವರು ಹೆಚ್ಚು ಗಮನ ಕೊಡಲಾಗಲಿಲ್ಲ. ಇದರಿಂದಾಗಿ ಕೃಷಿಕರ ಬದುಕು ಉತ್ತಮವಾಗದೆ ಹಳೆಯ ಪದ್ಧತಿಯ ಮಳೆಯ ಆಶ್ರಯದಿಂದಲೇ ಇಂದಿಗೂ ಮುಂದುವರಿಯುತ್ತಿದೆ. ನಾಗರತ್ನಮ್ಮನವರ ಮರಣ ನಂತರ ಈ ಕ್ಷೇತ್ರದ ಜನ ಪ್ರತಿನಿಧಿಗಳು ಗುಂಡ್ಲುಪೇಟೆ ತಾಲ್ಲೂಕಿನ ಕೃಷಿ ಭೂಮಿಗೆ ನೀರನ್ನು ಉಣಿಸುವ ಚಿಂತನೆಯ ಕಡೆಗೆ ಹೆಚ್ಚು ಒತ್ತು ಕೊಡಲಿಲ್ಲ. ಒಟ್ಟಿನಲ್ಲಿ ರೈತರು ರಾಜಕಾರಣಿಗಳನ್ನು ನಂಬದೆ ತಮ್ಮದೇ ಆದ ಕೃಷಿ ಬದುಕನ್ನು ರೂಪಿಸಿಕೊಳ್ಳುತ್ತಿದ್ದಾರೆ.

ಕೈಗಾರಿಕೆ:

ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆಯ 4 ತಾಲ್ಲೂಕುಗಳಲ್ಲಿ ಒಂದಾಗಿದೆ. ಈ ನಾಲ್ಕು ತಾಲ್ಲೂಕುಗಳು ಹೆಚ್ಚು ಕಡಿಮೆ ತಮಿಳುನಾಡು ಗಡಿ ಪ್ರದೇಶಕ್ಕೆ ಅಂಟಿಹೊಂಡಿವೆ. ಇಲ್ಲಿ ಕೃಷಿ ಅಭಿವೃದ್ಧಿ ಚಟುವಟಿಕೆಗಳು ಸಾಕಷ್ಟು ಮುಂದುವರೆದಿಲ್ಲ. ಕೊಳ್ಳೇಗಾಲ, ಯಳಂದೂರು, ಚಾಮರಾಜನಗರ,

ಗುಂಡ್ಲುಪೇಟೆ ಈ ಭಾಗಗಳಲ್ಲಿ ಅಪಾರ ಅರಣ್ಯ ಸಂಪತ್ತದೆ. ಬೇಕಾದ ಖಚ್ಚಾ ವಸ್ತುವೂ ದೊರಕುತ್ತದೆ. ಅಪಾರವಾದ ಖನಿಜ ಸಂಪತ್ತಿದೆ. ಅದರಲ್ಲೂ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ವಿಧಾನ ಸಭಾ ಕ್ಷೇತ್ರದವಾದ ಗುಂಡ್ಲುಪೇಟೆಯು ದಕ್ಷಿಣದ ಗಡಿಭಾಗದಲ್ಲಿದ್ದು, ಭಾರಿ ಪ್ರಮಾಣದ ತೇಗ, ಬೀಟೆ, ಹೊನ್ನೆ, ಬಿದುರು ಮೊದಲಾದ ಬೆಲೆಯುಳ್ಳ ಮರಗಳನ್ನು ಹೊಂದಿದೆ. ಈ ಜಾತಿಯ ಮರಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಡು ತಾಲ್ಲೂಕಿನ ವ್ಯಾಪ್ತಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂಬ ಚಿಂತನೆಯನ್ನು ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ನಡೆಸಿದ್ದರು. ಆದರೆ ಅರಣ್ಯದ ಖಚ್ಚಾ ಸರಕುಗಳನ್ನು ಬಳಸಿಕೊಂಡು ಕೈಗಾರಿಕೆಗಳನ್ನು ಸ್ಥಾಪಿಸುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಏಕೆಂದರೆ ಈ ಅರಣ್ಯ ಪ್ರದೇಶಗಳು ರಾಷ್ಟ್ರೀಯ ಸಂಪತ್ತುಗಳಾಗಿದ್ದು, ಕೈಗಾರಿಕೆಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರದ ಅನುಮತಿಬೇಕಾಗಿತ್ತು. ಈ ಅನುಮತಿ ದೊರೆಯದ ಕಾರಣ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಕೈಗಾರಿಕಾ ಸ್ಥಾಪನೆಯ ವಿಚಾರ ನೆನೆಗುದಿಗೆ ಬೀಳುವಂತಾಯಿತು. ಆದರೂ ಅಮ್ಮನವರು ಕೆಲವು ಗ್ರಾಮಗಳಲ್ಲಿ ತೆಂಗಿನ ನಾರಿನ ಕೈಗಾರಿಕೆಗಳನ್ನು ಸ್ಥಾಪಿಸಿ ಅನೇಕ ಮಹಿಳೆಯರಿಗೆ ಉದ್ಯೋಗ ದೊರಕಿಸಿಕೊಟ್ಟಿದ್ದಾರೆ. ಈ ದಿಕ್ಕಿನಲ್ಲಿ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಚಿಂತನೆಗೆ ಯಶಸ್ಸು ಕಂಡಿದೆ.

ಈ ಇಂಡಸ್ಟ್ರೀಸ್ ಡಿಮ್ಯಾಂಡುಗಳ ಮೇಲೆ ಮಾತನಾಡುವ ಸಂದರ್ಭದಲ್ಲಿ ನಾನು ನನ್ನ ಕೆಲವು ವಿಚಾರಗಳನ್ನು ಈ ಸಭೆಯ ಮುಂದಿಡಬೇಕೆಂದು ನಿಂತಿದ್ದೇನೆ. ಈಗ ತಾನೆ ನಮ್ಮ ಶ್ರೀ ಶಿವಪ್ಪನವರೂ ಮತ್ತು ಶ್ರೀ ಮಾದಯ್ಯಗೌಡರೂ ಹೇಳಿದ ಹಾಗೆ ನಮ್ಮ ಮೈಸೂರು ದೇಶ ಈ ಕೈಗಾರಿಕೆಗಳಲ್ಲಿ ಬಹಳ ಮುಂದುವರಿದ ದೇಶವಾಗಿತ್ತು. ಆದರೆ ಈಗ ಇದು ಬಹಳ ಹಿಂದು ಹಿಂದಕ್ಕೆ ಹೋಗುತ್ತಿದೆಯೆಂದು ವ್ಯಸನಪಡತಕ್ಕವರಲ್ಲಿ ನಾನೂ ಕೂಡ ಒಬ್ಬಳಾಗಿದ್ದೇನೆ. ಆದರೆ ಈಗ ತಾನೇ ಮಾತನಾಡಿದ ಶ್ರೀ ಟಿ.ಮಾದಯ್ಯಗೌಡರು ಈಗೀಗ ನಮ್ಮಲ್ಲಿ ಕೆಲವು ಕೈಗಾರಿಕೆಗಳು ಅಭಿವೃದ್ಧಿ ಹೊಂದುತ್ತಿವೆಯೆಂದು ಅವರೇನೋ ಒಂದು ರೀತಿಯಲ್ಲಿ ಸ್ವಲ್ಪ ಸಮಾಧಾನವನ್ನು ಮಾಡಿಕೊಂಡರು. ಆದರೆ ನಾನು ಅವರ ಹಾಗೆ ಸಮಾಧಾನ ಪಟ್ಟುಕೊಳ್ಳುವ ಹಾಗಿಲ್ಲ. ಇವುಗಳ ಅಭಿವೃದ್ದಿ ಹಿಂದು ಹಿಂದಕ್ಕೆ ಹೋಗುತ್ತಿದೆ ಎಂಬ ಶಬ್ದಕ್ಕಿಂತಲೂ ಇನ್ನೊಂದು ಶಬ್ದವಿದ್ದರೆ ಅದನ್ನೂ ಕೂಡ ಬಳಸಬಹುದು. ಅಂದರೆ ಇದು ಅಷ್ಟು ಹಿಂದಕ್ಕೆ ಹೋಗುತ್ತಿದೆ ಎಂದು ಹೇಳಬಹುದು. ಆದರೆ ಈ ಹಿಂದೆ ಚರ್ಚೆ ನಡೆದ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಕಾಲದಲ್ಲೂ ಮತ್ತು ಹಿಂದೆ ನಡೆದ ಬಡ್ಜೆಟ್ ಚರ್ಚೆಯ ಕಾಲದಲ್ಲೂ ನಾನು ನಮ್ಮಲ್ಲಿ ಈ ಅಲ್ಯೂಮೀನಿಯಂ ಮತ್ತು ಸ್ಟೀಲ್ ಪ್ಲಾಂಟ್‌ಗಳ ಸ್ಥಾಪನೆಯ ವಿಚಾರ ಎಲ್ಲಿಗೆ ಬಂದಿದೆ ಎಂದು ನಾನು ಒಂದು ಪ್ರಶ್ನೆಯನ್ನು ಹಾಕಿದ್ದೆ. ಆದರೆ ಅದಕ್ಕೆ ಜವಾಬೇ ಇರಲಿಲ್ಲ. ಈಗ ನಮ್ಮ ಕೈಗಾರಿಕೆಯ ಮಂತ್ರಿಗಳಾದರೂ ಅಲ್ಯೂಮೀನಿಯಂ ಫ್ಯಾಕ್ಟರಿಯ ವಿಚಾರ ಎಲ್ಲಿಗೆ ಬಂದಿದೆ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಾನು ಕೆಲವು ಪತ್ರಿಕೆಗಳಲ್ಲಿ ಸ್ಟೀಲ್ ಪ್ಲಾಂಟನ್ನು ಗೋವಾದಲ್ಲೋ ಅಥವಾ ಹೊಸಪೇಟೆಯ ಬಳಿಯೋ ಎಲ್ಲಿಯೋ ಒಂದು ಕಡೆ ಹಾಕಲಾಗುತ್ತದೆಂದೂ ಈ ವಿಚಾರದಲ್ಲಿ ನಮ್ಮ ಸರ್ಕಾರದವರು

ಕೇಂದ್ರ ಸರ್ಕಾರದೊಡನೆ ಕನ್‌ಸಲ್ಟೇಷನ್ ನಡೆಸುತ್ತಿದ್ದಾರೆಂತಲೂ ಓದಿದ ಜ್ಞಾಪಕವಿದೆ. ಈ ಎರಡು ಹೆಸರುಗಳನ್ನು ಕೇಳಿದರೆ ನನಗನಿಸುತ್ತದೆ. ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲ ಎಂದ ಹಾಗೆ ಎಲ್ಲಿ ಇದು ಗೋವಾಕ್ಕೆ ಹೋಗಿ ಬಿಡುತ್ತದೊ ಎಂಬ ಶಂಕೆ ನನಗೆ ಬಂದಿದೆ. ಹಾಗೊಂದು ವೇಳೆ ಇದನ್ನು ಗೋವಾದಲ್ಲೇ ಹಾಕಬೇಕೆಂದು ನಿರ್ಧಾರವಾದರೆ ಮುಂದೆ ನಮ್ಮ ಶರಾವತಿಯಲ್ಲಿ ತಯಾರಾಗತಕ್ಕ ಪವರನ್ನೆಲ್ಲಾ (ವಿದ್ಯುಚ್ಛಕ್ತಿ) ನಾವು ಏನು ಮಾಡಬೇಕು, ಅದನ್ನು ನಾವು ಬಳಸುವುದು ಹೇಗೆ, ನಮಗೆ ಆ ಪವರನ್ನೆಲ್ಲಾ ಉಪಯೋಗಿಸಲು ಅವಕಾಶವೆಲ್ಲಿದೆ.

ಈಗ ನಾವು ಸುಮಾರು 100 ಕೋಟಿ ರೂಪಾಯಿನ ಪವರನ್ನು ಉತ್ಪಾದನೆ ಮಾಡುತ್ತಿದ್ದೇವೆ. ಅದನ್ನೆಲ್ಲಾ ಉಪಯೋಗಿಸುವುದಕ್ಕೆ ಅವಕಾಶವೆಲ್ಲಿದೆ? ಈ ವಿಚಾರಗಳನ್ನೆಲ್ಲಾ ಪ್ರಬಲವಾದ ಕಾರಣಗಳಿವೆಯೆಂದು ಅವರಿಗೆ ಮನವರಿಕೆಯಾಗುವಂತೆ ತಿಳಿಸಬೇಕು. ಅಲ್ಲಿ ಹೈಪರ್ಸೆಂಟೇಜ್ ಓರ್ ಸಿಕ್ಕುತ್ತದೆ. ಈಗ ಹೊಸಪೇಟೆಯಿಂದ ಮದ್ರಾಸಿಗೆ ಬ್ರಾಡ್‌ಗೇಜ್ ರೈಲ್ವೆ ಲೈನು ಕೇಳುವುದಕ್ಕೆ ಬಹಳ ಅನುಕೂಲವಾಗುತ್ತದೆ. ನಮ್ಮಲ್ಲಿ ಪವರ್ ಸಹಾ ಇರುತ್ತದೆ. ಈ ಎಲ್ಲ ಕಾರಣಗಳಿಂದ ನಮ್ಮ ಸರ್ಕಾರದವರು ತಮ್ಮ ಎಲ್ಲಾ ಇನ್‌ಫ್ಲುಯೆನ್ಸನ್ನೂ ಉಪಯೋಗಿಸಿ ಅದನ್ನು ಆ ಹೊಸಪೇಟೆಯಲ್ಲೇ ಸ್ಥಾಪನೆಯಾಗುವಂತೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಇವರು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ಒಂದು ಕಟ್‌ಮೋಷನ್ ತಂದಿದ್ದಾರೆ. ನನಗೆ ಇದರಲ್ಲಿ ಸಂಪೂರ್ಣ ನಂಬಿಕೆಯಿದೆ. ನಾನು ಈ ಕೈಗಾರಿಕೆಗಳಲ್ಲಿ ಮತ್ತು ವ್ಯವಸಾಯದಲ್ಲಿ ಅಭಿವೃದ್ಧಿ ಹೊಂದಿರತಕ್ಕ ಯಾವ ಯಾವ ದೇಶಗಳನ್ನು ನೋಡಿದ್ದೇನೋ ಮತ್ತು ಏನು ವಿಚಾರಗಳನ್ನು ಓದಿದ್ದೇನೋ ಆ ದೇಶಗಳಲೆಲ್ಲಾ ಎಲ್ಲಿ ಕೈಗಾರಿಕೆ ಮುಂದುವರಿದಿರುತ್ತದೆಯೋ ಅಲ್ಲಿ ಜನರೂ ಮುಂದುವರಿದಿರುತ್ತಾರೆ. ಜಪಾನಿನಲ್ಲಿ ಪ್ರತಿಯೊಬ್ಬರೂ ಇಂಡಸ್ಟ್ರಿಯಲಿಸ್ಟುಗಳೇ ಆಗಿದ್ದಾರೆ. ಇಲ್ಲಿ ಅಥವಾ ಧಾರವಾಡದಲ್ಲೇ ಏಕೆ ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂದು ಕೆಲವರು ಕೇಳಬಹುದು. ಅದಕ್ಕೆ ನಾನು ಹೇಳುವುದು ಎಲ್ಲಿ ವ್ಯವಸಾಯಕ್ಕೆ ನೀರಾವರಿ ಸೌಕರ್ಯಗಳಿರುವುದಿಲ್ಲವೋ ಅಂಥ ಸ್ಥಳಗಳಿಗೆ ಮೊದಲು ಈ ಅನುಕೂಲವನ್ನು ಕಲ್ಪಿಸಬೇಕೆಂದು ಹೇಳುತ್ತೇನೆ. ಗುಂಡ್ಲುಪೇಟೆಯಲ್ಲಿ 2-3 ಪ್ರಾಜೆಕ್ಟ್‌ಗಳನ್ನು ಕಟ್ಟಿದರೆ ಅಲ್ಲಿ 15-20 ಸಾವಿರ ಎಕರೆ ನೀರಾವರಿಯಾಗುತ್ತದೆ. ನಮ್ಮ ರಾಜ್ಯದಲ್ಲಿ ವ್ಯವಸಾಯದ ಕಸುಬನ್ನವಲಂಬಿಸಿರುವವರಿಗೆ ವರ್ಷದಲ್ಲಿಯೊಂದು 5-6 ತಿಂಗಳು ಯಾವ ಉದ್ಯೋಗವೂ ಇರುವುದಿಲ್ಲ. ಅಂಥವರಿಗಾಗಿ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲೂ ಗೃಹಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ತಾಲ್ಲೂಕಿನಲ್ಲಿರತಕ್ಕ ಗೋಪಾಲಸ್ವಾಮಿ ಬೆಟ್ಟದಲ್ಲಿ ಬೆಲೆಬಾಳತಕ್ಕ ಅನೇಕ ಬಗೆಯ ರತ್ನಗಳು ಸಿಗುತ್ತವೆಂದು ಹೇಳುತ್ತಿದ್ದಾರೆ. ಇದನ್ನೂ ಸಹಾ ನೋಡಿಸಿ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಹಾಗೊಂದು ವೇಳೆ ಸರ್ಕಾರದವರಿಗೆ ಅದೂ ಸಾಧ್ಯವಾಗದೆ ಹೋದರೆ ಮಣ್ಣಿನಿಂದ ಆಗತಕ್ಕ ಹೆಂಚು ಇಂಥ ಕಾರ್ಖಾನೆಗಳನ್ನಾದರೂ ಅಲ್ಲಿ ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹೀಗೆ ಏನಾದರೂ ಕೈಗಾರಿಕೆಯನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಸ್ಥಾಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಈ ಕೈಗಾರಿಕೆಗಳನ್ನು ಸ್ಥಾಪಿಸಲು ಯಾವ ರಾ ಮೆಟೀರಿಯಲ್ ಸಿಕ್ಕದಿದ್ದರೂ ಈಗ ಅಲ್ಲಿ ರೇಷ್ಮೆ ಬೆಳೆಯನ್ನು ಬೆಳೆಸುವುದು ಪ್ರಾರಂಭವಾಗಿದೆ. ಇದೇ ವಿಚಾರದಲ್ಲಿ ರೇಷ್ಮೆ ಕ್ವಾಲಿಟಿಯನ್ನು ಇನ್ನೂ ಉತ್ತಮಗೊಳಿಸಬೇಕೆಂದು ಮೊನ್ನೆ ತಾನೇ ಪ್ಲಾನಿಂಗ್ ಕಮೀಷನ್‌ನ ವೈಸ್ ಛೇರ್ಮನ್ನರ ಒಂದು ಹೇಳಿಕೆಯನ್ನು ನಾನು ಪತ್ರಿಕೆಗಳಲ್ಲಿ ಓದಿದೆನು. ಆದರೆ ಈ ಹಿಂದೆ ಮಾತನಾಡಿದ ಶ್ರೀಮಾನ್ ಎಂ.ಸಿ.ಬಸಪ್ಪನವರು ರೇಷ್ಮೆ ವಿಚಾರವಾಗಿ ಮಾತನಾಡುತ್ತಾ ಇದರಲ್ಲಿ ಎಷ್ಟು ವಿಭಾಗವಿದೆ, ಇದನ್ನು ಎಷ್ಟು ಎಕರೆಗಳಲ್ಲಿ ಬೆಳೆಯಲಾಗುತ್ತಿದೆ, ಇದರಲ್ಲಿ ಎಷ್ಟು ಜಾತಿಯಿರುತ್ತದೆ ಎಂಬತಕ್ಕ ವಿಚಾರಗಳನ್ನೆಲ್ಲಾ ಅವರು ಪ್ರಸ್ತಾಪ ಮಾಡಿದ್ದಾರೆ. ಆದರೆ ನಾನೀಗ ಅಂಥ ಕಷ್ಟದ ಕೆಲಸಕ್ಕೆ ಹೋಗುವುದಿಲ್ಲ. ಅವರ ವಿಚಾರ ಸರಣಿಗೂ ನನ್ನ ವಿಚಾರಕ್ಕೂ ಸ್ವಲ್ಪ ವ್ಯತ್ಯಾಸವಿರುತ್ತದೆ. ಆದರೆ ನಾನು ಹೇಳಬೇಕೆಂದಿರುವುದೇನೆಂದರೆ ಪ್ರೈವೇಟ್ ಗ್ರೋಯರ್ಸ್‌ಗಳಿಗೆ ಒಳ್ಳೆಯ ಬಿತ್ತನೆಯ ಗೂಡುಗಳನ್ನು ಒದಗಿಸಬೇಕೆಂದೂ ಮತ್ತು ಈ ಉದ್ಯಮವನ್ನು ನ್ಯಾಷನಲೈಸ್ಡ್ ಮಾಡಬೇಕೆಂದು ನನ್ನ ಅಭಿಪ್ರಾಯ. ಹೀಗೆ ಮಾಡಿ ಯಾರ್‍ಯಾರು ರೇಷ್ಮೆಯನ್ನು ದೇಶದಲ್ಲಿ ಬೆಳೆಸುತ್ತಾರೋ ಅಂಥವರಿಗೆಲ್ಲಾ ಒಳ್ಳೆಯ ರೇಷ್ಮೆಯ ಬಿತ್ತನೆಯ ಗೂಡುಗಳು ದೊರೆಯುವಂತೆ ಮಾಡಬೇಕೆಂದು ನನ್ನ ಉದ್ದೇಶ. ಒಳ್ಳೆಯ ಹೈಬ್ರೀಡ್ ರೇಷ್ಮೆ ಗೂಡುಗಳನ್ನು ಉತ್ಪತ್ತಿ ಮಾಡಿ ಅದನ್ನು ಬಿಳಿಗಿರಿ ರಂಗನ ಬೆಟ್ಟದಲ್ಲೂ ಬಿತ್ತನೆ ಮಾಡಿ ಹಿಲ್ ಸ್ಟೇಷನ್‌ಗಳಲ್ಲೂ ಈ ಬೆಳೆಯನ್ನು ಅಭಿವೃದ್ಧಿಪಡಿಸಬೇಕೆಂದು ಹೇಳುತ್ತೇನೆ. ಹೀಗೆ ಆ ನಾಟೀ ಗೂಡುಗಳನ್ನೂ ಸಹಾ ಅವುಗಳ ಉತ್ಪನ್ನವನ್ನು ಹೆಚ್ಚಿಸುವಂತೆ ಪ್ರಯತ್ನ ಪಡಬೇಕೆಂದು ನಾನು ಸೂಚನೆ ನೀಡುತ್ತೇನೆ.

ಇನ್ನು ಎರಡನೆಯದಾಗಿ ಚಾಕೀ ಸೆಂಟರುಗಳ ವಿಷಯವನ್ನು ಕೆಲವು ಸಂದರ್ಭಗಳಲ್ಲಿ ಒಂದೇ ತೋಟದ ಸೊಪ್ಪನ್ನು ತಂದು ಹಾಕಿ ಒಂದೇ ಮಟ್ಟದ ಬೆಳೆಯನ್ನು ಪಡೆಯಬೇಕೆಂದು ಪ್ರಯತ್ನಪಟ್ಟ ಹಲವೆಡೆಗಳಲ್ಲಿ ಸಾಕಿದವರಿಗೆ ಏಟು ಬೀಳತಕ್ಕ ಪ್ರಸಂಗವುಂಟು. ನಾನು ಹೇಳುವುದು ಈ ಚಾಕೀ ಸೆಂಟರುಗಳಿಗೆ 8-10 ಎಕರೆ ಜಮೀನನ್ನು ಕೊಟ್ಟು ಅದನ್ನು ಒಂದು ಮಾಡಲ್ ಸೆಂಟರನ್ನಾಗಿ ಮಾಡಿ ಅಲ್ಲಿ ಒಂದೇ ತರಹ ಚಂದ್ರಿಕೆ, ಒಂದೇ ತರಹ ತಟ್ಟೆ, ಒಂದೇ ತರಹ ಸೊಪ್ಪು ಹೀಗೆ ಎಲ್ಲವೂ ಒಂದೇ ರೀತಿಯಿರುವಂತೆ ಒಂದು ಮಾಡಲ್ಲಾಗಿ ರೇಷ್ಮೆಯನ್ನು ತಯಾರಿಸತಕ್ಕ ವಿಧಾನವನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಹೀಗೆ ಇನ್ನು ಈ ಚರಕಗಳನ್ನು ರೀಪ್ಲೇಸ್ ಮಾಡಿ ಬೇಸನ್‌ಗಳನ್ನು ಕೊಡಬೇಕೆಂದು ಹೇಳುತ್ತೇನೆ. ಈ ಬದಲಾವಣೆಗಳನ್ನು ನಾವು ಮಾಡದೇ ಹೋದರೆ ನಾವು ಈ ದಿವಸ ಈ ರೇಷ್ಮೆಯ ದಾರವನ್ನು ಚೆನ್ನಾಗಿ ತೆಗೆಯುತ್ತೇವೆಂದು ಹೇಳಿಕೊಳ್ಳುತ್ತಿದ್ದರೂ ಮುಂದೆ ಇದರಿಂದ ನಮ್ಮ ದೇಶಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಸಾಧ್ಯವಾದ ಮಟ್ಟಿಗೂ ಬೇಸಿನ್‌ಗಳನ್ನು ಕೊಡಬೇಕೆಂದು ಹೇಳುತ್ತೇನೆ.

ಈ ಬೇಸಿನ್ನುಗಳನ್ನು ರೀಪ್ಲೇಸ್ ಮಾಡುವಾಗ ಸಬ್ಸಿಡೈಜ್ ಮಾಡಬೇಕು. ಅವರಿಗೆ ಸಾಲ ಸಬ್ಸಿಡಿ ಎಲ್ಲಾ ಕೊಡುತ್ತಿದ್ದಾರೆ. ಆದರೆ ಈಗ ರೈತನಿಗೆ ಒಂದು ಕೈಲಿ ಹಣ ಕೊಡುತ್ತಾರೆ. ಇನ್ನೊಂದು ಕೈಲಿ ಹಣವನ್ನು ಕಿತ್ತುಕೊಳ್ಳುವುದಕ್ಕೆ ನೋಡುತ್ತಿದ್ದಾರೆ. ಸುಮಾರು 20-21 ಇಲಾಖೆಗಳಲ್ಲಿ ರಿಜಿಸ್ಟ್ರೇಷನ್ ಚಾರ್ಜನ್ನು ತೆಗೆದುಕೊಳ್ಳುತ್ತಾ ಇಲ್ಲ. ಇಲ್ಲದೇ ಹೋದರೆ ಒಬ್ಬೊಬ್ಬ ರೈತ ಒಂದು ಸಾವಿರಕ್ಕೆ ನೂರು ರೂಪಾಯಿಗಳ

ಸ್ಟಾಂಪು ಫೀ ಕೊಡಬೇಕಾಗುತ್ತದೆ. ರಿಜಿಸ್ಟ್ರೇಷನ್ ಫೀಯನ್ನು ಇಷ್ಟು ಹೆಚ್ಚಿಗೆ ಅವನಿಂದ ತೆಗೆದುಕೊಳ್ಳುವುದು ತುಂಬಾ ಅನ್ಯಾಯ. ಆದ್ದರಿಂದ ಇದನ್ನು ವಿನಾಯಿತಿ ಕೊಡತಕ್ಕಂತ ಪಟ್ಟಿಯಲ್ಲಿ ಸೇರಿಸಬೇಕೆಂದು ನಾನು ಹೇಳುತ್ತೇನೆ. ಇನ್ನು ಅಸಿಸ್ಟೆಂಟ್ ಡೈರೆಕ್ಟರ್ ಆಗಿರುವವರು ಅದರಲ್ಲೂ ಇಲಾಖೆಗೆ ಸಂಬಂಧಪಟ್ಟವರು ತಂತಮಗೆ ಕಂಡ ರೀತಿಯಲ್ಲಿ ವ್ಯವಹಾರಗಳನ್ನು ನಡೆಸುತ್ತಿದ್ದಾರೆ. ಅದೇನು ಒಳ್ಳೆಯ ವ್ಯವಹಾರವೇ, ಖಂಡಿತವಾಗಿ ಅಲ್ಲ. ಇದಕ್ಕಾಗಿ ಅವರಿಗೆ ಯೂನಿಫಾರಂ ಐಡಿಯಾ ಕೊಡುವ ಹಾಗೆ ಕೇಂದ್ರದಲ್ಲಿರು ಹಾಗೆ ರೀ ಓರಿಯಂಟೇಷನ್ ಕೋರ್ಸನ್ನು ಇಲ್ಲಿ ಪ್ರಾರಂಭ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ವೀವಿಂಗ್ ಯೂನಿಟ್ಟುಗಳ ವಿಷಯವಾಗಿ ಹೇಳುವುದಾದರೆ ಮಳೆಗಾಲದಲ್ಲಿ ಈಗ ಇರುವ ಸುಧಾರಿಸಿದ ಕಕೂನ್ಸ್ ಸ್ಕೀಮಿನಲ್ಲಿ ರೀಲ್ಸ್ ಬಹಳ ನಷ್ಟವಾಗುತ್ತವೆಂಬುದಾಗಿ ಸೆಂಟ್ರಲ್ ಸಿಲ್ಕ್ ಬೋರ್ಡಿನಲ್ಲಿ ಹೇಳಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ಸುಧಾರಿಸಿದ ಕಕೂನ್ ಸರಬರಾಜು ಮಾಡುವ ಮತ್ತು ಬೇರೆ ತರಹ ವರ್ಮ್ಸ್ ಕೊಡುವ ವಿಚಾರದಲ್ಲಿ ಅವರಿಗೆ ಸಹಾಯ ಮಾಡಬೇಕೆಂದು ನಾನು ಹೇಳುತ್ತೇನೆ. ನನ್ನ ತಾಲ್ಲೂಕಿನಲ್ಲಿಯೇ ಸುಮಾರು 6 ಸಾವಿರ ಚರಕಗಳು, ಅವುಗಳಿಂದಲೇ ಹೆಣ್ಣು ಮಕ್ಕಳು ನೂಲುತ್ತಾ ಇದ್ದಾರೆ. ನಮ್ಮಲ್ಲಿ ವೇಸ್ಟ್ ಕಕೂನ್ಸ್ ಬಹಳವಾಗಿ ಸಿಗುತ್ತದೆ.

ವೆಸ್ಟ್‌ಬಂಗಾಳದಲ್ಲಿ ಕೆಲವು ಕಡೆಗಳಲ್ಲಿ ಅವರು ನೂತು ಫಾರಿನ್ನಿಗೆ ಕಳುಹಿಸಿ ಫಾರಿನ್ ಎಕ್ಸ್ಚೇಂಜನ್ನು ಸಂಪಾದಿಸುತ್ತಾರೆ. ನಮ್ಮಲ್ಲಿ ಸಿಕ್ಕುವ ನೂಲನ್ನು ಅವರಿಗೆ ಕೊಟ್ಟಿದ್ದರಿಂದ ಅವರು ಹೆಚ್ಚಿಗೆ ಸಂಪಾದನೆ ಮಾಡಿದ್ದಾರೆ. ಇದು ತುಂಬಾ ವಿಷಾದಕರ. ಹೆಣ್ಣುಮಕ್ಕಳು ನಿಜವಾಗಿ ಮಾಡುವ ಕೆಲಸವಿದು. ಅಲ್ಲಿ ಯಾವ ರೀತಿಯಲ್ಲಿ ನೂಲು ತೆಗೆಯುತ್ತಿದ್ದಾರೆಂಬುದನ್ನು ನೋಡಬೇಕು. ಈ ವಿಷಯದಲ್ಲಿ ಅನೇಕ ಅರ್ಜಿಗಳನ್ನು ಖಾದೀಬೋರ್ಡಿಗೆ ಬರೆದಿದ್ದೇವೆ. ಇದುವರೆಗೂ ಅದು ಏನಾಗಿದೆ, ಯಾವ ಮಟ್ಟದಲ್ಲಿದೆ ಎನ್ನುವುದಕ್ಕೆ ಜವಾಬು ಬರಲಿಲ್ಲ. ಸಂಬಂಧಪಟ್ಟ ಮಂತ್ರಿಗಳು ಈ ವಿಚಾರವನ್ನು ನೋಡಬೇಕು. ಇದು ಸ್ಥಾಪನೆಯಾದ ಕೂಡಲೇ ಶುರುವಾದ ಕೂಡಲೇ ಪ್ರಿಂಟಿಂಗ್, ವೀವಿಂಗ್, ಸಬ್ಸಿಡಿಯರಿ ಹಾಬೀಸ್ ಕ್ರಮೇಣವಾಗಿ ಆಗುತ್ತದೆ. ಇದಕ್ಕೆ ಸರ್ಕಾರದವರು ಗಮನ ಕೊಡಬೇಕು.

ಇನ್ನು ಸಿಲ್ಕ್ ಫಿಲೇಚರ್‌ನಲ್ಲಿ ಬಹಳ ನಷ್ಟವಾಗುತ್ತಿದೆ. ಇದು ಯಾವ ಕಾರಣವೋ, ಎಷ್ಟು ಪರೀಕ್ಷೆ ಮಾಡಿದರೂ ನಷ್ಟವೇ ಆಗುತ್ತಿದೆ. ನಮ್ಮಲ್ಲಿ ಜಾಪನೀಸ್ ಕೊಲ್ಯಾಬರೇಷನ್ನಿಂದ ಒಂದು ಫಿಲೇಚರ್ ಇಂಡಸ್ಟ್ರಿಯನ್ನು ಪ್ರಾರಂಭ ಮಾಡಿ ಅವರಿಂದ ಸಾಕಷ್ಟು ಮೆಷಿನರಿಗಳನ್ನು ತೆಗೆದುಕೊಂಡು ಈ ಕೈಗಾರಿಕೆಯನ್ನು ಅಭಿವೃದ್ಧಿ ಮಾಡಬೇಕು. ಅವರು ಯಾವರೀತಿ ನೂಲು ತೆಗೆಯುತ್ತಾರೋ ಆ ರೀತಿ ನೂಲು ತೆಗೆಯಲು ಜಪಾನಿನವರ ರೇಷನ್ನಿನಿಂದ ಈ ಫಿಲೇಚರ್ ಇಂಡಸ್ಟ್ರಿಯನ್ನು ಗುಂಡ್ಲುಪೇಟೆಯಲ್ಲಿ ಸ್ಥಾಪನೆ ಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ವೈದ್ಯಕೀಯ:

ಭಾರತವು ಅನೇಕ ಹಳ್ಳಿಗಳ ದೇಶ, ಇದರಿಂದ ಗುಂಡ್ಲುಪೇಟೆ ಕ್ಷೇತ್ರ ಹೊರತಾಗಿರಲಿಲ್ಲ.

ಗುಂಡ್ಲುಪೇಟೆ ಕ್ಷೇತ್ರ ವ್ಯಾಪ್ತಿಯಲ್ಲಿ ಸಾಕಷ್ಟು ಹಳ್ಳಿಗಳಿವೆ. ಈ ಜನರು ಕೃಷಿ ಚಟುವಟಿಕೆಗಳಲ್ಲಿ ತೊಡಗಿ ಅನೇಕ ಸಂದರ್ಭಗಳಲ್ಲಿ ಅನೇಕ ರೋಗ ರುಜನೆಗಳಿಗೆ ತುತ್ತಾಗುತ್ತಿದ್ದರು. ಇದನ್ನು ಗಮನಿಸಿದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಕೃಷಿಕರ ಆರೋಗ್ಯ ಸುಧಾರಿಸಲು ಚಿಂತನೆ ನಡೆಸುತ್ತಿದ್ದರು. ಅವರ ಚಿಂತನೆ ಫಲವಾಗಿ ಕೆಲವು ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಅಸ್ತಿತ್ವಕ್ಕೆ ಬಂದು ಜನರು ಈ ಆಸ್ಪತ್ರೆಗಳಲ್ಲಿ ಉಚಿತ ಸೇವೆ ಪಡೆಯುವಂತೆ ಆಯಿತು. ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಗ್ರಾಮೀಣ ಜನರ ಬದುಕಿನ ಒಂದು ಭಾಗವಾದ ಆರೋಗ್ಯವನ್ನು ಸುಧಾರಿಸುವ ಚಿಂತನೆಗೆ ಒಂದು ಮಹತ್ವದ ಚಿಂತನೆಯಾಗಿದ್ದ ಈ ಚಿಂತನೆಯ ಈಡೇರಿಕೆಗಾಗಿ ಶ್ರಮಿಸಿರುವುದು ಮೆಚ್ಚುಗೆಯ ಸಂಗತಿಯಾಗಿದೆ.

ಈ ನಮ್ಮ ವೆಲ್‌ಫೇರ್ ಸ್ಟೇಟಿನಲ್ಲಿ ಮೊಟ್ಟಮೊದಲನೆಯ ಸ್ಥಾನವನ್ನು ಬಹಳ ಪ್ರಾಮುಖ್ಯವಾದ ಸ್ಥಾನವನ್ನು ಹೊಂದಿರುವ ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆಯ ಬೇಡಿಕೆಯ ಮೇಲೆ ನಾನು ಮಾತನಾಡಬೇಕೆಂದು ನಿಂತಿದ್ದೇವೆ. ರೋಗದಿಂದ ನರಳುವ ಜನಗಳಿಗೆ, ನೋವಿನಿಂದ ಒದ್ದಾಡುವ ಜನಗಳಿಗೆ, ಸಾವಿನೊಂದಿಗೆ ಹೋರಾಡುವುದಕ್ಕೆ ಅಶಕ್ತರಾದ ಜನಗಳಿಗೆ ಪ್ರಾಣಭಿಕ್ಷೆಯನ್ನು ಕೊಡುವ, ನೋವನ್ನು ನಿವಾರಣೆ ಮಾಡುವ ಪ್ರಾಣ ಪಾರು ಮಾಡುವ ವೃತ್ತಿಯನ್ನು ಒಳಗೊಂಡಿರತಕ್ಕ ಈ ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಗೆ ಸುಮಾರು 7 1/2 ಕೋಟಿ ರೂಪಾಯಿಗಳನ್ನು ಈ ವರ್ಷ ಖರ್ಚು ಮಾಡಬೇಕೆಂದು ಹೊರಟಿದ್ದೀರಿ. ನೀವು ಇಷ್ಟು ಭಾರೀ ಹಣವನ್ನು ಖರ್ಚು ಮಾಡುವಾಗ ಇದರ ಉದ್ದೇಶ ಎಷ್ಟರ ಮಟ್ಟಿಗೆ ಸಾಧನೆಯಾಗಿದೆ ಎಂದು ನೋಡುವುದಾದರೆ ಅದರ ಉದ್ದೇಶ ಹಾಗಿರಲಿ, ಇದು ವ್ಯಾಪಾರ ಉದ್ಯಮವಾಗಿದೆಯೆಂದು ಹೇಳಬೇಕಾಗಿದೆ. ಮೆಡಿಕಲ್ ಕಾಲೇಜಿನಲ್ಲಿ ಒಬ್ಬ ಹುಡುಗ ಫೀಜು ಕೊಡುವುದು ಒಂದು ವರ್ಷಕ್ಕೆ 720 ರೂಪಾಯಿಗಳು. ಸರ್ಕಾರದವರು ಒಬ್ಬ ಹುಡುಗನಿಗೆ ಖರ್ಚು ಮಾಡುವುದು ಒಂದು ವರ್ಷಕ್ಕೆ 3,500 ರೂಪಾಯಿಗಳು. ಎಂದರೆ ಒಬ್ಬ ಹುಡುಗ ಆಸ್ಪತ್ರೆಯಲ್ಲಿ ಡಾಕ್ಟರಾಗುವುದಕ್ಕೆ ಸರ್ಕಾರದವರು 20 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ ಇದು ಯಾರ ದುಡ್ಡು, ಆಮೇಲೆ ಅವನ್ನು ಸ್ಪೆಷಲಿಸ್ಟ್ ಮಾಡುವುದಕ್ಕೆ ಅವಕಾಶವನ್ನು ಕೊಟ್ಟು ಫಾರಿನ್ ಕಂಟ್ರಿಗೆ ಕಳುಹಿಸುತ್ತಾರೆ. ಇಲ್ಲಾ ಬೇರೆ ಇನ್ನು ಯಾವುದಾದರೂ ಕಾಲೇಜಿಗೆ ಕಳುಹಿಸಿಕೊಡುತ್ತಾರೆ. ಈ ದುಡ್ಡು ಎಲ್ಲವೂ ಯಾವುದೂ ಬಡಬೋರೇಗೌಡನ ದುಡ್ಡು. ಈ ದುಡ್ಡಿನಲ್ಲಿ ಅವನು ಓದಿ ಪರೀಕ್ಷೆಗಳನ್ನು ಪಾಸು ಮಾಡಿಕೊಂಡು ಸ್ಪೆಷಲಿಸ್ಟ್ ಆಗಿ ಡಾಕ್ಟರಾಗಿ ಬರುವಾಗ ಅವರು ನಾವು ಪ್ರಿವಿಲೇಜ್ ಕ್ಲಾಸ್ ಎಂದು ತಿಳಿದುಕೊಂಡು ವಾಪಸ್ಸು ಬರುತ್ತಾರೆ. ಯಾವ ಆಸ್ಪತ್ರೆಗೆ ಹೋದರೂ ಕೂಡ ಎಲ್ಲರೂ ದುಡ್ಡು ಎಂದು ಕೇಳುತ್ತಿದ್ದಾರೆ. ಪ್ರತಿಯೊಬ್ಬರೂ ದುಡ್ಡನ್ನು ಕಲೆಕ್ಷನ್ ಮಾಡುವುದಕ್ಕೆ ತೊಡಗುತ್ತಾರೆ. ಯಾರಿಗೆ ಎಷ್ಟು ಸಂಬಳವನ್ನು ಕೊಟ್ಟರೂ ಸಾಕಾಗುವುದಿಲ್ಲ. ಅದು ಏನು ಕಾರಣವೋ ನನಗಂತೂ ಗೊತ್ತಾಗುವುದಿಲ್ಲ. ಆ ವಿಷಯದಲ್ಲಿ ನಾನು ಹೇಳಬೇಕಾದರೆ ನಾವು ಬರೀ ಆಸ್ಪತ್ರೆಗಳಿಗೆ ಸಂಬಂಧಪಟ್ಟ ಡಾಕ್ಟರುಗಳು ಮತ್ತು ಇತರೇ ನೌಕರರುಗಳನ್ನು ಬ್ಲೇಮ್ ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ರೀತಿ ನಡೆಯುವುದಕ್ಕೆ ಸರ್ಕಾರದ್ದೂ ಕಾರಣ ಇದೆ. ಇದಕ್ಕೆ ಕಾರಣ ಸರ್ಕಾರದ ಅಡ್ಮಿನಿಸ್ಟ್ರೇಷನ್ ಸ್ಲಾಕ್‌ನೆಸ್ ಎಂದು ಹೇಳದೆ ವಿಧಿಯಿಲ್ಲ. ಈಗಾಗಲೇ ಶ್ರೀಮತಿ ರತ್ನಮ್ಮ ಮಾಧವರಾವ್

ಅವರು ಹೇಳಿದರು ನಮ್ಮ ಆರೋಗ್ಯ ಖಾತೆಯ ಮಂತ್ರಿಗಳು ತುಂಬಾ ಶಾಂತಮೂರ್ತಿಗಳಾಗಿದ್ದಾರೆ; ಅವರು ಸ್ವಲ್ಪ ಉಗ್ರರೂಪವನ್ನು ತಾಳಬೇಕು ಎಂದು. ಅದಕ್ಕೆ ನಾನು ಹೇಳುವುದು ಏನೆಂದರೆ ಅವರು ಉಗ್ರರೂಪವನ್ನು ತಾಳಬೇಕಾಗಿಲ್ಲ. ಎಲ್ಲಿ ಏನು ಮಾಡಬೇಕೋ ಅದನ್ನು ಮಾಡಿದರೆ ಎಲ್ಲವೂ ಸರಿಹೋಗುತ್ತದೆ ಎಂದು ನನ್ನ ಭಾವನೆ.[3]

ಈಗ ನನ್ನ ಹತ್ತಿರ ಒಂದು ಗೌರ್ನಮೆಂಟ್ ಆರ್ಡರ್ ಇದೆ. ಬೇಕಾದರೆ ಅದನ್ನು ಕೊಡುತ್ತೇನೆ. ಅದರಲ್ಲಿ ಬಹಳ ಕಟ್ಟುನಿಟ್ಟಾಗಿ ಹೇಳಿದ್ದಾರೆ. ಅದು ಏನೆಂದರೆ ಅಸೋಸಿಯೇಟೆಡ್ ಪ್ರೊಫೆಸರ್ ಟೀಚಿಂಗ್ ಇನ್ಸ್‌ಟಿಟ್ಯೂಷನ್ ವರ್ಕ್‌ನಲ್ಲಿರುವವರು ಕನ್‌ಸಲ್ಟೇಷನ್ ಪ್ರಾಕ್ಟೀಸ್ ಏನೂ ಮಾಡಕೂಡದು ಎಂದು. ಆದರೆ ಅವರು ಏನು ಮಾಡುತ್ತಿದ್ದಾರೆಂದರೆ ಪ್ರತಿಯೊಬ್ಬರೂ ಆಸ್ಪತ್ರೆಯ ಚೀಟಿಗಳನ್ನು ಮನೆಯಲ್ಲಿಟ್ಟುಕೊಂಡು ಪ್ರಾಕ್ಟೀಸ್ ಮಾಡುತ್ತಿದ್ದಾರೆ, ಆಸ್ಪತ್ರೆಗೆ ಬಂದ ರೋಗಿಗಳನ್ನು ಸರಿಯಾಗಿ ನೋಡುವುದಿಲ್ಲ. ಅವರನ್ನು ಆಸ್ಪತ್ರೆಯಲ್ಲಿ ನೆಗ್ಲೆಕ್ಟ್ ಮಾಡಿ ಅವರನ್ನು ಮನೆಗೆ ಬರುವ ಹಾಗೆ ಮೆನೋವರ್ ಮಾಡಿಕೊಂಡು ಜನತೆಗೆ ಅವರಿಗೆ ದುಡ್ಡು ಕೊಡುವ ಹಾಗೆ ಮಾಡಿಕೊಳ್ಳುತ್ತಾರೆ. ನಾನು ಸರ್ಕಾರವನ್ನು ಕೇಳುತ್ತೇನೆ. ಅವರು ಪ್ರೈವೇಟ್ ಕನ್‌ಸಲ್ಟೇಷನ್ ಪ್ರಾಕ್ಟೀಸ್ ಮಾಡುವುದಕ್ಕೆ ಸರ್ಕಾರದವರು ಏತಕ್ಕೆ ಅವಕಾಶವನ್ನು ಕೊಡಬೇಕು. ಸರ್ಕಾರದವರು ಅವರಿಗೆ ಸಾಕಷ್ಟು ಸಂಬಳವನ್ನು ಕೊಟ್ಟು ಮೇಲೆ ಅವರು ಸರ್ಕಾರದ ರೂಲ್ಸ್ ಪ್ರಕಾರ ಕಟ್ಟುನಿಟ್ಟಾಗಿ ಇರಬೇಕು. ಯಾರೇ ಆಗಲಿ ಒಂದು ಸಾರಿ ಸರ್ಕಾರದ ಕೆಲಸಕ್ಕೆ ಬಂದ ಮೇಲೆ ಸರ್ಕಾರದ ನಿಯಮಗಳಿಗೆ ಅನುಗುಣವಾಗಿ ನಡೆದುಕೊಳ್ಳದೇ ಹೋದರೆ ಅವರಿಗೆ ಶಿಕ್ಷೆಯನ್ನು ವಿಧಿಸಬೇಕು. ಇಲ್ಲದೇ ಹೋದರೆ ಅವರು ಅವರ ಮನಸ್ಸಿಗೆ ಬಂದಹಾಗೆ ನಡೆದುಕೊಂಡು ಹೋಗುತ್ತಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಡಾಕ್ಟರಾಗತಕ್ಕವರಿಗೆ ನಾನಾ ವಿಧವಾದ ಸೌಲಭ್ಯಗಳು ದೊರೆಯುತ್ತವೆ. ಸರ್ಕಾರದವರು ಅವರನ್ನು ಫಾರಿನ್ನಿಗೆ ಕಳುಹಿಸುತ್ತಾರೆ. ಅವರಿಗೆ ಸ್ಟಡಿ ಲೀವನನ್ನು ಕೊಡುತ್ತಾರೆ. ಮೆಟರ್ನಿಟಿ ಲೀವನ್ನು ಕೊಡುತ್ತಾರೆ. ಆಮೇಲೆ ಅವರು ರಿಟೈರ್ಡ್ ಆದ ಮೇಲೆ ಪೆನ್‌ಷನ್ ಕೊಡುತ್ತಾರೆ. ಈ ರೀತಿ ಅವರಿಗೆ ನಾನಾ ವಿಧವಾದ ಸೌಲಭ್ಯಗಳು ದೊರೆಯುತ್ತವೆ. ಸರ್ಕಾರಿ ಆಸ್ಪತ್ರೆಗಳನ್ನು ನರ್ಸಿಂಗ್ ಹೋಮ್ ಮಾಡಿಕೊಂಡು ಬೆಡ್‌ಗಳು, ಆಪರೇಷನ್ ಥಿಯೇಟರ್ಸ್, ಎಕ್ಸ್‌ರೇ ಫೆಸಿಲಿಟೀಸ್, ಔಷಧಿ ಇತ್ಯಾದಿ ಎಲ್ಲಾ ಸೌಲಭ್ಯಗಳನ್ನು ತಮ್ಮ ಸ್ವಂತಕ್ಕೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಪ್ರೈವೇಟ್ ನರ್ಸಿಂಗ್ ಹೋಮ್ ಮಾಡಿಕೊಂಡು ಆಸ್ಪತ್ರೆಯ ಸಾಮಾನುಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಅದನ್ನು ತಮ್ಮ ಸ್ವಂತಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ. 5 ರೂಪಾಯಿ ಕೊಟ್ಟು ಒಂದು ಸಿರಿಂಜನ್ನು ಕೂಡ ಇವರು ಕೊಂಡುಕೊಳ್ಳುವುದಿಲ್ಲ. ಇಷ್ಟೆಲ್ಲಾ ಸೌಲಭ್ಯಗಳನ್ನೂ ಮತ್ತು ಆ ಸಾಮಾನುಗಳನ್ನೂ ಅವರು ತಮ್ಮ ಸ್ವಂತ ಉಪಯೋಗಕ್ಕೆ ಇಟ್ಟುಕೊಳ್ಳಲು ಅವುಗಳನ್ನೇನಾದರೂ ಅವರು ಭೋಗ್ಯಕ್ಕೆ ಹಾಕಿಕೊಂಡಿದ್ದಾರೆಯೇ. ಇವೆಲ್ಲವೂ ಸರ್ಕಾರದವರ ದೃಷ್ಟಿಗೆ ಏತಕ್ಕೆ ಬಂದಿಲ್ಲ. ಯಾರಾದರೂ ಅವರನ್ನು ವಿಚಾರ ಮಾಡಿದರೆ ನಾವು ಸ್ಪೆಷಲೈಜ್ ಮಾಡಿಕೊಂಡು ಬರಲಿಲ್ಲವೇ ಎಂದು ಉದ್ಧಟತನದ ಜವಾಬನ್ನು ಕೊಡುತ್ತಾರೆ. ಈಗ ಬೊಂಬಾಯಿಯಲ್ಲಿ ಆನರರಿ ಸರ್ಜನ್ ಆಗಿ ಆಸ್ಪತ್ರೆಯಲ್ಲಿ ಇರುವುದನ್ನು ನೋಡಿರಿ. ಟೀಚಿಂಗ್ ಮತ್ತು

ವರ್ಕಿಂಗ್ ಸ್ಟಾಫ್ ಎಲ್ಲಾ ಆನರರಿ ದೊಡ್ಡ ದೊಡ್ಡ ಡಾಕ್ಟರುಗಳನ್ನು ಸರ್ಕಾರದವರು ಆನರರಿ ಆಗಿ ವರ್ಕ್ ಮಾಡಲು ಕರೆಯುವುದು ಆನರ್ ಎಂದು ತಿಳಿದಿಲ್ಲ. ಡಾಕ್ಟರ್‌ಗಳು ತಾವು ಕೆಲಸ ಮಾಡುವುದು ಗೌರವ ಎಂದುಕೊಂಡಿದ್ದಾರೆ. ಇಲ್ಲಿಯ ಹಾಗೆ ಹೊಟ್ಟೆಗಿಲ್ಲದೆ, ಕೆಲಸವಿಲ್ಲದೆ ಅವರಿಗೆ ಬೇಕಾದ ಡಾಕ್ಟರ್‌ಗಳು ಬರುತ್ತಾರೆ ಎಂದು ತಿಳಿದಿದ್ದಾರೆ. ಇಲ್ಲೂ ಹಾಗೆ ಸರ್ಕಾರಿ ಡಾಕ್ಟರ್‌ಗಳಿಗೆ ಎಫಿಷಿಯನ್ಸಿ ಇದ್ದರೆ ರಿಜೈನ್ ಮಾಡಿ ಹೋಗಲಿ ಯಾರು ಬೇಡ ಎಂದು ಹೇಳಿದ್ದಾರೆ. ಇವರೂ ಆನರರಿ, ಸರ್ಜನ್ ಆಗಿ ಕೆಲಸ ಮಾಡಿ ತಮ್ಮ ಷೋ ತೋರಿಸಲಿ. ಅದು ಬಿಟ್ಟು ಸರ್ಕಾರಿ ಹಣ, ಸಂಬಳ, ಕೆಲಸ ತೆಗೆದುಕೊಂಡು ಬಡರೋಗಿಗಳನ್ನು ನೆಗ್ಲೆಕ್ಟ್ ಮಾಡುವುದು ಸರಿಯೇ. ಬಡ ರೈತರು ಕೊಡತಕ್ಕ ಕಂದಾಯದಿಂದ ಆಸ್ಪತ್ರೆಗೆ ಸಾಮಾನುಗಳನ್ನು ತಂದಿದ್ದರೆ ಅವುಗಳನ್ನು ಇವರು ತಮ್ಮ ಸ್ವಂತಕ್ಕೆ ಏತಕ್ಕೆ ಉಪಯೋಗ ಮಾಡಿಕೊಳ್ಳಬೇಕು. ಆಸ್ಪತ್ರೆಗೆ ಬಂದ ರೋಗಿಗಳನ್ನು ಸರಿಯಾಗಿ ನೋಡದೆ ಅವರು ತಮ್ಮ ಮನೆಗೆ ಬರುವ ಹಾಗೆ ಮಾಡಿಕೊಂಡು ಅವರಿಂದ ದುಡ್ಡನ್ನು ತೆಗೆದುಕೊಳ್ಳುವುದು ಯಾವ ಧರ್ಮ ಎಂದು ನಾನು ಕೇಳುತ್ತೇನೆ. ನಿಜವಾಗಿಯೂ ಇದನ್ನು ನೋಡಿದರೆ ಸಹಿಸಲಾರದಂತಹ ಸಂಕಟವಾಗುತ್ತದೆ.

ಆಸ್ಪತ್ರೆಗಳಲ್ಲಿ ದೊಡ್ಡ ಮನುಷ್ಯರಿಗಾದರೆ ಬೇಕಾದಷ್ಟು ಅನುಕೂಲಗಳಿರುತ್ತವೆ. ಆದರೆ ಬಡವರಿಗೆ ಸರಿಯಾದ ಚಿಕಿತ್ಸೆ ದೊರೆಯುವುದಿಲ್ಲ. ಮಿಷನ್ ಆಸ್ಪತ್ರೆಗಳನ್ನು ಎಷ್ಟೋ ಚೆನ್ನಾಗಿ ನಡೆಸುತ್ತಾರೆ. ಆದರೆ ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸರಿಯಾದ ಚಿಕಿತ್ಸೆ ದೊರೆಯುತ್ತಿಲ್ಲ. ನಾನು ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಅನುಕೂಲಸ್ಥರಾಗಿರತಕ್ಕವರು ಆಸ್ಪತ್ರೆಗಳನ್ನು ಕ್ಯೂ ನಿಂತುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಆಸ್ಪತ್ರೆಗಳಲ್ಲಿ ಅವರಿಗೆ ಪ್ರಿಸ್‌ಕ್ರಿಪ್‌ಷನ್ ಕೊಡುವುದಕ್ಕೆ ಕನ್ಸಲ್ಟೇಷನ್ ಗೋಸ್ಕರ ಒಂದು ಏಜನ್ಸಿ ಫಿಕ್ಸ್ ಮಾಡಿ ಈ ಸೆಕ್ರೆಟರಿ ಡಾಕ್ಟರುಗಳನ್ನು ನೇಮಿಸಿ ಒಂದು ದಿವಸಕ್ಕೆ ಎರಡು ಗಂಟೆ ಮೂರು ಗಂಟೆಯಂತೆ ಆ ಕನ್‌ಸಲ್ಟೇಷನ್ ಪ್ರಾಕ್ಟೀಸ್ ನಡೆಸಿ ಅದರಿಂದ ಬಂದ ದುಡ್ಡನ್ನು ಸರ್ಕಾರಕ್ಕೆ ಡಿಪಾಜಿಟ್ ಮಾಡಬೇಕೆಂದು ಹೇಳಿದರೆ ಆಗ ಸರ್ಕಾರದವರು ಒಬ್ಬರು ಡಾಕ್ಟರಿಗೆ ಅವರ ವಿದ್ಯಾಭ್ಯಾಸಕ್ಕೋಸ್ಕರ ಖರ್ಚು ಮಾಡಿರತಕ್ಕ 20 ಸಾವಿರ ರೂಪಾಯಿಗಳಾದರೂ ಸರ್ಕಾರಕ್ಕೆ ವಾಪಸ್ಸು ಬರುತ್ತದೆ. ಗೌರ್ನಮೆಂಟ್ ಶುಡ್ ಆನ್ ದಿ ಮನಿ ಬ್ಯಾಕ್, ಇದರಲ್ಲಿ ಎರಡು ವಾದವಿದೆ. ಹಾಸ್ಪಿಟಲ್‌ನಲ್ಲೂ ಕೆಲಸ ಮಾಡಿ, ಮನೆಯಲ್ಲೂ ಪ್ರಾಕ್ಟೀಸ್ ಮಾಡಲು ಶಕ್ತಿ ಅವರಿಗಿದೆ ಎಂದು ಕೆಲವರ ವಾದ. ನಾನಾದರೂ ಅವರಿಗೆ ಹೇಳುವುದೇನೆಂದರೆ ಇವರೂ ಮನುಷ್ಯ ಮಾತ್ರದವರು. ಇವರು ದೇವಲೋಕದಿಂದ ಇಳಿದು ಬಂದಿಲ್ಲ. ಇವರು ಹಾಗೆ ವಿಪರೀತ ಕೆಲಸ ಮಾಡಿ ಶಕ್ತಿಗುಂದಬಾರದು, ಅವರೂ ರೆಸ್ಟ್ ತೆಗೆದುಕೊಳ್ಳಬೇಕು. ವಿ ಶುಡ್ ನಾಟ್ ಅಲೋ ದೆಮ್ ಬಿಕಾಸ್ ದೇ ಆರ್ ಅಸೆಟ್ ಟು ಅವರ ಕಂಟ್ರಿ, ವಿ ಕೆನಾಟ್ ಅಫರ್ಡ್ ಟು ಲೂಸ್ ದೆಮ್. ಆದ್ದರಿಂದ ಅವರುಗಳು ಪ್ರೈವೇಟ್ ಪ್ರಾಕ್ಟೀಸ್ ಮಾಡಬಾರದು ಎಂದು ಸರ್ಕಾರದವರು ಹೇಳಬೇಕು.

ಹೀಗೆಯೇ ನಾವು ಹೇಳುತ್ತಾ ಬಂದರೆ ಇವರು ನಮಗೆ ಕನ್ಸಲ್ಟೇಷನ್ ಪ್ರಾಕ್ಟೀಸ್ ಬೇಕು, ದುಡ್ಡು ಬೇಕು ಎಂದು ಕೇಳುತ್ತಾರೆಂದು ಇಟ್ಟುಕೊಳ್ಳೋಣ. ಹಾಗಾದರೆ ಸರ್ಕಾರದಲ್ಲಿ ಡಿಸ್ಕ್ರಿಮಿನೇಟ್ ಮಾಡಿದ

ಹಾಗಾಗುತ್ತದೆ. ಅವರಿಗೆ ಈ ತರಹ ಸೌಲಭ್ಯವನ್ನು ಕೊಟ್ಟರೆ ಬಾಕಿ ಸರ್ಕಾರಿ ನೌಕರರಿಗೂ ಕೊಡಬೇಕು. ರಾಜ್ಯದಲ್ಲಿ ಇಂಜಿನಿಯರುಗಳಿದ್ದಾರೆ, ಪ್ರೊಫೆಸರುಗಳಿದ್ದಾರೆ, ಆಡಿಟರುಗಳಿದ್ದಾರೆ, ಜಡ್ಜಿಗಳಿದ್ದಾರೆ, ಇತರರಿದ್ದಾರೆ. ಅವರವರ ವೃತ್ತಿಯಲ್ಲಿ ಅವರವರು ಪ್ರವೀಣರು, ಇಂಜಿನಿಯರುಗಳು ಕೆಲಸದ ವೇಳೆ ಮುಗಿದ ನಂತರ ಕಂಟ್ರಾಕ್ಟ್ ಮಾಡಿಕೊಳ್ಳುತ್ತೇವೆಂದೂ, ಎಲ್ಲಿಯಾದರೂ ಹೋಗಿ ಪಾಠ ಹೇಳಿಕೊಂಡು ಸಂಪಾದನೆ ಮಾಡುತ್ತೇವೆಂದು ಆಡಿಟರುಗಳು ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತೇವೆಂದು ಹೇಳುತ್ತಾರೆ. ಇದು ಏಕೆ ಆಗಬಾರದು, ನ್ಯಾಯಾಧೀಶರೂ ಜಡ್ಜ್‌ಮೆಂಟ್ ಕೊಟ್ಟಾದ ಮೇಲೆ ಪ್ರಾಕ್ಟೀಸ್ ಮಾಡುತ್ತೇವೆಂದರೆ ಏಕೆ ಆಗಬಾರದು, ಹೀಗಿರುವಾಗ ಡಾಕ್ಟರುಗಳದು ಮಾತ್ರ ಯಾವ ತರಹ ಪ್ರಿವಿಲೇಜ್ಡ್ ಕೆಲಸ ಎನ್ನುವುದು ನನಗೆ ಗೊತ್ತಿಲ್ಲ. ಸತ್ತು ಬೀಳುವ ಪರಿಸ್ಥಿತಿಯಲ್ಲಿ ಕೇಳಿಕೊಂಡು ಬರುವಂಥ ಜನರ ಮೇಲೆ ಇವರು ವ್ಯಾಪಾರ ಮಾಡುತ್ತಾರೆಂದರೆ ಇದು ನಿಜವಾಗಿಯೂ ನಾಚಿಕೆ ಬರುವಂಥ ವಿಚಾರ. ಹಾಸ್ಯಾಸ್ಪದವಾದ ವಿಚಾರವೆಂದು ಹೇಳುತ್ತಿದ್ದೇನೆ.

ಹಿಂದಿನ ಕಾಲದ ಅಶ್ವಿನೀಕುಮಾರರು ಹಣ ತೆಗೆದುಕೊಳ್ಳದೆ ಚಿಕಿತ್ಸೆ ಮಾಡಿ ಔಷಧಿ ಕೊಟ್ಟರೆ ಆಗ ಹಸ್ತಶುದ್ಧಿ ಇರುತ್ತದೆಂದು ವೇದದಲ್ಲಿ ಬರೆದಿದೆ ಎಂದು ಹೇಳುತ್ತಾರೆ. ಆದರೆ ಈಗ ಯಾರಾದರೂ ಆಸ್ಪತ್ರೆಗೆ ಹೋಯಿತು ಎಂದರೆ ಹೋಗುತ್ತಿದ್ದ ಹಾಗೆಯೇ ದುಡ್ಡು ಕೊಡಿ, ದುಡ್ಡು ಕೊಡಿ ಎಂದು ಯಾವ ಲಜ್ಜೆ ಇಲ್ಲ, ಮುಂದೆ ಬರುತ್ತಾರೆ, ದುಡ್ಡು ಕೊಡದೆ ಯಾರೂ ಯಾವ ಕೇಸನ್ನೂ ನೋಡುವ ಹಾಗೇ ಇಲ್ಲ.

ಟ್ರಾನ್ಸ್‌ಫರ್ ವಿಚಾರದಲ್ಲಿ ನಾನಾಗಲೇ ಹೇಳಿದ್ದೇನೆ. ಯಾರಾದರೂ ಮೈಸೂರು, ಬೆಂಗಳೂರು, ಇಂಥ ಕಡೆ ಬಂದರೂ ಅವರು ಅಲ್ಲಿಂದ ಬೇರೆ ಕಡೆ ಹೋಗುವ ಹಾಗೆಯೇ ಇಲ್ಲ. ಮೈಸೂರು ಬೆಂಗಳೂರುಗಳನ್ನು ಗುತ್ತಿಗೆಗೆ ಕೊಟ್ಟಿದ್ದೀರಾ ಇವರಿಗೆ. ಶ್ರೀಮತಿ ರತ್ನಮ್ಮನವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್‌ನಲ್ಲಿ ಕತ್ತಿ ಹಿಡಿಯುವುದಕ್ಕೆ ಬರದೆ ಇರುವವರನ್ನು ಹಾಕುತ್ತಾರೆಂದು ಹೇಳಿದರು. ಎಫ್.ಆರ್.ಸಿ.ಎಸ್. ಓದಿ ಸ್ಪೆಷಲೈಜ್ ಮಾಡಿಕೊಂಡು ಇರುವವರು ಜಿಲ್ಲೆಗಳಿಗೆ ಹೋಗಿ ಅಲ್ಲಿಯ ಜನಗಳಿಗೂ ಸ್ವಲ್ಪ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕು. ಅವರು ಬೆಂಗಳೂರು, ಮೈಸೂರು ನಗರಗಳಲ್ಲಿ ಮಾತ್ರ ಏಕೆ ಇರಬೇಕು. ಇಲ್ಲಿರುವವರು ಆಸ್ಪತ್ರೆಗಳನ್ನು ಪ್ರೈವೇಟ್ ನರ್ಸಿಂಗ್ ಹೋಮ್ಸ್ ಮಾಡಿಕೊಳ್ಳುತ್ತಾರೆ. ನಮ್ಮ ಮಂತ್ರಿಗಳು ಹಿಂದೆ ಹೇಳಿದರು ಎಂ.ಎಲ್.ಎ. ಆದವರು ಯಾರೂ ಇಂಟರ್ ಫಿಯರ್ ಮಾಡಬಾರದು, ಎಲ್ಲರನ್ನೂ ವರ್ಗ ಮಾಡುತ್ತೇವೆ ಎಂದು. ಆದರೆ ಒಂದು ವರ್ಷವಾದರೂ ಯಾರನ್ನಾದರೂ ವರ್ಗ ಮಾಡಿದ್ದಾರೆಯೇ, ಎಲ್ಲರೂ ಅವರವರ ಸ್ಥಳದಲ್ಲಿಯೇ ಇದ್ದಾರೆ.

ರೆವೆನ್ಯೂ ಇಲಾಖೆಯಲ್ಲಿ ಒಂದು ಖಾತೆಯನ್ನೂ ಬೇರೆಯವರಿಗೆ ಬದಲಾಯಿಸಿ ಎಂದರೆ ಹತ್ತು ರೂಪಾಯಿ ಕೊಟ್ಟರೆ ಅದು ಲಂಚ, ಒಬ್ಬ ಉಪಾಧ್ಯಾಯರಿಗೆ ಪಾಠ ಹೇಳಿ ಎಂದು ಇಪ್ಪತ್ತೈದು ರೂಪಾಯಿ ಕೊಟ್ಟರೆ ಲಂಚ, ಆದರೆ ಡಾಕ್ಟರುಗಳು ತೆಗೆದುಕೊಳ್ಳುವುದು ಲಂಚವಲ್ಲದೆ ಮತ್ತೇನು.

ಯಾರಿಗಾದರೂ ಸ್ಕಾಲರ್‌ಶಿಪ್ ಕೊಡಬೇಕು ಎಂದು ಕೇಳಿದರೆ ಮಾನ್ಯ ಸದಸ್ಯರು ಡೊನೇಷನ್ ಕೊಟ್ಟರೆ ಕೊಡುತ್ತೇವೆಂದು ಹೇಳುತ್ತಾರೆ. ಅಷ್ಟು ಲಘುವಾಗಿ ಉತ್ತರ ಕೊಡದೆ ಸರಿಯಾಗಿ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಎಕ್ಸ್‌ರೇ ಉಪಕರಣಗಳನ್ನು ಎಷ್ಟೋ ಖರ್ಚು ಮಾಡಿ ಏಕೆ ತರಿಸುತ್ತಾರೆನ್ನುವುದು ನನಗೆ ಗೊತ್ತಾಗುವುದಿಲ್ಲ. ಮೊನ್ನೆ ಮಲ್ಲೇಶ್ವರಕ್ಕೆ ಹೋಗಿ ನೋಡಿಕೊಂಡು ಬಂದೆ. ಹಾಗೆಯೇ ಮೈಸೂರಿನಲ್ಲಿಯೂ ಒಂದು ಎಕ್ವಿಪ್‌ಮೆಂಟ್ ಬಿದ್ದಿದೆ. ಯಾರಾದರೂ ಆಸ್ಪತ್ರೆಗೆ ಹೋದರೆ ಅದನ್ನು ಉಪಯೋಗಿಸಲು ಟೆಕ್ನೀಷಿಯನ್ಸ್ ಇಲ್ಲ ಎಂದು ಹೇಳುತ್ತಾರೆ. ಇವತ್ತಿನ ದಿವಸ ವರ್ಷಕ್ಕೆ 36 ಜನರನ್ನು ಟ್ರೈನ್ ಮಾಡುತ್ತೇವೆಂದು ಹೇಳುತ್ತಾರೆ. ಇವರೆಲ್ಲ ಎಲ್ಲಿಗೆ ಹೋಗುತ್ತಾರೆ, ಏನು ಎನ್ನುವುದನ್ನು ಸ್ವಲ್ಪ ದಯಮಾಡಿ ಹೇಳಬೇಕು.

ನಾನು ಒಂದು ಸ್ಟಾರ್ಡ್ ಕ್ವಶ್ಚನ್ ಕಳಿಸಿ, ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಬೆಡ್ ಸ್ಟ್ರೇನ್ಸ್ ಎಷ್ಟಿದೆ, ಸಿಬ್ಬಂದಿ ಎಷ್ಟಿದೆ ಎಂದು ಎಲ್ಲ ಕೇಳಿದ್ದೇನೆ. 1962ರಲ್ಲಿ 336 ಬೆಡ್ ಸ್ಟ್ರೇನ್ಸ್ ಇದ್ದುದು ಈಗ ಸುಮಾರು 650-700 ಜನರಿದ್ದಾರೆ. ಆ ಹೊತ್ತು ನರ್ಸಿಂಗ್ ಸ್ಟಾಫ್ ಎಷ್ಟು ಇತ್ತೋ ಇವತ್ತೂ ಅಷ್ಟೇ ಇದೆ. ಇವರು 650-700 ಜನ ರೋಗಿಗಳು ಇದ್ದರೇನೇ ನೋಡಿಕೊಳ್ಳುವುದು ಕಷ್ಟವಾಗುವಾಗ 750 ಜನ ರೋಗಿಗಳನ್ನು ಒಂದೇ ಸಮನಾಗಿ 27 ಜನ ಸ್ಟಾಫ್ ನರ್ಸ್ ಮತ್ತು 119 ಜನ ಪ್ರೊಬೇಷನರಿ ನರ್ಸ್‌ಗಳು ಇದ್ದರೆ ನೋಡಿಕೊಳ್ಳುವುದಕ್ಕೆ ಸಾಧ್ಯವೇ? ಅದೇ ಬೆಂಗಳೂರು ಆಸ್ಪತ್ರೆಗಳಲ್ಲಿ ಬೇಕಾದಷ್ಟು ಜನರಿದ್ದಾರೆ. ಇವರನ್ನೂ ಕೆಲವರನ್ನು ಅಲ್ಲಿಗೆ ಬದಲಾಯಿಸಿ ಕೆಲಸ ಮಾಡಿಸಬಹುದು. ಅಷ್ಟೂ ಕೂಡ ಈ ಆಡಳಿತದಲ್ಲಿ ನಡೆಯುವುದಿಲ್ಲವೆ? ಇದನ್ನು ಸರಿ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆ? ಇದನ್ನೂ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಹೊತ್ತು 890 ಜನ ನರ್ಸ್‌ಗಳಿಗೆ ತರಬೇತಿ ಕೊಡುತ್ತಿದ್ದೇವೆಂದು ಹೇಳುತ್ತಾರೆ. ಹೀಗೆ ಟ್ರೈನ್ ಮಾಡಿದವರನ್ನೆಲ್ಲಾ ಎಲ್ಲಿಗೆ ಕಳಿಸುತ್ತೀರಿ? ಇಷ್ಟು ಖರ್ಚು ಮಾಡಿ ಟ್ರೈನ್ ಮಾಡಿದವರ ಕಥೆ ಏನಾಗುತ್ತದೆಂದು ಸ್ವಲ್ಪ ಹೇಳಿ.

ಯಾವ ಆಸ್ಪತ್ರೆಯಲ್ಲಿಯೂ ನರ್ಸ್, ಆಯಾ, ಆಳು ಮತ್ತು ಸಾಕಾದಷ್ಟು ಮ್ಯಾನ್ಯುಯಲ್ ಸ್ಟಾಫ್ ಇಲ್ಲ. ಬೆಡ್ ಪ್ಯಾನ್ ಕೊಟ್ಟರೆ ಅದನ್ನು ತೆಗೆಯುವವರೇ ಗತಿ ಇಲ್ಲ. ರೋಗಿಗಳನ್ನು ಸತ್ತು ಹೋಗುವವರೆಗೂ ಕೂಗಿಕೊಳ್ಳುವಂತಾದರೆ ಹೇಗೆ? ಹೀಗಾದರೆ ಇದಕ್ಕೆ ಆಸ್ಪತ್ರೆ ಎಂದು ಏಕೆ ಹೇಳುತ್ತೀರೋ ನನಗೆ ಅರ್ಥವಾಗುತ್ತಿಲ್ಲ. ನಮ್ಮ ಮಂತ್ರಿಗಳು ಡಾಕ್ಟರಾಗಿದ್ದುಕೊಂಡು ಡಾಕ್ಟರೇ ಆರೋಗ್ಯ ಮಂತ್ರಿಗಳಾದ ಮೇಲೆ ಸಹ ಈ ರೀತಿ ನಡೆಯುತ್ತಿದೆ. ಇದನ್ನು ಕೂಡಲೇ ಸರಿಪಡಿಸುವರೆಂದು ನಾನು ತಿಳಿಯುತ್ತೇನೆ.

ಸ್ಯಾನಿಟೋರಿಯಂ ವಿಚಾರ ಹೇಳುವುದಾದರೆ, ಮೈಸೂರು ಸ್ಯಾನಿಟೋರಿಯಂನಲ್ಲಿ, ಲಿಸ್ಟ್ ಯಾವಾಗಲೂ ಎಕ್ಸಾಸ್ಟ್ ಆಗುವುದಿಲ್ಲವೆಂದು ಕಾಣುತ್ತದೆ. ಕೆಲವು ಅಡ್ವಾನ್ಸ್ಡ್ ಕೇಸಸ್ ಹೋಗಿ ಸೇರಿಸಿ ಎಂದರೆ ಅವರು ಹೇಳುತ್ತಾರೆ. ಇಂಥ ಹಳೆಯ ರೋಗಿಗಳಿಗಿಂತ ಸ್ವಲ್ಪ ವಾಸಿಯಾದವರನ್ನು ತೆಗೆದುಕೊಂಡರೆ ಎಷ್ಟೋ ಅನುಕೂಲ ಎಂದು. ಹಾಗಾದರೆ ಅಡ್ವಾನ್ಸ್ಡ್ ಕೇಸಸ್ ಏನು ಮಾಡಬೇಕು, ಅವರಗಳು ಮನೆಗೆ ಹೋಗಿ ಇನ್ನು 20 ಜನಗಳಿಗೆ ರೋಗವು ಹರಡುತ್ತದೆ. ಆಸ್ಪತ್ರೆಯಲ್ಲಿಟ್ಟುಕೊಳ್ಳುವುದಕ್ಕೆ ಜಾಗವಿಲ್ಲವೆಂದು ಹೇಳುತ್ತಾರೆ. ಸರ್ಕಾರದವರು ಎಲ್ಲಿಯಾದರೂ ಹೇಗಾದರೂ ಮಾಡಿ ಇ.ಡಿ. ಹಾಸ್ಪೆಟಲ್‌ನಲ್ಲಾದರೂ ಇಂಥ ರೋಗಿಗಳಿಗೆ ಜಾಗ ಕೊಟ್ಟು ಸಾಯುವವರೆಗಾದರೂ ನೋಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

ಮೈಸೂರಿನಲ್ಲಿರುವ ವಾಣಿವಿಲಾಸ ವಾಟರ್‌ವರ್ಕ್ಸ್ ವಿಷಯ ಹೇಳಲು ನಾಚಿಕೆಯಾಗುತ್ತದೆ. ಮೈಸೂರು ನಗರದಲ್ಲಿ ಹಾಫ್ ಫಿಲ್ಟರ್ಡ್ ವಾಟರ್ ಸಪ್ಲೈ ಮಾಡುತ್ತಿದ್ದಾರೆ. ಯಾವ ಕಾಲದಿಂದಲೂ ಹೀಗೆ ಇರಲಿಲ್ಲ. ನಮ್ಮ ರಾಜ್ಯ, ಅದರ ಅಡ್ಮಾನ್ಸ್‌ಮೆಂಟ್ ನೋಡಿದರೆ ನಿರ್ವಾಹವಿಲ್ಲ. ನಮ್ಮ ಸರ್ಕಾರದವರು ತಕ್ಷಣ ಕ್ರಮ ತೆಗೆದುಕೊಂಡು ಶುದ್ಧವಾದ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀಮತಿ ರತ್ನಮ್ಮನವರು ಮೆಡಿಕಲ್ ಕಾಲೇಜು ವಿಚಾರ ಹೇಳಿದರು. ಕೇಂದ್ರ ಸರ್ಕಾರದ ಆರೋಗ್ಯ ಮಂತ್ರಿಗಳೂ ಅಷ್ಟು ಒಳ್ಳೆಯ ಅಭಿಪ್ರಾಯವನ್ನು ನಮ್ಮ ಕಾಲೇಜು ವಿಷಯದಲ್ಲಿ ಕೊಟ್ಟಿಲ್ಲ. ಆದುದರಿಂದ ನಮ್ಮ ಮೆಡಿಕಲ್ ಕಾಲೇಜಿನ ಮಟ್ಟವನ್ನು ಹೆಚ್ಚಿಸಿ ಅದನ್ನು ಪರಿವರ್ತನೆ ಮಾಡಿ ಅದಕ್ಕೆ ಮಾನ್ಯತೆ ದೊರೆಯುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಆಸ್ಪತ್ರೆಗಳಿಗೆ ಕೊಡುವ ಖಾದಿ ಬಟ್ಟೆಯ ವಿಚಾರ, ಖಾದಿ ಬಟ್ಟೆಯನ್ನು ಆಸ್ಪತ್ರೆಗಳಿಗೆ ಕೊಡಬಾರದು ಎಂದರೆ ನಮಗೆ ದೇಶಾಭಿಮಾನವಿಲ್ಲ ಎಂದಲ್ಲ ಅಥವಾ ಖಾದಿಯನ್ನು ಉಪಯೋಗಿಸಬಾರದು ಎಂದಲ್ಲ. ಖಾದಿ ಬಟ್ಟೆಯನ್ನು ನಾಲ್ಕು ಸಲ ಧೋಬಿಗೆ ಹೋದರೆ ಅದು ಬಟ್ಟೆಯಾಗಿರುವುದಿಲ್ಲ. ಹಂಜಿಯಾಗಿರುತ್ತದೆ. ಅಂಥ ಹಂಜಿಯನ್ನು ಇಟ್ಟುಕೊಂಡು ಆಸ್ಪತ್ರೆಯಲ್ಲಿ ಸುಧಾರಿಸಬೇಕು ಎಂದರೆ ಅದರಲ್ಲಿ ಹತ್ತಿಕೊಂಡಿರುವ ಕಶ್ಮಲಗಳು ಒಂದು ಸಲ ಒಗೆಯುವ ಕಡೆ ಹತ್ತು ಸಲ ಒಗೆದರೂ ಹೋಗುವುದಿಲ್ಲ. ಹಾಗೆಯೇ ಇರುತ್ತದೆ, ಆ ಬಟ್ಟೆಗಳನ್ನು ಆಸ್ಪತ್ರೆಗಳಿಗೆ ಅವಶ್ಯಕತೆ ಇಲ್ಲ. ಸಾಕಾದಷ್ಟು ಬೇಗ ಅಚ್ಚುಕಟ್ಟಾಗಿ ಗಟ್ಟಿಯಾದ ಬಟ್ಟೆಯನ್ನು ಆಸ್ಪತ್ರೆಗೆ ದಯಮಾಡಿ ಕೊಡಬೇಕೆಂದು ಹೇಳುತ್ತೇನೆ.

ವಿಸಿಟರ್ಸ್ ಬೋರ್ಡ್ ವಿಚಾರ ಹೇಳುವುದಾದರೆ ಮೈಸೂರಿನ ಚೆಲುವಾಂಬ ಆಸ್ಪತ್ರೆ, ಕೃಷ್ಣರಾಜೇಂದ್ರ ಆಸ್ಪತ್ರೆ ಇವುಗಳಿಗೆ ಹೋದ ವರ್ಷದಿಂದ ವಿಸಿಟರ್ಸ್ ಬೋರ್ಡ್ ನೇಮಕ ಮಾಡದೆ ಹಾಗೆಯೇ ತಳ್ಳಿದ್ದಾರೆ. ಇಂಥವು ಎಷ್ಟೋ ಮಾನ್ಯ ಮಂತ್ರಿಗಳ ಗಮನಕ್ಕೆ ಬರದೆ ಹಾಗೆಯೇ ನಡೆದುಕೊಂಡು ಹೋಗುತ್ತಿದೆ. ಇಂಥವನ್ನು ತಪ್ಪಿಸಬೇಕಾದರೆ ಮಂತ್ರಿಗಳು ಸ್ವಲ್ಪ ಭಯೋತ್ಪಾದನೆಯನ್ನು ಮಾಡಬೇಕು. ಈ ಸಂದರ್ಭದಲ್ಲಿ ನಾನು ಒಂದು ಕಥೆಯನ್ನು ಹೇಳುತ್ತೇನೆ. ನಾಗಪ್ಪ ಎಂಬ ಒಂದು ನಾಗರ ಹಾವು ಇತ್ತು. ಅದು ತಪಸ್ಸು ಮಾಡಿತಂತೆ. ಪರಮೇಶ್ವರನು ಪ್ರತ್ಯಕ್ಷನಾಗಿ ಹೇಳಿದನಂತೆ. ನೀನು ಒಳ್ಳೆಯವನಾಗಿ ಬಾಳು, ಯಾರಿಗೂ ಕಷ್ಟ ಕೊಡಬೇಡ, ಯಾರಿಗೂ ತೊಂದರೆ ಕೊಡಬೇಡ, ಯೋಗ್ಯನಾಗಿರು ಎಂದು . ಸರಿ ಈ ಹಾವು ಸುಮ್ಮನೆ ಮಲಗಿತ್ತಂತೆ. ಯಾವಾಗ ಇದು ಇಷ್ಟು ಸದರವಾಯಿತೋ ಎಲ್ಲರೂ ಹೋಗಿ ಬರುವವರೆಲ್ಲ ತುಳಿಯುವುದು, ಕಲ್ಲು ಒಗೆಯುವುದು, ಹೊಡೆಯುವುದು, ಹೀಗೆ ಹಿಂಸೆ ಮಾಡಲು ಶುರುಮಾಡಿದರಂತೆ. ಹೀಗೆ ತೊಂದರೆಗೆ ಒಳಗಾದ ಹಾವು ಪುನಃ ಪರಮೇಶ್ವರನನ್ನು ಕುರಿತು ತಪಸ್ಸು ಮಾಡಿತಂತೆ. ಹೋಗಿ ಬರುವ ಜನರೆಲ್ಲ ನನ್ನನ್ನು ತುಳಿಯುತ್ತಾರೆ, ಕಲ್ಲು ಹೊಡೆಯುತ್ತಾರೆ ಮುಂತಾಗಿ ಹಿಂಸೆ ಮಾಡುತ್ತಾರೆ. ಹಾಗೆ ಅವರು ಮಾಡದಂತೆ ಮಾಡಬೇಕೆಂದು ಮತ್ತೆ ತಪಸ್ಸು ಮಾಡಿ ನನ್ನನ್ನು ಕಾಪಾಡು ಎಂದಿತಂತೆ. ಆಗ ದೇವರು ಹೇಳಿದನಂತೆ ಹಾಗೆ ಸುಮ್ಮನಿರಬಾರದು, ಬುಸ್ ಎನ್ನುವುದನ್ನಾದರೂ ಕಲಿ, ಆಗ ಜನ ಹೆದರುತ್ತಾರೆ ಎಂದು. ಹಾಗೆ ಬುಸುಗುಟ್ಟುವುದನ್ನಾದರೂ ಕಲಿತರೆ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತವೆ.

ಹೀಗೆ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ತಮ್ಮ ಮನಸ್ಸಿನಲ್ಲಿ ಅಭಿವೃದ್ಧಿ ಕಾರ್ಯಗಳ ಚಿಂತನೆಯ ಮೂಟೆಯನ್ನೆ ಹೊತ್ತು ಸಾಗುತ್ತಿದ್ದು, ಅವುಗಳನ್ನೆ ಪೂರ್ಣ ಪ್ರಮಾಣದಲ್ಲಿ ಈಡೇರಿಸಲಾಗಲಿಲ್ಲ. ಚಿಂತನೆಯ ಮೂಟೆ ಅಪಾರವಾಗಿದ್ದು, ಸಾಧನೆ ಮಾತ್ರ ಅಲ್ಪವೆಂಬುದನ್ನು ಮರೆಯುವಂತಿಲ್ಲ.

3.1 ಶಾಸಕಿಯಾಗಿ

ದಿವಂಗತ ಕೆ.ಸಿ. ಸುಬ್ಬಣ್ಣನವರ ಧರ್ಮ ಪತ್ನಿಯಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಕರ್ನಾಟಕ ರಾಜ್ಯದ ಆರೋಗ್ಯ ಮತ್ತು ಕುಟುಂಬ ಸಚಿವೆಯಾಗಿ ತಮ್ಮ ಮಾವ ಮತ್ತು ಪತಿಯ ಸಮಾಜ ಸೇವಾ ಪರಂಪರೆಯನ್ನು ಉಜ್ವಲವಾಗಿ ಬೆಳಗಿಸಿದ್ದಾರೆ. ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರದು ಸ್ವರ್ಣ ಅಧ್ಯಾಯವೆಂದು ಹೇಳಬಹುದು. ಏಕೆಂದರೆ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಕರ್ನಾಟಕದ ಮಹಿಳಾ ಮಣಿಗಳಲ್ಲಿ ದೀಮಂತ ನಾಯಕಿಯಾಗಿ ಪ್ರಜ್ವಲಿಸಿದ್ದಾರೆ. ತಮ್ಮ ಮಾವ ನಡೆದ ಹಾದಿಯಲ್ಲಿ ಹೆಜ್ಜೆ ಇಟ್ಟು ಗುಂಡ್ಲುಪೇಟೆ ಮತ್ತು ಕಬ್ಬಹಳ್ಳಿ ಗ್ರಾಮವನ್ನು ಮರೆಯದೆ ಅವುಗಳ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಇವರು ಶಾಸಕಿಯಾಗಿ ಸಚಿವೆಯಾಗಿ, ವಿರೋಧ ಪಕ್ಷದ ನಾಯಕಿಯಾಗಿ ವಿಧಾನ ಸಭೆಯ ಅಧ್ಯಕ್ಷಿಣಿಯಾಗಿ ವಿವಿಧ ಕ್ಷೇತ್ರಗಳಲ್ಲಿ ಜನ ಸೇವೆ ಮಾಡಿದ್ದಾರೆ. ಅಲ್ಲದೆ ತಮ್ಮ ಪ್ರಾಂತ್ಯದಲ್ಲಿ ಪ್ರಭಾವಿ ವ್ಯಕ್ತಿಯಾಗಿ ಅವರು ಬೆಳೆದಿದ್ದಾರೆ. ಪ್ರತಿ ವಿಧಾನ ಸಭಾ ಚುನಾವಣೆಯಲ್ಲಿ ಹಿರಿಯ ಮತ್ತು ಕಿರಿಯ ವ್ಯಕ್ತಿಗಳ ಬಯಕೆಯಂತೆ ಅವರು ಜಯಭೇರಿ ಭಾರಿಸಿದ್ದರು. ಅವರು ಸಮಾಜ ಸೇವಾ ಕಾರ್ಯ ಮಾಡುತ್ತಾ ಬೆಂಗಳೂರಿನ ಸಮೀಪ ಕೆಂಚನಹಳ್ಳಿಯಲ್ಲಿ ಜಮೀನು ಕೊಂಡು ಕೊಂಡಿದ್ದು, ತಮ್ಮದೇ ಆದ "ಮಲರಸಿ". ಎಂಬ ತೋಟದಲ್ಲಿ ವಾಸ ಮಾಡುತ್ತಾ ನಿಸರ್ಗ ಸೌಂದರ್ಯವನ್ನು ಅನುಭವಿಸಿತ್ತಾ ಜೀವನ ಸಾಗಿಸುತ್ತಿದ್ದರು.

ಗಂಡು ಮಾಡಲಾಗದ ಕೆಲಸವನ್ನು ಹೆಣ್ಣು ಮಾಡಬಲ್ಲಳು ಎಂಬುದನ್ನು ತೋರಿಸಿಕೊಟ್ಟ ಮಹಿಳೆ ಇವರು ಎಂದರೆ ತಪ್ಪಾಗಲಾರದು. ಇವರು ಕ್ರಿ.ಶ. 1957 ರಲ್ಲಿ ರಾಜ್ಯದ 2ನೇ ವಿಧಾನ ಸಭಾ ಚುನಾವಣೆಗೆ ಗುಂಡ್ಲುಪೇಟೆ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ಈ ಚುನಾವಣೆಯು ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರಿಗೆ ಒಂದು ಹೊಸ ಅನುಭವವಾಗಿತ್ತು. ತಮ್ಮ ಪತಿ ಸುಬ್ಬಣ್ಣನವರ ಸುತ್ತ ಮುತ್ತಲಿನ ಬಂಧು ಬಾಂಧವರು ಅಮ್ಮನವರಿಗೆ ಸ್ಪೂರ್ತಿ ತುಂಬಿ ಸ್ವತಂತ್ರ ಅಭ್ಯರ್ಥಿಯಾಗಿ ನಿಲ್ಲುವಂತೆ ಪ್ರೇರೇರಿಸಿದರು. ಇವರು ಈ ಚುನಾವಣೆಯಲ್ಲಿ ತಮ್ಮ ಪ್ರತಿ ಸ್ಪರ್ಧಿಯಾದ ಹುಂಡೀಪುರದ ಗೌಡ್ರು ಎಂದು ಖ್ಯಾತರಾಗಿದ್ದ ದಿ. ಹೆಚ್.ಕೆ. ಶಿವರುದ್ರಪ್ಪನವರನ್ನು 12 ಸಾವಿರ ಮತಗಳ ಅಂತರದಿಂದ ಜಯಭೇರಿ ಭಾರಿಸಿದರು. ಜಯಲಕ್ಷ್ಮಿಯು ತನ್ನ ವಿಜಯ ಮಾಲೆಯನ್ನು ಅಮ್ಮನವರ ಕೊರಳಿಗೆ ಅರ್ಪಿಸಿದಳು 6ನೇ ಚುನಾವಣೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಚುನಾವಣೆಗಳಲ್ಲಿ ಅವರು ಜಯಭೇರಿ ಭಾರಿಸಿದಾಗ ಅಚ್ಚರಿಯ ಸಂಗತಿಯಾಗಿದೆ. ಹೆಣ್ಣು ಮಕ್ಕಳ ಬಗ್ಗೆ ಹೆಚ್ಚು ಕಳಕಳಿ ಹೊಂದಿದ್ದ ಇವರು ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಹೆಚ್ಚು ಮತಗಳಿಂದ ಹಲವು ಭಾರಿ ಜಯಭೇರಿ ಬಾರಿಸಿದ ಹೆಣ್ಣು ಕುಲಕ್ಕೂ ಸಮಾಜಕ್ಕೂ ಒಂದು ದೊಡ್ಡ ಆಸ್ತಿಯಾಗಿ ಸಮಾಜ ಸೇವೆ ಮಾಡಿರುವುದು ಶ್ಲಾಘನೀಯವಾದುದು.

ಕರ್ನಾಟಕದಲ್ಲಿ ದೀಮಂತರಾದ ಎಸ್. ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ ಅಮ್ಮನವರು ನಿಜಲಿಂಗಪ್ಪನವರ ಕಾಂಗ್ರೆಸ್ ಪಕ್ಷ ಸೇರಿದ್ದರು. ಅಂದಿನಿಂದ ಅವರು ಮರಣ ಹೊಂದುವವರೆಗೂ ಕಾಂಗ್ರೆಸ್ ಪಕ್ಷದಲ್ಲೇ ಗುರ್ತಿಸಿಕೊಂಡಿದ್ದರು. ಶ್ರೀಮತಿ ನಾಗರತ್ನಮ್ಮನವರು ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಿ ಮುಂದುವರಿಯುತ್ತಿದ್ದರು. ಅವರದು ದೃಢ ನಿಲುವು ಆದ್ದರಿಂದ ಅವರು ತಮ್ಮ ಜೀವಿತದ ಅವಧಿಯಲ್ಲಿ ಪಕ್ಷಾಂತರ ಮಾಡಲೇ ಇಲ್ಲ. ಅಮ್ಮನವರ ಮೃದು ಹೃದಯ ಸರಳ ನಡೆ ನುಡಿ ಸದಾ ಮನದಲ್ಲಿ ಸಂತೋಷದ ಕಳೆ ಇವು ಅವರ ವ್ಯಕ್ತಿತ್ವಕ್ಕೆ ಶೋಭೆ ತರುತ್ತಿದ್ದವು ಅವರು ವಿಧಾನ ಸಭೆಯ ಹಿರಿಯ ಮಹಿಳಾ ಮಣಿಗಳಲ್ಲಿ ಒಬ್ಬರು. ರಾಜಕೀಯ ಕ್ಷೇತ್ರದಲ್ಲಿ ಅಪಾರ ಅನುಭವಗಳಿಸಿದ ಇವರು ಕರ್ನಾಟಕಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ. ನಮ್ಮ ದೇಶದ ಸಂಸ್ಕೃತಿಯನ್ನು ಹೊರ ದೇಶಗಳಲ್ಲಿ ಪರಿಚಯಿಸುವಲ್ಲಿ ಅಮ್ಮನವರ ಪಾತ್ರ ಅಪಾರವಾಗಿತ್ತು. ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಅನೇಕ ಸಲ ವಿದೇಶಿಯಾತ್ರೆ ಮಾಡಿ ಅಪಾರ ಅನುಭವ ಸಂಪಾದಿಸಿಕೊಂಡಿದ್ದರು. ದೇಶ ಸೇವೆಯೇ ಈಶ ಸೇವೆ ಎಂದು ನಂಬಿ ಹಗಲಿರುಳು ಯಾವ ತಾರತಮ್ಯವೂ ಇಲ್ಲದೆ ಜನ ಸೇವೆ ಮಾಡಿದ ಕೀರ್ತಿ ಇವರದು. ಆಡಳಿತ, ಕೈಗಾರಿಕೆ, ವೈಜ್ಞಾನಿಕ ಕೃಷಿ, ಪಶು ಸಂಗೋಪನೆ ಇತ್ಯಾಧಿಗಳಲ್ಲಿ ಅಮೂಲ್ಯ ಜ್ಞಾನ ಪಡೆದಿದ್ದರು. ಜಪಾನ್, ಫಿಲಿಪೈನ್ಸ್, ವಿಯಟ್ನಾಂ, ಬರ್ಮಾ ದೇಶಗಳಲ್ಲಿ ನಡೆದ ಅಂತರ ರಾಷ್ಟ್ರೀಯ ಸಮಾಜಿಕ ಅಭ್ಯುದಯ ಬಗೆಗಿನ ಸಮ್ಮೇಳನಗಳಲ್ಲಿ ಭಾಗವಹಿಸಿ ಭಾರತದ ಕೀತಿ ಪತಾಕೆಯನ್ನು ಮೆರೆಸಿದ್ದಾರೆ. ಇವರು ಹಾಲೆಂಡ್, ಸ್ವಿಡ್ಜರ್ ಲ್ಯಾಂಡ್, ನಾರ್ವೆ ಡೆನ್ಮಾರ್ಕ್, ಇಂಗ್ಲೇಂಡ್, ಬೆಲ್ಜಿಯಂ, ಇಟಲಿ ಮತ್ತು ಈಜಿಪ್ಟ್‌ಗಳಲ್ಲಿ ಸಂಚರಿಸಿ, ಹೈನುಗಾರಿಕೆಯ ಬಗ್ಗೆ ಅಪಾರ ಜ್ಞಾನ ಸಂಪಾದಿಸಿದರು. ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನಗಳಲ್ಲಿ ಭಾಗವಹಿಸಿದರು. ಜೊತೆಗೆ ಅಮ್ಮನವರು ಮೆಕ್ಸಿಕೋ ದೇಶಕ್ಕೂ ಭೇಟಿ ನೀಡಿದರು.[4] ತಮ್ಮ ಪತಿ ಕೆ.ಸಿ. ಸುಬ್ಬಣ್ಣರವರು ತೀರಿಕೊಂಡಾಗ ಚಿಕ್ಕ ವಯಸ್ಸಿನ ವಿಧವೆ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರನ್ನು ನಿಜಲಿಂಗಪ್ಪನವರು ತಮ್ಮ ಸ್ನೇಹಿತರೊಡನೆ ಹೋಗಿ ಸಂತೈಷಿಸಿದ ಸಂದರ್ಭ ಮನ ಕರಗುವಂತೆ ಇತ್ತು ಎಂದು ಹೇಳಲಾಗುತ್ತಿದೆ. ದುಃಖ ಸಾಗರದಲ್ಲಿ ಅವರನ್ನು ಸಂತೈಷಿ ಧೈರ್ಯ ತುಂಬಿದ ಕೀರ್ತಿ ಎಸ್. ನಿಜಲಿಂಗಪ್ಪನವರಿಗೆ ಸಲ್ಲುತ್ತದೆ. ಚಿಕ್ಕ ವಯಸ್ಸಿನ ರೂಪವತಿ ದೊಡ್ಡ ಜವಾಬ್ದಾರಿ ಹೊತ್ತಿದ್ದ ಅಮ್ಮನವರ ಬಗ್ಗೆ ನಿಜಲಿಂಗಪ್ಪನವರು ಅಯ್ಯೋ ಎಂದು ಮರುಗಿದ್ದರಂತೆ ಅದೇ ನಾಗರತ್ನಮ್ಮನವರು ನಿಜಲಿಂಗಪ್ಪನವರ ಕಾಂಗ್ರೆಸ್ ಪಕ್ಷಕ್ಕೆ ಸೇರಿದಾಗ ನಿಜಲಿಂಗಪ್ಪನವರಿಗೆ ಹೆಚ್ಚಿನ ಆನಂದ ದೊರೆಕಿತಂತೆ. ಕಾಂಗ್ರೆಸ್ ಪಕ್ಷದಲ್ಲಿದ್ದ ನಿಜಲಿಂಗಪ್ಪನವರು ನಾಗರತ್ನಮ್ಮನವರನ್ನು ಪುನಃ ನೋಡಿದ್ದು ಅವರು ಮುಖ್ಯಮಂತ್ರಿಯಾಗಿದ್ದಾಗ ನಿಜಲಿಂಗಪ್ಪನವರು ಆಳುವ ಪಕ್ಷದಲ್ಲಿದ್ದರು ಆಗ ನಾಗರತ್ನಮ್ಮನವರು ವಿರೋಧ ಪಕ್ಷದ ಸದಸ್ಯರಾಗಿದ್ದರು. ಅಮ್ಮನವರ ನಾಲಿಗೆ ಬಹಳ ಚುರುಕಾಗಿ ಹರಿತವಾಗಿ ಸರ್ಕಾರವನ್ನು ಟೀಕಿಸುತ್ತಿದ್ದ ಬಗೆಯನ್ನು ಕಂಡು ನಿಜಲಿಂಗಪ್ಪನವರು ಮೆಚ್ಚುತ್ತಿದ್ದರಂತೆ. ಅಮ್ಮನವರು ಸಭ್ಯತೆಯ ಎಲ್ಲೆ ಮೀರಿ ಎಂದೂ ವರ್ತಿಸಿದವರಲ್ಲ. ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿದ್ದ ಅನೇಕ ಮಂತ್ರಿಗಳು ಅಮ್ಮನವರ ಟೀಕೆಯಿಂದ ಹೆಚ್ಚುತ್ತುಕೊಳ್ಳುತ್ತಿದ್ದಂತೆ ಮಂತ್ರಿ ಮಂಡಲದಲ್ಲಿ ಇದ್ದ ಮಂತ್ರಿಗಳು ಅಮ್ಮನವರ ಟೀಕೆಗಳನ್ನು

ಸಹಾನುಭೂತಿಯಿಂದ ಕೇಳಿ ಸೂಕ್ತ ಪರಿಹಾರದ ಕ್ರಮಗಳನ್ನು ಕೈಗೊಂಡ ನಿದರ್ಶನಗಳಿಗೆ ಕೊರತೆ ಇಲ್ಲ. ಅಂತೆಯೇ ಮುಖ್ಯ ಮಂತ್ರಿಗಳಾದ ನಿಜಲಿಂಗಪ್ಪನವರು ಸಹ ಅಗತ್ಯ ಪರಿಹಾರಕ್ಕೆ ಅವಕಾಶ ಕಲ್ಪಿಸಿಕೊಡುತ್ತಿದ್ದರು. ಕಬ್ಬಹಳ್ಳಿ ದಾನಿಗಳ ಮನೆತನಕ್ಕೆ ಗೌರವ ತಂದಿದ್ದ ಸೊಸೆ ನಾಗರತ್ನಮ್ಮನವರು ಹುಲ್ಲು ತರುವ ಬದಲು ಸರ್ಕಾರಕ್ಕೆ ಗೌರವ ತಂದು ಕೊಟ್ಟಿದ್ದರು.

ಶ್ರೀಮತಿ ನಾಗರತ್ನಮ್ಮನವರು ತಮ್ಮ ಕ್ಷೇತ್ರದಿಂದ ತಪ್ಪದೇ ಅನೇಕ ಭಾರಿ ಚುನಾಯಿತರಾಗಿ ವಿಧಾನ ಸಭೆಗೆ ಆರಿಸಿ ಹೋಗಿದ್ದರು. ತಮ್ಮ ಕ್ಷೇತ್ರದ ಜನತೆಯ ಸೇವೆಗಾಗಿ ಅದರಲ್ಲೂ ರೈತರ ಬಡವರ ನಿರಕ್ಷರ ಕುಷೆಗಳ, ಸಾಮಾನ್ಯರ ಏಳಿಗೆಗಾಗಿ ನಿಷ್ಠೆಯಿಂದ ಎಡೆಬಿಡದೆ ದುಡಿಯುತ್ತಿದ್ದರ ಪರಿಣಾಮ ಅವರು ಆಯ್ಕೆಯಾಗುತ್ತಿದ್ದರು. ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ ಬಿಡುವಿನ ವೇಳೆ ಅವರ ಸಮೀಪಕ್ಕೆ ತೆರಳಿ ಅವರನ್ನು 'ಅಪ್ಪ' ಎಂದು ಸಂಬೋದಿಸುತ್ತಿದ್ದರು. ಅಂತೆಯೇ ಅವರು 'ಏನಮ್ಮಾ' ಬಂದ ಕೆಲಸವೇನು ಎಂದು ವಿಚಾರಿಸಿ ಗೌರವದಿಂದ ಕಾಣುತ್ತಿದ್ದರಂತೆ ಅಪ್ಪ ನನಗಾಗಿ, ನನ್ನ ಸ್ವಂತಕ್ಕಾಗಿ ನಾನು ಎಂದೂ ಏನನ್ನೂ ಕೇಳಲಿಲ್ಲ. ತಮ್ಮ ಕ್ಷೇತ್ರದ ಕೆಲವು ಗ್ರಾಮಗಲ್ಲಿ ಶಾಲೆಗಳಿಲ್ಲ, ಬಸ್ಸಿನ ಸೌಲಭ್ಯವಿಲ್ಲ, ಬಾವಿ ಇಲ್ಲ, ರಸ್ತೆಗಳಿಲ್ಲ, ಕೆರೆಗಳು ದುರಸ್ತಿಯಾಗಿಲ್ಲ, ಹೊಸ ಕೆರೆ ನಿರ್ಮಾಣ ಆಗಬೇಕು ಎಂದು ಬೇಕುಗಳ ಪಟ್ಟಿಯನ್ನೇ ಅವರಿಗೆ ಒಪ್ಪಿಸುತ್ತಿದ್ದರಂತೆ ಇವರ ಅನೇಕ ಕೋರಿಕೆಗಳನ್ನು ಮನಗಂಡ ಮುಖ್ಯಮಂತ್ರಿಯವರಿಗೆ ಸಂತೋಷವಾಗುತ್ತಿತ್ತು. ಇತರೆ ವಿಧಾನ ಸಭಾ ಸದಸ್ಯರು ನಾಗರತ್ನಮ್ಮನವರಂತೆ ನಿಷ್ಠೇ, ವಿಶ್ವಾಸ, ಸೇವಾ ಮನೋಭಾವದಿಂದ, ಸೇವಾಕಾಂಕ್ಷಿಯಿಂದ ದುಡಿದರೆ ಎಷ್ಟು ಚಂದ ಎನಿಸಿರಬೇಕು. ಅಲ್ಲಿಗೆ ನಾಗರತ್ನಮ್ಮನವರ ಅನೇಕ ಕೋರಿಕೆಗಳ ಈಡೇರಿಕೆ ಗುಂಡ್ಲುಪೇಟೆಯ ಜನರಿಗೆ ಅನುಕೂಲವೂ ಆಗಿದೆ. ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಕೋರಿಕೆಗಳನ್ನು ಹಲವು ಸದಸ್ಯರು ವಿರೋಧಿಸಿದ ಸಂದರ್ಭಗಳೂ ಉಂಟು ಆದರೆ ಅಮ್ಮನವರು ತಮ್ಮ ಸ್ವಂತಕ್ಕಾಗಿ ಏನನ್ನೂ ಬಯಸಿದವರು ಎಂಬ ಅವರ ಸ್ವಾಭಾವವನ್ನು ಅರಿತಿದ್ದ ನಿಜಲಿಂಗಪ್ಪನವರು ವಿರೋಧದ ನಡುವೆಯೂ ಅವರ ಕೋರಿಕೆಯನ್ನು ಮಾನ್ಯ ಮಾಡಿರುವುದುಂಟು.

ಸನ್ಮಾನ್ಯ ಎಸ್. ಬಂಗಾರಪ್ಪನವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ತಾಳ್ಮೆ, ಸೌಜನ್ಯ, ಪ್ರತಿಭೆ, ಮೈವೆತ್ತಂತೆ ಇದ್ದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಸಾಮರ್ಥ್ಯ ಗುರ್ತಿಸಿದ್ದ ಎಸ್. ಬಂಗಾರಪ್ಪನವರು ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರನ್ನು ಅವರ ಸಚಿವ ಸಂಪುಟದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯಾಗಿ ಸ್ಥಾನ ಕಲ್ಪಿಸಿದ್ದರು. ಇದರಿಂದಾಗಿ ಅಮ್ಮನವರು ಅಪಾರ ಸೇವೆ ಸಲ್ಲಿಸಲು ಅವಕಾಶವಾಯಿತು.

ಪ್ರಪಂಚದ ನಾನಾ ಭಾಗಗಳಲ್ಲಿ ಉನ್ನತ ಅಧಿಕಾರ ವಹಿಸಿಕೊಂಡು ಪುರುಷರಿಗಿಂತಲೂ ಹೆಚ್ಚಿನ ಸಾಮರ್ಥ್ಯ ತೋರಿದ ಧೀಮಂತ ಮಹಿಳೆಯರಿದ್ದಾರೆ ಅಂತಹ ಅವಕಾಶಗಳು ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರಿಗೆ ದೊರಕಿದ್ದರೆ ಅವರೊಬ್ಬ ಶ್ರೇಷ್ಠ ಆಡಳಿತಗಾರ್ತಿಯಾಗಿ, ಅನುಭವದ ಬುಗ್ಗೆಯಾಗಿ ರಾಷ್ಟ್ರಕ್ಕೆ ದಕ್ಷ ಆಡಳಿತ ಕೊಡುವ ಧೀಮಂತ ಶಕ್ತಿಯಾಗಿ ಬೆಳೆಯುತ್ತಿದ್ದರೆಂಬುದರಲ್ಲಿ ಸಂಶಯವಿಲ್ಲ, ಹೀಗೆ ಅವರು ಎಲ್ಲಾ ಬಗೆಯ ಅರ್ಹತೆಗಳನ್ನು ಗಳಿಸಿಕೊಂಡಿದ್ದರೆಂಬುದನ್ನು ಗಮನಿಸಬೇಕಾಗಿದೆ.

ಒಮ್ಮೆ ಜಗದ್ಗುರು ಶಿವರಾತ್ರೀಶ್ವರ ಭಗವತ್ಪಾದರ 1031 ನೇ ಜಯಂತಿಯ ಉತ್ಸವ ಏರ್ಪಾಡಾಗಿತ್ತು ಅದರ ಅಧ್ಯಕ್ಷತೆಯನ್ನು ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ವಹಿಸಿದ್ದರು. ಆ ಸಭೆಗೆ ಮಾಜಿ ಮುಖ್ಯಮಂತ್ರಿಗಳಾಗಿದ್ದ ದಿವಂಗತ ಎಂ.ಪಿ. ಪ್ರಕಾಶ್‌ರವರೂ ಬಂದಿದ್ದರೂ ಅವರು ಮಾತನಾಡುತ್ತಾ "ನಾಗರತ್ನಮ್ಮನವರ ಸತತ ಗೆಲುವಿನ ಗುಟ್ಟೇನು" ಎಂದು ನಗುತ್ತ ಕೇಳಿದರಂತೆ ಆಗ ಶ್ರೀಮತಿ ನಾಗರತ್ನಮ್ಮನವರು ತಮ್ಮ ಭಾಷಣದಲ್ಲಿ "ಗುಂಡ್ಲುಪೇಟೆ ತಾಲ್ಲೂಕಿನ ಜನ ನನ್ನನ್ನು ಅವರ ಮಗಳಂತೆ ನೋಡಿಕೊಳ್ಳುತ್ತಿರುವುದೇ ನನ್ನ ಗೆಲುವಿಗೆ ಕಾರಣ" ಎಂದು ಕೃತಜ್ಞತೆಯಿಂದ ನುಡಿದರಂತೆ.[4]

ನಾಗರತ್ನಮ್ಮನವರನ್ನು ಇಷ್ಟೊಂದು ವಿಶ್ವಾಸದಿಂದ ಗುಂಡ್ಲುಪೇಟೆಯ ಜನ ನೋಡಿಕೊಳ್ಳುತ್ತಿರುವುದಕ್ಕೆ "ಆ ಮನೆತನದವರ ನಿಸ್ವಾರ್ಥ ಸೇವೆಯೇ ಕಾರಣ" ಎಂಬ ಅರಿವು ಎಂ.ಪಿ. ಪ್ರಕಾಶ್‌ರವರಿಗೆ ಆಗಿರಬೇಕು.

ನಾಗರತ್ನಮ್ಮನವರು ಕೊಟ್ಟ ಮಾತಿಗೆ ತಪ್ಪದೆ, ದುಷ್ಟರಿಗೆ ಸಹಾಯ ಮಾಡದೆ, ಸಜ್ಜನರಿಗೆ ತೊಂದರೆ ಕೊಡದೆ, ದೀನರು, ದಲಿತರು, ಅನಾಥರುಗಳಿಗೆ ಸದಾ ಕೊಡುಗೈ ದಾನಿಯಾಗಿ, ರಾಜಕೀಯ ರಂಗದಲ್ಲಿ ವಿರೋಚಿತವಾಗಿ ಹೋರಾಡಿ, ಮಿತ್ರರಿಗೆ ಆಶ್ರಯ ನೀಡಿ, ನಂಬಿದವರನ್ನು ಕೈ ಬಿಡದೆ ಒಳ್ಳೆಯ ಮಾರ್ಗದಲ್ಲಿ ನಡುದುಕೊಂಡ ಕಾರಣ ಅವರು ಎಲ್ಲರಿಗೂ ಅಮ್ಮನಾಗಿ, ಅವ್ವನಾಗಿ ಕಾಣಿಸಿತೊಡಗಿದರು. ಈ ಮಹಾಮಹಿಳೆ ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿ ಪದವಿಯೊಂದನ್ನುಳಿದು ಇನ್ನೆಲ್ಲಾ ಉನ್ನತ ಸ್ಥಾನಗಳನ್ನು ನಿರಾಯಾಸವಾಗಿ ನಿರ್ವಹಿಸಿದ್ದರು.

3.2 ಸಭಾಧ್ಯಕ್ಷರಾಗಿ

ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಏಷ್ಯಾ ಖಂಡದಲ್ಲೇ ವಿಧಾನ ಸಭಾ ಅಧ್ಯಕ್ಷೆಯಾಗಿ ಆರಿಸಿಬಂದ ಪ್ರಥಮ ಮಹಿಳೆ.[5] ಇವರು ದಿನಾಂಕ: 24-03-1972 ರಿಂದ 17-03-1978ರ ಅವಧಿಯ ವರೆಗೆ ಕರ್ನಾಟಕ ವಿಧಾನ ಸಭೆಯ ಸಭಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. 1972 ರ ಸಾವತ್ರಿಕ ಚುನಾವಣೆಯಲ್ಲಿಕಾಂಗ್ರೆಸ್ ಪಕ್ಷವು ಅತ್ಯಧಿಕ ಬಹುಮತ ಗಳಿಸಿತು. ಆಗ ಡಿ. ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದರು. ಹಿರಿಯ ಕಾಂಗ್ರೆಸ್ ಶಾಸಕಿಯಾಗಿದ್ದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರನ್ನು ಕಾಂಗ್ರೆಸ್ ಪಕ್ಷವು ಮೇಲೆ ತಿಳಿಸಿದ ಅವಧಿಗೆ ಸರ್ವಾನುಮತದಿಂದ ವಿಧಾನಸಭೆಯ ಅಧ್ಯಕ್ಷಣೆಯಾಗಿ ಆಯ್ಕೆ ಮಾಡಿತು. ವಿಧಾನ ಸಭೆಯ ಅಧ್ಯಕ್ಷ ಸ್ಥಾನವು ಅತ್ಯಂತ ಪವಿತ್ರವಾದ ಸ್ಥಾನ ಅದರಲ್ಲಿ ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕಾಗುತ್ತದೆ. ಆ ಸ್ಥಾನದಲ್ಲಿ ಕೆಲಸ ನಿರ್ವಹಿಸಲು ಸಭಾಧ್ಯಕ್ಷರು ವಿವೇಚನೆ ಮತ್ತು ತಾಳ್ಮೆಯಿಂದ ವರ್ತಿಸಬೇಕಾಗುತ್ತದೆ. ಅವರ ವಿವೇಚನೆ ಮತ್ತು ಸರಿಯಾದ ನಿರ್ಧಾರಗಳು ಅವರ ವ್ಯಕ್ತಿತ್ವವನ್ನು ಹೆಚ್ಚಿಸುತ್ತದೆ. ವಿಧಾನ ಸಭೆಯು ಸದಾ ಹಿರಿಯ ಮತ್ತು ಅನುಭವಿ ಸದಸ್ಯರಿಂದ ತುಂಬಿರುತ್ತದೆ. ಆದ್ದರಿಂದ ಆ ಸಭೆಯಲ್ಲಿರುವ ಹಿರಿಯರು ಕೇಳಬಹುದಾದ ಎಲ್ಲಾ ಪ್ರಶ್ನೆಗಳಿಗೂ ಸಭೆಯಲ್ಲಿರುವ ಮಂತ್ರಿಗಳಿಂದ ಉತ್ತರ ಕೊಡಿಸಬೇಕಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಶ್ರೀಮತಿ ಕೆ.ಎಸ್. ನಾಗರತ್ನಮ್ಮರವರು 5 ವರ್ಷಗಳ

ಕಾಲ ಸಭಾಧ್ಯಕ್ಷರಾಗಿದ್ದಾರೆ ಎಂದರೆ ಆಶ್ಚರ್ಯವೇ ಸರಿ ಅಮ್ಮನವರು ಆಸ್ಥಾನದಲ್ಲಿದ್ದು 5 ವರ್ಷಗಳ ಅವಧಿಯನ್ನು ಪೂರೈಸಿದುದು ಅವರಿಗೆ ದೊರೆತ ಒಂದು ಹಿರಿಮೆ ಎಂದು ಹೇಳಬಹುದು. ಇಂಥಹ ಜವಾಬ್ದಾರಿಯುತ ಸ್ಥಾನದಲ್ಲಿದ್ದ ಅವರು ಅವಧಿ ಪೂರೈಸಿ ಮಹಿಳಾ ಸಮುದಾಯಕ್ಕೆ ಒಂದು ಗೌರವ ತಂದು ಕೊಟ್ಟಿದ್ದಾರೆ. ಕರ್ನಾಟಕದ ಇತಿಹಾಸದಲ್ಲಿ ಮಹಿಳೆಯೊಬ್ಬರು ವಿಧಾನ ಸಭಾ ಅಧ್ಯಕ್ಷರಾಗಿದ್ದುದು ಒಂದು ಅಚ್ಚರಿಯ ಸಂಗತಿಯಾಗಿದೆ. ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಸಭಾಧ್ಯಕ್ಷ ಸ್ಥಾನದ ಜವಾಬ್ದಾರಿಗಳನ್ನು ವಹಿಸಿಕೊಂಡ ಮೇಲೆ ಯಾರ ದಾಕ್ಷಣ್ಯಕ್ಕೂ ಒಳಗಾಗದೆ ಕೆಲಸ ನಿರ್ವಹಿಸಿದರು. ಸಂದರ್ಭಕ್ಕೆ ಸರಿಯಾಗಿ ಸಭೆಯ ಸದಸ್ಯರನ್ನು ನಿಯಂತ್ರಣಕ್ಕೆ ತರುತ್ತಿದ್ದರು. ಪ್ರೇಕ್ಷಕರ ನ್ಯಾಯಾಲಯದಲ್ಲಿ ಅನೇಕ ಜನ ಕುರಿತು ಸಭೆಯ ನಡಾವಳಿಯನ್ನು ವೀಕ್ಷಿಸಿ ನಗುವುದು ಚಪ್ಪಾಳೆ ತಟ್ಟುವುದು. ಸಿಳ್ಳೆ ಹಾಕುವುದು, ಸಾಮಾನ್ಯ ಅಂಥಹ ಸಂದರ್ಭದಲ್ಲಿ ಅಮ್ಮನವರು ಪ್ರೇಕ್ಷಕರ ಗ್ಯಾಲರಿಯಲ್ಲಿ ಇದ್ದವರನ್ನು ಕ್ಷಣಾರ್ಧದಲ್ಲಿ ನಿಯಂತ್ರಿಸುತ್ತಿದ್ದರು. ಅನೇಕರು ಸರ್ಕಾರದ ವಿರುದ್ಧ ಘೋಷಣೆಗಲನ್ನು ಕೂಗುತ್ತಿದ್ದರು. ಎದೆಗುಂದದ ನಾಗರತ್ನಮ್ಮನವರು ಅನಪೇಕ್ಷಿತ ವರ್ತನೆಯಲ್ಲಿ ತೊಡಗಿದವರನ್ನು ಪೊಲೀಸರ ನೆರವಿನಿಂದ ಹೊರ ಹಾಕುತ್ತಿದ್ದರು. ಇಂದಿರಾ ಬ್ರಿಗೆಡ್ ಕಮ್ಯಾಂಡ್‌ಡೆಂಟ್ ಆಗಿದ್ದ ಶ್ರೀ ಎಂ. ನಟರಾಜ್ ಎಂಬುವರು ಸರ್ಕಾರದ ಬಗ್ಗೆ ದಿನಾಂಕ: 02-09-1974 ರಂದು ಲೋಕವಾಣಿ ಪತ್ರಿಕೆಯಲ್ಲಿ ಒಂದು ಹೇಳಿಕೆ ನೀಡಿದ್ದರು. ಹಾಗೂ ಸದನದ ಬಗ್ಗೆ ಕೆಲವು ನಿಂದನಾತ್ಮಕ ಮಾತುಗಳನ್ನು ಪ್ರಯೋಗಿಸಿದ್ದರು. ಸದರಿಯವರು ಆಗಿನ ಮುಖ್ಯಮಂತ್ರಿಯಾಗಿದ್ದ ಸನ್ಮಾನ್ಯ ಡಿ. ದೇವರಾಜು ಅರಸುರವರ ಅಳಿಯರಾಗಿದ್ದರು. ನಿಂದೆಯ ಮಾತುಗಳನ್ನಾಡಿದ ಎಂ.ಡಿ. ನಟರಾಜ್‌ರವರ ಬಗ್ಗೆ ಅಸಮಾಧಾನಗೊಂಡ ಸದಸ್ಯರು ಸಭೆಯಲ್ಲಿ ಹಕ್ಕುಚ್ಯುತಿ ಮಂಡಿಸಿದರು. ಆಗ ಹೆಚ್.ಡಿ. ದೇವೇಗೌಡರು ಚರ್ಚೆಯನ್ನು ಆರಂಭಿಸಿ ಪೊಲೀಸ್, ಸಿ.ಐ.ಡಿ. ಇಲಾಖೆ ಏನು ಮಾಡುತ್ತಿದೆ. ಇಂಥಹ ಅನುಚಿತ ಹೇಳಿಕೆಗಳನ್ನು ದೇವರಾಜು ಅರಸ್‌ರವರ ಅಳಿಯರವರಾದ ಎಂ.ಡಿ. ನಟರಾಜ್‌ರವರು ಕೊಟ್ಟಿದ್ದರಿಂದ ಸಭೆಯ ಘನತೆ ಗೌರವಕ್ಕೆ ಧಕ್ಕೆ ಉಂಟಾಗಿದೆ. ಸಭೆಯ ಹಕ್ಕನ್ನು ರಕ್ಷಣೆ ಮಾಡಬೇಕು ಎಂದು ವಿರೋಧ ಪಕ್ಷದ ಅನೇಕರು ಕೂಗಿಕೊಂಡು ಬೊಬ್ಬೆ ಹಾಕಿದರು. ವಿಶ್ವವಿದ್ಯಾನಿಲಯದ ಪರಿಸರದಲ್ಲಿ ನಡೆದಿರತಕ್ಕ ಮತ್ತು ನಡಿಯುತ್ತಾ ಇರುವ ದುಷ್ಕೃತ್ಯಗಳಿಗೆ ದೇವೇಗೌಡನಾದ ನಾನು ಕಾರಣವೊ, ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ದೇವರಾಜು ಅರಸರು ಕಾರಣರೋ ಎಂಬುದನ್ನು ನಿರ್ಧರಿಸಿ ಎಂದು ಸಭಾಧ್ಯಕ್ಷಿಣಿಯಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರನ್ನು ಒತ್ತಾಯಿಸಿದರು. ಮಧ್ಯ ಪ್ರವೇಶಿಸಿದ ಶ್ರೀ ಎಸ್.ಎಂ. ಕೃಷ್ಣರವರು ಈ ಘಟನೆ ಮತ್ತು ಹೇಳಿಕೆ ಸದನದ ಹೊಗಿನ ವಿಚಾರಕ್ಕೆ ಸಂಬಂಧಿಸಿದ್ದು, ಮಾನ್ಯ ಮಂತ್ರಿಗಳು ಅಗೌರವದ ಮಾತನಾಡಿಲ್ಲ ಅದಕ್ಕೆ ಯಾರೂ ಕಾರಣರು ಮುಖ್ಯಮಂತ್ರಿಗಳು ಸದನದ ಹೊರಗೆ ನಡೆಯುವ ವ್ಯವಹಾರಕ್ಕೆ ಜವಾಬ್ದಾರರಲ್ಲ ಎಂದು ವಾದಿಸಿದರು. ಹೀಗೆ ಸದನದ ಒಳಗೆ ಚರ್ಚೆ ನಡೆಯುತ್ತಿತ್ತು ಎಲ್ಲವನ್ನು ಗಮನಿಸಿ ಅಮ್ಮನವರು ಶ್ರೀ ದೇವೇಗೌಡರಿಗೆ ಚರ್ಚೆಯನ್ನು ಮುಂದುವರಿಸಲು ಅವಕಾಶ ಕಲ್ಪಿಸಿಕೊಟ್ಟರು. ಆಗ ದೇವೇಗೌಡರು.

I beg to move

"that the statement of Dr. MD. Nataraj, published in Løk Vani, dated 2nd September 1974 is a breach of privilege of the member of the House and it involves the contempt of the House also and may be referred to the committee of privileges for Enquiry "[6]

ಹೀಗೆ ಮುಂದುವರಿದ ಚರ್ಚೆಯನ್ನು ಗಮನಿಸಿದ ಸಭಾಧ್ಯಕ್ಷಣಿಯವರು ನಿರ್ಣಯದ ಮಂಡನೆಗೆ ಅವಕಾಶ ಕಲ್ಪಿಸಿಕೊಟ್ಟರು ನಿರ್ಣಯವು ಅಂಗೀಕಾರವಾಯಿತು. ಹಕ್ಕು ಚ್ಯುತಿ ನಿಲುವಳಿ ಸೂಚನೆಯನ್ನು ಅಂಗೀಕರಿಸಿ ಅದನ್ನು ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಲಾಯಿತು. ಹೀಗೆ ಕೆ.ಎಸ್. ನಾಗರತ್ನಮ್ಮನವರು ಸಭಾಧ್ಯಕ್ಷಣಿಯಾಗಿದ್ದಾಗ ಕ್ಲಿಷ್ಟಕರ ಸಂಗತಿಗಳು ಒದಗಿ ಬಂದಾಗಲೆಲ್ಲಾ ಅಧ್ಯಕ್ಷರ ಸ್ಥಾನದಲ್ಲಿ ಕುಳಿತು ಬಹಳ ಎಚ್ಚರಿಕೆಯಿಂದ ತೀರ್ಪು ನೀಡುತ್ತಿದ್ದರು. ಅವರ ಜಾಣ್ಮೆಯ ಪ್ರತೀಕವಾಗಿದೆ. ಅವರ ಐದು ವರ್ಷದ ಅವಧಿಯಲ್ಲಿ ಇಂಥಹ ಅದೆಷ್ಟು ತೀರ್ಪುಗಳನ್ನು ನೀಡಿದ್ದಾರೋ ಅದು ವಿಧಾನ ಸಭೆಯ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೇ ಉಳಿದಿದೆ. ಅವರ ಸಭಾಧ್ಯಕ್ಷರಾಗಿದ್ದಾಗ ಎಸ್. ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಕೊಣಂದೂರು ಲಿಂಗಪ್ಪ ಹಾಗೂ ಎಂ.ಹೆಚ್. ಜಯಪ್ರಕಾಶ್ ನಾರಾಯಣ್‌ಗಳಂತಹ ಘಟಾನುಘಟಿಗಳು ವಿಧಾನ ಸಭಾ ಸದಸ್ಯರುಗಳಾಗಿದ್ದರು. ಅವರೆಲ್ಲರೂ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿ ಅಮ್ಮನವರನ್ನು ಅದೇಷ್ಟು ಸಾರಿ ಗೊಂದಲಕ್ಕೆ ಈಡು ಮಾಡಿದ್ದಾರೋ ತಿಳಿಯದು. ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯ ಮಂತ್ರಿಯಾಗಿದ್ದಾಗ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರಿಗೆ ಬೆಂಬಲವಾಗಿ ನಿಂತು ಅಮ್ಮನವರು ಅಧ್ಯಕ್ಷ ಸ್ಥಾನದಲ್ಲಿ ಕೆಲಸ ನಿರ್ವಹಿಸಲು ಅನುಕೂಲ ಮಾಡಿಕೊಡುತ್ತಿದ್ದರು. ಸಬೆ ನಡೆಯುವಾಗ ಬೇರೆ ಇಲಾಖೆಗಳ ಎಲ್ಲಾ ಮುಖ್ಯಸ್ಥರುಗಳು ಸದನದಲ್ಲಿ ಹಾಜರಾಗಬೇಕೆಂದು ಕಟ್ಟು ನಿಟ್ಟಿನ ವ್ಯವಸ್ಥೆ ಮಾಡಿದ್ದರು. ಯಾರಾದರೂ ಉನ್ನತ ಹುದ್ದೆಯ ಅಧಿಕಾರಿಗಳು ಸಭೆಯಲ್ಲಿ ಹಾಜರಿಲ್ಲದ ಸಂದರ್ಭದಲ್ಲಿ ಅವರಿಗೆ ಎಚ್ಚರಿಕೆಯ ಮಾತುಗಳ ಮೂಲಕ ಚಾಟಿ ಬೀಸುತ್ತಿದ್ದರು. ಇದರಿಂದ ಎಲ್ಲಾ ಇಲಾಖೆಗಳ I.A.S. ಹಂತದ ಅಧಿಕಾರಿಗಳನ್ನು ಒಳಗೊಂಡ ಅನೇಕ ಗಣ್ಯರು ಸದನದಲ್ಲಿ ಇದ್ದ ಸದಸ್ಯರ ಪ್ರಶ್ನೆಗಳಿಗೆ ನಿಖರವಾದ ಉತ್ತರ ದೊರಕಿಸಿಕೊಡುವಂತೆ ಕ್ರಮಕೈಗೊಳ್ಳುತ್ತಿದ್ದರು. ಹೀಗೆ ಅಮ್ಮನವರು ತಮ್ಮ ಧೀರ್ಘಾಕಾಲದ ಅವಧಿಯನ್ನು ಗೊಂದಲ ಗೋಜುಗಳಿಲ್ಲದೆ ಪೂರೈಸಿದುದ ಒಂದು ಸಂತೋಷದ ಸಂಗತಿ ಅಮ್ಮನವರು ವಿಧಾನ ಸಭಾ ಅಧ್ಯಕ್ಷಿಣಿಯಾಗಿ ಕಾರ್ಯ ನಿರ್ವಹಿಸಿದ ಭಾರತದ ಮೊದಲ ಮಹಿಳಾ ಮಣಿ ಸಂಸದೀಯ ಇತಿಹಾಸದಲ್ಲಿ ಅವರ ಹೆಸರು ಚಿರಸ್ಥಾಯಿಯಾಗಿ ನಿಲ್ಲತಕ್ಕ ಅರ್ಹತೆ ಪಡೆದಿದೆ. ಅವರು ತಮ್ಮ ಸಂಸದೀಯ ಜೀವನದಲ್ಲಿ ಮುಖ್ಯಮಂತ್ರಿ ಹುದ್ದೆಯನ್ನು ಹೊರತುಪಡಿಸಿ ಉಳಿದೆಲ್ಲಾ ಹುದ್ದೆಗಳಲ್ಲೂ ಕಾರ್ಯನಿರ್ವಹಿಸಿರುವುದು ಒಂದು ಸಂತಸದ ಸಂಗತಿಯಾಗಿದ್ದು ರಾಜಕೀಯ ಕ್ಷೇತ್ರದಲ್ಲಿ ಕಳಸ ಪ್ರಾಯರಾಗಿದ್ದಾರೆ. ಕರ್ನಾಟಕ ಕಂಡ ವಿರಳ ಮಹಿಳಾ ರಾಜಕಾರಣಿಗಳಲ್ಲಿ ಅವರು ಅತ್ಯಂತ ಉನ್ನತ ಶೈಲಿಯಲ್ಲಿದ್ದರು. ಅವರು ಮೈಸೂರಿನಲ್ಲೇ ಇರಲಿ ಬೆಂಗಳೂರಿನಲ್ಲೇ ಇರಲಿ ಅಥವಾ ಕರ್ನಾಟಕದ

ಯಾವುದೇ ಮೂಲೆಯಲ್ಲಿರಲಿ ತನ್ನ ಕ್ಷೇತ್ರದ ಬಗ್ಗೆ ಅವರು ಸದಾ ಚಿಂತನೆ ಮಾಡುತ್ತಿದ್ದರು ಹೀಗೆ ಅವರ ಚಿಂತನೆ ಅವರ ಸತತ ಗೆಲುವಿಗೆ ಕಾರಣವಾಗಿತ್ತು ಗುಂಡ್ಲುಪೇಟೆ ತಾಲೂಕಿನ ಕಬ್ಬಹಳ್ಳಿ ಮನೆತನ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಸಾಧನೆಯ 2-3 ರಷ್ಟು ಪಟ್ಟು ಸಾಧನೆಯನ್ನು ಅಮ್ಮನವರೊಬ್ಬರೆ ಸಾಧಿಸಿದ್ದಾರೆ ಎಂಬುದನ್ನು ಅವಲೋಕಿಸಬೇಕಾಗುತ್ತದೆ. ಅಮ್ಮನವರು ಉನ್ನತ ಸ್ಥಾನದಲ್ಲಿದ್ದು, ತಮ್ಮ ರಾಜಕೀಯ ಜೀವನದಲ್ಲಿ ಅನೇಕ ಪ್ರತಿಭಾವಂತ ವ್ಯಕ್ತಿಗಳನ್ನ ಬೆಳೆಸಿದ್ದಾರೆ. ಅಂಥಹ ವ್ಯಕ್ತಿಗಳ ಪೈಕಿಯಲ್ಲಿ ಗುಂಡ್ಲುಪೇಟೆಯ ದಿವಂಗತ ನಜೀರ್ ಸಾಹೇಬರು ಮುಖ್ಯಸ್ಥರು ಶ್ರೀ ಅಬ್ದುಲ್ ನಜೀರ್‌ಸಾಬ್‌ರವರು ಶ್ರೀ ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. ಶ್ರೀ ನಜೀರ್ ಸಾಬ್‌ರವರು ಅಮ್ಮನವರ ಮಾತನ್ನು ಎಂದೂ ಮೀರಿದವರಲ್ಲ. ಅಮ್ಮನವರನ್ನು ತಮ್ಮ ತಾಯಿಯಂತೆ ಕಾಣುತ್ತಿದ್ದರು. ಇದರಿಂದಾಗಿ ಅಲ್ಪಸಂಖ್ಯಾತ ಜನಾಂಗಕ್ಕೆ ಸೇರಿದ ಶ್ರೀ ಅಬ್ದುಲ್ ನಜೀರ್ ಸಾಬ್‌ರವರನ್ನು ವಿಧಾನ ಪರಿಷತ್ ಸದಸ್ಯರಾಗುವಂತೆ ಮಾಡಿದ ಕೀರ್ತಿ ಅಮ್ಮನವರಿಗೆ ಸಲ್ಲುತ್ತದೆ. ಅಮ್ಮನವರಿಗೂ ಶ್ರೀ ಅಬ್ದುಲ್ ನಜೀರ್ ಸಾಬ್‌ರವರಿಗೂ ನಿಕಟ ಬಾಂಧವ್ಯವಿತ್ತು. ಅಮ್ಮನವರ ಮತ್ತು ಶ್ರೀ ಅಬ್ದುಲ್ ನಜೀರ್‌ರವರ ಬಾಂಧವ್ಯ ಎಷ್ಟರ ಮಟ್ಟಿಗೆ ಬೆಳೆದಿತ್ತೆಂದರೆ ಶ್ರೀ ಅಬ್ದುಲ್ ನಜೀರ್‌ಸಾಬ್‌ರವರು ಅಮ್ಮನವರನ್ನು ತಮ್ಮ ರಾಜಕೀಯದ ತಾಯಿ ಎಂದು ಪರಿಗಣಿಸಿ ಗೌರವಿಸುತ್ತಿದ್ದರು. ಅಂಥೇಯೇ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರೂ ಸಹ ದಿವಗಂತ ಶ್ರೀ ಅಬ್ದುಲ್ ನಜೀರ್ ಸಾಬ್‌ರವರನ್ನು ತಮ್ಮ ಮಗನಿಗಿಂತಲೂ ಹೆಚ್ಚು ಪ್ರೀತಿ, ಆಧರದಿಂದ ಕಾಣುತ್ತಿದ್ದರು. ಒಟ್ಟಿನಲ್ಲಿ ಅಮ್ಮನವರು ರಾಜಕೀಯ ಕ್ಷೇತ್ರದಲ್ಲಿ ವಿರೋಧ ಪಕ್ಷದ ನಾಯಕಿಯಾಗಿ, ವಿಧಾನ ಸಭೆಯ ಅಧ್ಯಕ್ಷಿಣಿಯಾಗಿ ಆರ್ಯ ನಿರ್ವಹಿಸಿದರು. ದಿವಗಂತ ಶ್ರೀ ಅಬ್ದುಲ್ ನಜೀರ್‌ಸಾಬ್‌ರವರು ಆರಂಭದಲ್ಲಿ ಕಾಂಗ್ರೆಸ್ ಪಕ್ಷದಲ್ಲಿದ್ದರು. ಶ್ರೀ ರಾಮಕೃಷ್ಣ ಹೆಗಡಿಯವರು ಮುಖ್ಯಮಂತ್ರಿಯಾಗಿದ್ದಾಗ ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಕಾಂಗ್ರೆಸ್‌ನ್ನು ತೊರೆದು ಜನತಾ ಪಕ್ಷಕ್ಕೆ ಸೇರಿದರು. ಹೀಗೆ ಅಮ್ಮನವರು ಕಾಂಗ್ರೆಸ್‌ನಲ್ಲೇ ಇದ್ದು ಜನತಾ ಪಕ್ಷಕ್ಕೆ ಸೇರಿದ ಶ್ರೀ ಅಬ್ದುಲ್ ನಜೀರ್ ಸಾಬ್‌ರವರನ್ನು ಎಂದೂ ದೂಷಿಸಲಿಲ್ಲ. ಹಾಗೂ ಅವರ ರಾಜಕೀಯ ಪಥನಕ್ಕೆ ಪಿತೂರಿ ನಡೆಸಲಿಲ್ಲ. ಹೀಗೆ ಅಮ್ಮನವರು ಮತ್ತು ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಪಕ್ಷಗಳು ಬೇರೆ ಬೇರೆಯಾಗಿದ್ದರೂ ಇಬ್ಬರು ಮೊದಲಿನಂತೆಯೇ ವಾತ್ಸಲ್ಯದಿಂದ ನಡೆದುಕೊಳ್ಳುತ್ತಿದ್ದರು. ಹೀಗೆ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ರಾಜಕಾರಣಿಗಳು ಯಾರೇ ಹಾಗಿರಲಿ ಪಕ್ಷ ತೊರೆದರೆಂದು ಹಿಯಾಳಿಸಲಿಲ್ಲ. ಯಾವುದೇ ಪಕ್ಷ ಆಡಳಿತಕ್ಕೆ ಬಂದರೂ ಅವರು ಕಾಂಗ್ರೆಸ್ ಪಕ್ಷದಲ್ಲಿ ಇದ್ದುಕೊಂಡು ಎಲ್ಲಾ ಸಂದರ್ಭದಲ್ಲೂ ಸರ್ವ ಸಮತಾ ಭಾವನೆಯನ್ನು ವ್ಯಕ್ತ ಪಡಿಸುತ್ತಿದ್ದರು.

ಹೀಗೆ ಅಮ್ಮನವರು ವಿಧಾನ ಸಭೆಯ ಸಭಾಧ್ಯಕ್ಷೆಯಾಗಿ ಎಲ್ಲರೊಳು ಬೆರೆತು ಕರ್ನಾಟಕದ ಜನತೆಗೆ ಗೌರವ ತಂದು ಕೊಟ್ಟಿದ್ದಾರೆ.

3.3. ವಿರೋಧ ಪಕ್ಷದ ನಾಯಕಿಯಾಗಿ

ಶ್ರೀ ಡಿ. ದೇವರಾಜು ಅರಸುರವರು ಇಂದಿರಾಗಾಂಧಿಯವರೊಡನೆ ವಿರೋಧ ವ್ಯಕ್ತ ಪಡಿಸಿದಾಗ ಅವರ ಕುರ್ಚಿ ಅಲುಗಾಡ ತೊಡಗಿತು. ಇಂದಿರಾ ಗಾಂಧಿಯವರಿಗೆ ಸೆಡ್ಡು ಹೊಡೆದ ಅರಸುರವರು ಪ್ರತ್ಯೇಕವಾಗಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿದರು. ಅದಕ್ಕೆ ಕಾಂಗ್ರೆಸ್ 'ಡಿ' ಎಂದು ಹೆಸರಿಸಿದರು. ಅಂದರೆ ಡಿ. ದೇವರಾಜು ಅರಸು ಪಕ್ಷ ಎಂದರ್ಥ. ಚುನಾವಣೆ ಬಂದಾಗ ಅರಸುರವರು ಹೆಚ್ಚು ಸ್ಥಾನವನ್ನು ಗಳಿಸಲಾಗಲಿಲ್ಲ. ಅರಸು ಪಕ್ಷವು ಮೂಲೆ ಗುಂಪಾಯಿತು. ಆದರೂ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಅರಸು ಪಕ್ಷಕ್ಕೆ ನಿಷ್ಠೆ ತೋರದೆ ಇಂದಿರಾ ಗಾಂಧೀಯವರ ಪಕ್ಷದಲ್ಲೇ ಮುಂದುವರಿದರು. ಇದರಿಂದಾಗಿ ಅಮ್ಮನವರು ಕಾಂಗ್ರೆಸ್ ಪಕ್ಷದ ಹಿರಿಯ ಸದಸ್ಯರೆಂಬ ಹೆಗ್ಗಳಿಕೆ ಪಾತ್ರರಾದರು. ತದನಂತರ ಕಾಂಗ್ರೆಸ್ ಪಕ್ಷವು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಳ್ಳುವಂತಾಯಿತು. ಜನತಾ ಸರ್ಕಾರ ಆಡಳಿತ ನಡೆಸುತ್ತಿತ್ತು. ಇಂದಿರಾ ಕಾಂಗ್ರೆಸ್ಸಿಗರು ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಹಿರಿತನವನ್ನು ಗಮನಿಸಿ ವಿರೋಧ ಪಕ್ಷದ ನಾಯಕರ ಸ್ಥಾನದಲ್ಲಿ ಕೂರಿಸಿದರು. ದಿನಾಂಕ: 29-01-1987ರಿಂದ 21-04-1989 ರವರೆಗೂ ಶ್ರೀ ಕೆ.ಎಸ್. ನಾಗರತ್ನಮ್ಮನವರು ವಿರೋಧ ಪಕ್ಷದ ನಾಯಕಿಯಾಗಿ ಕೆಲಸ ನಿರ್ವಹಿಸಿದರು. ಜನತಾ ಸರ್ಕಾರವು ಎಡವಿದಾಗಲೆಲ್ಲಾ ತಮ್ಮ ಹರಿತವಾದ ಮಾತುಗಳ ಚಾಟಿಯಿಂದ ಸರ್ಕಾರವನ್ನು ಟೀಕಿಸುತ್ತಿದ್ದರು. ಅವರ ಭಯವಿಲ್ಲದ ಮಾತುಗಳು, ನಡೆ, ನುಡಿ, ಘರ್ಜನೆ ಇವೆಲ್ಲವೂ ಸದನಕ್ಕೆ ಹೆಚ್ಚು ಮೆರಗು ನೀಡುತ್ತಿದ್ದವು. ಜನತಾ ಸರ್ಕಾರದಲ್ಲಿ ಶ್ರೀ ಬಿ.ಜಿ. ಬಣಕಾರ್ ಎಂಬುವರು ಸಭಾಧ್ಯಕ್ಷರಾಗಿದ್ದಾಗ ಅವರು ಅಮ್ಮನವರನ್ನು ಕುರಿತು 1"ನಿಮ್ಮ ಮಾತು ಯೋಗ್ಯ ಕೇಳಬೇಕು, ಯೋಗ್ಯ ಇಲ್ಲ ವೆಂದು ಕಂಡು ಬಂದರೆ ಏಕೆ ಕೇಳಬೇಕು" ಎಂದು ಹೇಳಿದರು. ಆಗ ಅವರಿಬ್ಬರ ನಡುವೆ ಮಾತಿನ ಚಕಮಕಿಯೇ ನಡೆಯುತ್ತಿತ್ತು. ಆದರೂ ಹಠಮಾರಿತನದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ತಮ್ಮ ವಾದವನ್ನು ಮಂಡಿಸಿ ಸದನದ ಎಲ್ಲರ ಗಮನವನ್ನು ಸೆಳೆಯುತ್ತಿದ್ದರು. ತಮ್ಮ ಹಠ ಸ್ವಭಾವದಿಂದ ಪಕ್ಷದ ಎಲ್ಲರನ್ನೂ ಒಗ್ಗೂಡಿಸಿ ಅನೇಕ ಸಂದರ್ಭಗಳಲ್ಲಿ ಸದನದ ಅಂಗಳಕ್ಕೆ ಇಳಿದು ಪ್ರತಿಭಟಿಸುತ್ತಿದ್ದರು ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಆಗಿದ್ದಾಂಗೂ ಕೆಲವು ಹೇಳಿಕೆಗಳನ್ನು ನೀಡಿ ಸದನದ ಎಲ್ಲರನ್ನು ನಗಿಸುತ್ತಿದ್ದರು. ಅವರನ್ನು ಇದರಿಂದಾಗಿ ವಿನೋದ ಪ್ರಿಯ ಎಂದು ಕರೆಯಬಹುದು.ತಾವು ಮಂಡಿಸುತ್ತಿದ್ದ ವಾದಗಳಿಗೆ ಪೂರಕವಾಗಿ ಅನೇಕ ವಿನೋದದ ಮಾತುಗಳನ್ನು ಜೊಡಿಸಿ ಸದನವನ್ನು ನಗೆಗಡಲಲ್ಲಿ ತೇಲಿಸುತ್ತಿದ್ದರು. ಅವರ ಮಾತುಗಳಲ್ಲಿ ಸ್ವ ಅನುಭವದ ವಿಶಾದದ ಛಾಯೆಯನ್ನು ಕಾಣಬಹುದಾಗಿತ್ತು 1989 ರಲ್ಲಿಆಯವ್ಯಯದ ಚರ್ಚೆ ನಡೆಯುತ್ತಿತ್ತು ಆ ಚರ್ಚೆಯಲ್ಲಿ ಅವರು ಹೇಳಿದ ಒಂದು ಮಾತಿನ ಭಾಗ ಹೀಗಿದೆ.

"ಇನ್ನು ವೆಲ್‌ಫೇರ್ ಮೇಷರ್ಸ್‌ನಲ್ಲಿ ಸಬ್ಸಿಡೈಸ್ಡ್" ರೈಸೆಗೆ 37.73 ಕೋಟಿ ರೂಪಾಯಿಗಲನ್ನು 89 -90 ನೇ ಸಾಲಿಗೆ ಕೊಟ್ಟಿದ್ದೇವೆ ವಿಡೋ ಪೆನ್‌ಷನ್‌ಗೆ 27 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಓಲ್ಡ್ ಏಜ್ ಪೆನ್‌ಷನ್‌ಗೆ 37 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿಕೊಂಡಿದ್ದೀರಿ. ಇದೇ ರೀತಿ ಅಂಗವಿಕಲರಿಗೆ 14 ಕೋಟಿ ಕೊಟ್ಟಿದ್ದೇನೆ. ಎಂದು ಹೇಳಿದ್ದೀರಿ ಇದೆಲ್ಲಾ ಕೊಡಬೇಕಾದದ್ದು, ಆದ್ದರಿಂದ

ಕೊಟ್ಟಿದ್ದೀರಿ ಆದರೆ ನೀವು ಮೊದಲು ಮಾಡಿರತಕ್ಕ ಯೋಜನೆ ಬಗ್ಗೆ ಈ ಮನೆಯಲ್ಲಿ ಬಹಳಷ್ಟು ಸಾರಿ ಹೇಳಿದ್ದೀರಿ. ಗರ್ಭಿಣಿಯರಿಗೆ ಹಣ ಕೊಡತಕ್ಕ ವಿಚಾರದಲ್ಲಿ ಮಾನ್ಯ ಲೀಲಾದೇವಿ ಆರ್. ಪ್ರಸಾದ್‌ರವರೇ ತಮ್ಮ ಸ್ಕೀಂ ಎಲ್ಲಿ ಹೋಯಿತು ಅನುಭವದ ಬಗ್ಗೆ ಬಹಳ ವಾದ ಮಾಡಿದರು. ಹಾಗಾದರೆ ಗರ್ಭಿಣಿಯರಿಗೆ ಹಣ ಕೊಡುವ ನಿಮ್ಮ ಸ್ಕೀಂ ಎಲ್ಲಿ ಹೋಯಿತು. ಕೆಲವರಿಗೆ ಅನುಭವ ಇಲ್ಲ. ಇನ್ನೂ ಕೆಲವರಿಗೆ ಅನುಭವ ಇರಬಹುದು ಮಾನ್ಯ ಸಿಂಧ್ಯರವರಿಗೆ ಗರ್ಭಿಣಿಯರ ಬಗ್ಗೆ ಅನುಭವ ಇದೆಯೇ ಎಂದರೆ ಹೇಗೆ ಇರುವುದಕ್ಕೆ ಸಾಧ್ಯ? ಸಾಮಾಜಿಕವಾಗಿ ಇದು ಗೊತ್ತಾಗಬೇಕು ಆದರೆ ಇದರಲ್ಲಿ ಅನುಭವ ಇರಲಿಲ್ಲ. ಆದ್ದರಿಂದ ಮಾಡಲಿಲ್ಲ ಎಂದು ಹೇಳುವುದು ಸರಿಯಲ್ಲ.

ಅವರ ಈ ಮಾತಿನಲ್ಲಿ ಅವರು ಸಂತಾನ ಭಾಗ್ಯ ಪಡೆಯದಿದ್ದದರ ನೋವಿನ ಎಳೆ ಸಹ ಇದೆ.[7]

1989ರ ಆಯವ್ಯಯ ಚರ್ಚೆಯಲ್ಲಿ ಅವರು ಮೇಲಿನಂತೆ ವಾದಿ ಮಂಡಿಸುದನ್ನು ನೋಡಿದರೆ ಆಗ ಮಂತ್ರಿಗಳಾಗಿದ್ದ ಲೀಲಾದೇವಿ ಆರ್. ಪ್ರಸಾದ್ ಹಾಗೂ ಪಿ.ಜಿ.ಆರ್. ಸಿಂಧ್ಯರವರು ಮಾತನಾಡದೆ ಮೌನ ವಹಿಸಬೇಕಾಯಿತು. ಅಮ್ಮನವರು ವಿರೋಧ ಪಕ್ಷದ ನಾಯಕಿಯಾಗಿ ಮಂಡಿಸುತ್ತಿದ್ದ ವಾದಗಳಿಗೆ ಆಳುವ ಪಕ್ಷದವರು ಹಾಗೂ ವಿರೋಧ ಪಕ್ಷದವರು ತಲೆ ದೂಗುತ್ತಿದ್ದರು. ಹೀಗೆ ಅಮ್ಮನವರು ವಿರೋಧ ಪಕ್ಷದ ನಾಯಕಿಯಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಒಬ್ಬ ಮಹಿಳೆ ರಾಜಕೀಯ ಜೀವನದಲ್ಲಿ ವಿರೋಧ ಪಕ,ದ ನಾಯಕಿಯಾಗಿ ಕಾರ್ಯ ನಿರ್ವಹಿಸಬೇಕಾದರೆ ಅವರು ಸಮರ್ಥಳಿರಬೇಕು. ಅಮ್ಮನವರ ಅನುಭವ ಅಪಾರವಾದುದು. ತಮ್ಮ ಸ್ವಂತ ಅನುಭವದ ನೆಲಗಟ್ಟಿನ ಮೇಲೆ ರಾಜಕೀಯ ಮಾಡುತ್ತಿದ್ದ ಅಮ್ಮನವರಿಗೆ ಅನೇಕ ಪ್ರಮುಖ ಸಾಧನಗಳು ತಾವಾಗಿಯೇ ಒಲಿದು ಬರುತ್ತಿದ್ದವು. ಅಂಥೇಯೇಕ್ಷೆ ಎಲ್ಲರ ಮೆಚ್ಚುಗೆಗೂ ಪಾತ್ರರಾಗಿದ್ದ ಅಮ್ಮನವರಿಗೆ ವಿರೋಧ ಪಕ್ಷದ ನಾಯಕಿ ಸ್ಥಾನ ಲಭಿಸಿದುದು ಸಂತೋಷ ಸಂಗತಿ. ವಿರೋಧ ಪಕ್ಷದಲ್ಲಿ ಇದ್ದು ಜನತಾ ಸರ್ಕಾರದ ವೈಫಲ್ಯಗಳನ್ನು ಒಂದೊಂದಾಗಿ ಮೇಲೆತ್ತಿ ತೋರಿಸಿ ಆ ಸರ್ಕಾರದ ದಿಗ್ಗಜರನ್ನು ಚಿಂತೆಗೆ ಇಡು ಮಾಡುತ್ತಿದ್ದರು. ವಿರೋಧ ಪಕ್ಷದ ನಾಯಕಿಯ ಸ್ಥಾನ ಒಂದು ಮುಳ್ಳಿಯ ಹಾಸಿಗೆ ಇದ್ದಂತೆ ಅಂಥಹ ಕ್ಷೇತ್ರದಲ್ಲೇ ಹೋರಾಟ ಮಾಡಿದ ಅಮ್ಮನವರು ತನ್ನ ಕೈಯಲ್ಲಿ ಸರ್ಕಾರದ ಚುಕ್ಕಾಣಿ ಇಲ್ಲದಿದ್ದರೂ ಸರ್ಕಾರದ ಚುಕ್ಕಾಣಿಯನ್ನು ಹಿಡಿದಿದ್ದರವರಿಗೆ ತಮ್ಮ ಕೈಯಲ್ಲಿದ್ದ ಚಾಟಿಯಿಂದ ಬಿಡಿದೆಬ್ಬಿಸುತ್ತಿದ್ದರು. ಅನೇಕ ಸಂಧರ್ಭದಲ್ಲಿ ಸರ್ಕಾರ ನಡೆಸುತ್ತಿದ್ದ ಮಂತ್ರಿ ಮಹೋದೆಯರು ಅಮ್ಮನವರ ಮಾತಿನಿಂದ ತಮ್ಮ ಕಾರ್ಯ ವೈಖರಿಗೆ ಚ್ಯುತಿ ಬರಬಹುದೇನೋ ಎಂಬ ಯೋಚನೆಯಲ್ಲಿ ಇರುತ್ತಿದ್ದರು. ಒಟ್ಟಿನಲ್ಲಿ ಅಮ್ಮನವರು ವಿರೋಧ ಪಕ್ಷದ ನಾಯಕಿಯಾಗಿ ಕಾರ್ಯ ನಿರ್ವಹಿಸಿ ಕೀರ್ತಿ ಪಡೆದಿದ್ದಾರೆ.

3.4 ಮಂತ್ರಿಯಾಗಿ

ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ವಿಧಾನ ಸಭೆಯ ಸದಸ್ಯರು ವಿರೋಧ ಪಕ್ಷದ ನಾಯಕಿಯಾಗಿ, ವಿಧಾನ ಸಭೆಯ ಅಧ್ಯಕ್ಷೆಣಿಯಾಗಿ ಅಪಾರವಾದ ಜ್ಞಾನವನ್ನು ಸಂಪಾದಿಸಿದರು. ಇಷ್ಟೆಲ್ಲಾ

ಕೀರ್ತಿಗಳಿದ್ದರೂ ಅಮ್ಮನವರು ಮಂತ್ರಿಯಾಗುವ ಭಾಗ್ಯ ಕೂಡಿ ಬಂದಿರಲಿಲ್ಲ. ಗುಂಡ್ಲುಪೇಟೆ ಕ್ಷೇತ್ರದ ಜನತೆ ಚುನಾವಣೆ ಬಂದಾಗಲೆಲ್ಲ. ಅಮ್ಮನವರಿಗೆ ಬೆಂಬಲ ವ್ಯಕ್ತಪಡಿಸಿ ಗೆಲ್ಲಿಸುತ್ತಿದ್ದರು. ಅಮ್ಮನವರು ಈ ಸಲ ಚುನಾವಣೆಯಲ್ಲಿ ಜಯಭೇರಿ ಭಾರಿಸಿದರೆ ಮಂತ್ರಿಯಾಗುತ್ತಾರೆ ಎಂದು ಖುಷಿ ಪಡುತ್ತಿದ್ದರು. ಅದು ಬಹಳ ಕಾಲದವರೆಗೆ ಮುಂದುವರೆದಿತ್ತು. ಸರ್ಕಾರ ರಚನೆಯಾದಾಗಲೆಲ್ಲಾ ಅಮ್ಮನವರಿಗೆ ಮಂತ್ರಿ ಪದವಿ ಕೇವಲ ಕನಸಿನ ಮಾತಾಗಿಯೇ ಇತ್ತು. ಶ್ರೀ ಎಸ್. ಬಂಗಾರಪ್ಪನವರು ಕರ್ನಾಟಕದ ಮುಖ್ಯ ಮಂತ್ರಿಯಾದಾಗ 1992 ರಲ್ಲಿ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯಾಗಿ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರನ್ನು ಮಾಡಿಯೇ ಬಿಟ್ಟರು. ಒಬ್ಬ ಮಹಿಳೆಯಾಗಿ ತನ್ನ ಮಗುವನ್ನು ಹೇಗೆ ಹಾರೈಕೆ ಮಾಡಬೇಕು ಎಂಬುದನ್ನು ಅಮ್ಮನವರು ಅರಿತಿದ್ದರು. ಈ ಹಿನ್ನೆಲೆಯಲ್ಲಿ ಅಮ್ಮನವರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯನ್ನು ಕೊಟ್ಟರೆ ಸಾರ್ವಜನಿಕರನ್ನು ಉತ್ತಮವಾಗಿ ಹಾರೈಕೆ ಮಾಡಬಲ್ಲರು ಎಂಬುದನ್ನು ಅರಿತ ಬಂಗಾರಪ್ಪನವರು ಅಮ್ಮನವರಿಗೆ ಈ ಖಾತೆಯನ್ನು ವಹಿಸಿಯೇ ಬಿಟ್ಟರು. ಅಮ್ಮನವರು ತಮಗೆ ದೊರೆತ ಖಾತೆಯನ್ನು ಕೀಳಾಗಿ ಕಾಣಲಿಲ್ಲ. ಛಲದಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯನ್ನು ಹೇಗೆ ನಿರ್ವಹಿಸಬೇಕೆಂಬ ಚಿಂತೆಯಲ್ಲಿ ತೊಡಗಿದರು. ಸಂಬಂಧಿಸಿದ ಇಲಾಖೆಯ ಅಧಿಕಾರಿಗಳನ್ನು ಕರೆಸಿ, ಕರ್ನಾಟಕದ ಯಾವ ಯಾವ ಮೂಲೆಗಳಲ್ಲಿ ಆಸ್ಪತ್ರೆಗಳಿಲ್ಲವೋ ಅಲ್ಲಿ ಹೆಚ್ಚು ಗಮನ ಹರಿಸಿ ಜನರ ಆರೋಗ್ಯ ಸುಧಾರಿಸಲು ಶ್ರಮಿಸಬೇಕೆಂದು ಸೂಚನೆ ನೀಡಿದ್ದರು. ಅಂತೆಯೇ ಅಮ್ಮನವರಿಗೆ ಇಲಾಖೆಯ ಎಲ್ಲಾ ಅಧಿಕಾರಿಗಳು ಬೇಕಾದ ಮಾಹಿತಿಯನ್ನು ಒದಗಿಸಿ ಕೊಡುತ್ತಿದ್ದರು. ತಾನೊಬ್ಬ ಮಹಿಳೆ ಎಂದು ಅಮ್ಮನವರು ಕೈ ಕಟ್ಟಿ ಕೂರಲಿಲ್ಲ. ಹಿಂದಿನ ಸರ್ಕಾರಗಳ ಅನೇಕ ಮಂತ್ರಿ ಮಹೋದಯರು ಕುಟುಂಬ ಕಲ್ಯಾಣ ಇಲಾಖೆಯ ಕಡೆಗೆ ಹೆಚ್ಚು ಒತ್ತು ನೀಡಿರಲಿಲ್ಲ. ಆದರೆ ಅಮ್ಮನವರು ಅಧಿಕಾರಿಗಳ ಸಹಾಯದಿಂದ ಸಾಕಷ್ಟು ಪ್ರಗತಿ ಸಾಧಿಸಲು ಟೊಂಕಕಟ್ಟಿ ನಿಂತರು. ದೂರದ ಹಳ್ಳಿಗಳಲ್ಲಿ ಎಲ್ಲಿ ಆಸ್ಪತ್ರೆಗಳಿಲ್ಲವೋ ಯಾವ ಹಳ್ಳಿಗಳು ಹಿಂದೆ ಬಿದ್ದಿದಿವೋ ಅಂತಹ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ಆರೋಗ್ಯ ಸೇವಾ ಕಾರ್ಯಾಲಯಗಳನ್ನು ಸ್ಥಾಪಿಸಿದರು. ಇಂಥಹ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪಿಸಲ್ಪಟ್ಟು ಜನತೆಯ ಆರೋಗ್ಯ ಸುಧಾರಣೆಯಾಯಿತು ತಮ್ಮ ಊರಿಗೆ ವೈದ್ಯಕೀಯ ಸೌಲಭ್ಯಗಳು ಬೇಕೆಂದು ಯಾರೇ ಬರಲಿ ಅವರನ್ನು ನಗು ಮುಖದಿಂದ ಸ್ವಾಗತಿಸಿ ಬೇಕಾದ ಕೆಲಸ ಕಾರ್ಯಗಳನ್ನು ಮಾಡಿಕೊಡುವುದು ಅವರಿಗೆ ಮುದ ನೀಡುತ್ತಿತ್ತು. ಇಂಥಹ ಅದೆಷ್ಟೋ ಕಾರ್ಯಗಳನ್ನು ಮಾಡಿಕೊಟ್ಟಿದ್ದಾರೋ ಅದು ಕರ್ನಾಟಕದ ಜನತೆಗೆ ಗೊತ್ತು ವೈದ್ಯಕೀಯ ಕ್ಷೇತ್ರದಲ್ಲಿ ಅಸಮರ್ಥರಾದ ವ್ಯಕ್ತಿಗಳನ್ನು ಅವರು ಎಂದೂ ರಕ್ಷಿಸುತ್ತಿರಲಿಲ್ಲ. ಕಠಿಣ ಕ್ರಮಗಳನ್ನು ಕೈಗೊಂಡು ಅವರಿಗೆ ಎಚ್ಚರಿಕೆಯ ಸಂದೇಶಗಳನ್ನು ರವಾನಿಸುತ್ತಿದ್ದರು. ದಕ್ಷ ಅಧಿಕಾರಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಪ್ರೋತ್ಸಾಹ ಕೊಡುತ್ತಿದುದ್ದು ಅವರ ದೊಡ್ಡ ಗುಣ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಭ್ರಷ್ಟರಿಗೆ ದುಸ್ವಪ್ನರಾಗಿ ಕಾಣುತ್ತಿದ್ದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯವ್ಯಯದಲ್ಲಿ ನಿಗಧಿ ಪಡಿಸಲಾಗುತ್ತಿದ್ದ ಹಣವನ್ನೆಲ್ಲಾ ಸದ್ಬಳಕೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ತಮ್ಮ ಕ್ಷೇತ್ರದ ಅನೇಕ

ಹಳ್ಳಿಗಳಿಗೆ ವೈದ್ಯಕೀಯ ಸೇವೆಗಳನ್ನು ವಿಸ್ತರಿಸಿದ ಕೀರ್ತಿ ಅಮ್ಮನವರದಾಗಿದೆ. ಅಮ್ಮನವರು ತಾರತಮ್ಯ ಭಾವನೆ ಹೊಂದದೆ ಎಲ್ಲಾ ಪಕ್ಷದ ರಾಜಕಾರಣಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರು ಕೇಳಿದ ಕಡೆಗೆಲ್ಲ ಕೇಳಿದ ಸೌಲಭ್ಯಗಳನ್ನೆಲ್ಲಾ ಒದಗಿಸಿಕೊಡುತ್ತಿದ್ದರು. ಒಬ್ಬ ಮಹಿಳೆಯಾಗಿ ಗುರುತರವಾದ ಖಾತೆಯನ್ನು ಹೊಂದಿ ಅಪಾರವಾದ ಕೀರ್ತಿಗಳಿಸಿದ್ದು, ನಾಡಿನ ಜನತೆಯ ಭಾಗ್ಯವೆಂದೇ ಭಾವಿಸಬೇಕು.

ಅಡಿ ಟಿಪ್ಪಣಿಗಳು

1. ಮಾಹಿತಿ ಸಂಗ್ರಹಣೆ : ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಸಮಕಾಲೀನವರಾದ ಶ್ರೀ ಪಟೇಲ್ ಜೆ.ಸಿ. ಗುರುಮಲ್ಲಪ್ಪನವರು ಕಬ್ಬಹಳ್ಳಿ
2. ಮಾಹಿತಿ ಸಂಗ್ರಹಣೆ : ಶ್ರೀ ಚಿನ್ನಸ್ವಾಮಿಯರು ನಿವೃತ್ತ ಶಿಕ್ಷಕರು ಊರ್ದಹಳ್ಳಿ
3. "A Karnataka State Legislative Assembly Debates" ಪುಟಸಂಖ್ಯೆ 33
4. ಗುಂಡ್ಲುಪೇಟೆ ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ಪಳನಿಸ್ವಾಮಿ, ಪುಟಸಂಖ್ಯೆ 319
5. ಹೊನ್ನೆಹೊಳೆ - ಪ್ರೊ. ಮಲೆಯೂರು ಗುರುಸ್ವಾಮಿ - 453
6. "ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆ" ಪ್ರೊ. ಎನ್.ಬಿ. ಪಾಂಗಣ್ಣಾಯ - ಪುಟಸಂಖ್ಯೆ 14
7. "ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲೀಕೆ" ಪ್ರೊ. ಎನ್.ಬಿ. ಪಾಂಗಣ್ಣಾಯ - ಪುಟಸಂಖ್ಯೆ 15

ಅಧ್ಯಾಯ - ೪

ಸಮಾಜ ಸೇವೆ ಹಾಗೂ ಹೋರಾಟಗಳು

ಅಧ್ಯಾಯ -4
ಸಮಾಜ ಸೇವೆ ಹಾಗೂ ಹೋರಾಟಗಳು

4.1. ಸಾರ್ವಜನಿಕ ಸೇವೆಗಳು

ಶ್ರೀಮತಿ ಕೆ.ಎಸ್. ನಾಗರತ್ನಮ್ಮರವರ ಪೂರ್ವಜರು ದಾನಿಗಳು ಎಂಬುದನ್ನು ಈಗಾಗಲೇ ತಿಳಿದಿಕೊಂಡಿದ್ದೇವೆ. ಅವರ ಮಾವಂದಿರಾದ ಚನ್ನಬಸಪ್ಪನವರು ಗುಂಡ್ಲುಪೇಟೆ ಪಟ್ಟಣದ ಗುಂಡ್ಲುಪೇಟೆ ಕೇರಳ ಹೆದ್ದಾರಿಯಲ್ಲಿ ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಗೆ ಸೇರಿದಂತೆ ಒಂದು ವಿಶಾಲವಾದ ಪ್ರದೇಶವನ್ನು ಆಸ್ಪತ್ರೆ ಉದ್ದೇಶಕ್ಕಾಗಿ ಮುಡುಪಾಗಿಟ್ಟಿದ್ದರು. ಈ ಪ್ರದೇಶವು ಆಸ್ಪತ್ರೆಯ ಕಟ್ಟಡಕ್ಕೆ ಯೋಗ್ಯವಾಗಿದ್ದರೂ ಕೆಲವು ತಂಟೆ ತಕಾರರುಗಳಿಂದ ಕೂಡಿದ ಗೂಡಿನ ಗೊಂದಲವಾಗಿತ್ತು. ಅನೇಕ ಹಿರಿಯರು ಎಲ್ಲಾ ಸಮಸ್ಯೆಗಳನ್ನು ಬಗ್ಗೆ ಹರಿಸಿ ಆ ಜಾಗದ ಹಕ್ಕು ಕಬ್ಬಹಳ್ಳಿ ಮನೆತನಕ್ಕೆ ಸೇರಿದೆ ಎಂದು ತೀರ್ಮಾನಿಸಿದರು. ಪೂರ್ವಜರು ಆ ನಿವೇಶನದಲ್ಲಿ ಆಸ್ಪತ್ರೆ ಕಟ್ಟಡ ಪ್ರಾರಂಭಿಸಲು ಆಗಿರಲಿಲ್ಲ. ಅವರು ನಿಧನರಾದ ಮೇಲೆ ಆ ಸ್ಥಳದಲ್ಲಿ ಸುಸರ್ಜಿತವಾದ ಆಸ್ಪತ್ರೆ ನಿರ್ಮಿಸಬೇಕೆಂಬ ಬಯಕೆ ಅಮ್ಮನವರದಾಗಿತ್ತು. ದಿನಾಂಕ 14-07-1975 ರಂದು ನಿವೇಶನದಲ್ಲಿ ಆಸ್ಪತ್ರೆಯ ಕಟ್ಟಡ ಶಂಕುಸ್ಥಾಪನೆ ನೆರವೇರಿತು. ಭಾರತ ಸರ್ಕಾರ ಉಪರಾಷ್ಟ್ರಪತಿಗಳಾಗಿದ ಶ್ರೀ ಬಸಪ್ಪ ದಾನಪ್ಪ ಜತ್ತಿಯವರಿಂದ ಶಂಕುಸ್ಥಾಪನೆ ನೆರವೇರಿತು. ಕರ್ನಾಟಕ ಸರ್ಕಾರದಲ್ಲಿ ಆರೋಗ್ಯ ಸಚಿವರಾಗಿದ್ದ ಎಚ್. ಸಿದ್ದವೀರಪ್ಪನವರು ಸಭೆಯ ಅಧ್ಯಕ್ಷತೆವಹಿಸಿದರು. ಶ್ರೀಮತಿ ಕೆ.ಎಸ್. ನಾಗರತ್ನಮ್ಮರವರು ಗುಂಡ್ಲುಪೇಟೆ ಕ್ಷೇತ್ರದ ವಿಧಾನ ಸಭೆಯ ಸದಸ್ಯರಾಗಿದ್ದರು. ಆ ಸಂದರ್ಭದಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿದರು. ಹೀಗೆ ಕೆ.ಎಸ್. ನಾಗರತ್ನಮ್ಮನವರು ಗುಂಡ್ಲುಪೇಟೆ ತಾಲ್ಲೂಕಿನ ಜನತೆಯ ಆರೋಗ್ಯ ಉತ್ತಮಪಡಿಸುವ ದೃಷ್ಟಿಯಿಂದ ಸುಸಜ್ಜಿತವಾದ ಆಸ್ಪತ್ರೆಯ ನಿರ್ಮಾಣಕ್ಕೆ ಕೈ ಹಾಕಿದರು ಸಂತೋಷದ ಸಂಗತಿಯೇ ಸರಿ. ಕಟ್ಟಡ ಕಾಮಗಾರಿಕೆಗೆ ಅನುಧಾನವನ್ನು ಒದಗಿಸಿಕೊಡಲು ಅಮ್ಮನವರು ಹೋರಾಟ ನಡೆಸಿ ಪೂರ್ಣ ಮೊತ್ತವನ್ನು ಒದಗಿಸಿ ಕೊಟ್ಟರು. ಇದರಿಂದಾಗಿ ಗುಂಡ್ಲುಪೇಟೆ ಪಟ್ಟಣದಲ್ಲಿ ಒಂದು ಭವ್ಯವಾದ ಸಾರ್ವಜನಿಕ ಆಸ್ಪತ್ರೆ ನಿರ್ಮಾಣವಾಗುವಂತಾಯಿತು. ಈ ಆಸ್ಪತ್ರೆಯು ಪೂರ್ಣ ಪ್ರಮಾಣದಲ್ಲಿ ಜನತೆಯ ಸೇವೆಗೆ ಸಿದ್ದವಾಗಲು ಸುಮಾರು 10 ವರ್ಷಗಳ ಸಮಯಬೇಕಾಯಿತು. ಕಟ್ಟಡದ ಕೆಲಸವು 1985 ನೇ ಇಸವಿಯ ವೇಳೆಗೆ ಪೂರ್ಣಗೊಂಡಿತು. ದಿನಾಂಕ 16-12-1985 ರಲ್ಲಿ ಈ ಆಸ್ಪತ್ರೆಯ ಉದ್ಘಾಟನೆಯೊಯಿತು. ಭಾರತದ ಉಪರಾಷ್ಟ್ರಪತಿಗಳಾಗಿದ್ದ ಆರ್. ವೆಂಕಟರಾಮನ್ ರವರು ಆಸ್ಪತ್ರೆಯ ಉದ್ಘಾಟನೆ ನೆರವೇರಿಸಿದರು. ಕರ್ನಾಟಕ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿದ್ದ ಡಾ. ಎಚ್.ಎಲ್. ತಿಮ್ಮೇಗೌಡರವರು ಅಂದಿನ ಸಭೆಯ ಅಧ್ಯಕ್ಷತೆವಹಿಸಿದರು.[1] ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯಿತ್ ರಾಜ್ಯ ಸಚಿವರಾಗಿದ್ದ ದಿವಂಗತ ಶ್ರೀ ಅಬ್ದುಲ್ ನಜೀರ್ ಸಾಬ್‌ರವರು, ಅಂದಿನ ಲೋಕ ಸಭೆ ಸದಸ್ಯರಾಗಿದ್ದ ವಿ. ಶ್ರೀನಿವಾಸ್ ಪ್ರಸಾದ್‌ರವರು ಹೀಗೆ ಅನೇಕರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಭೆಯಲ್ಲಿ ಭಾಗವಹಿಸಿದ್ದ ಅನೇಕ ಗಣ್ಯರು ಮನುಷ್ಯನಿಗೆ ಹಣಕ್ಕಿಂತ ಆರೋಗ್ಯ ಮುಖ್ಯ

ಎಂದು ಒತ್ತಿ ಹೇಳಿದರು. ಕಬ್ಬಹಳ್ಳಿ ಮನೆತನದ ದಾನಿಗಳು ಉದ್ದೇಶವು ಇದೇ ಆಗಿತ್ತು. ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಗುಂಡ್ಲುಪೇಟೆ ಕ್ಷೇತ್ರದ ವಿಧಾನ ಸಭೆಯ ಸದಸ್ಯರಾಗಿದ್ದ ಆ ಸಭೆಯಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿದರು. ಹೀಗೆ ಗುಂಡ್ಲುಪೇಟೆ ಪಟ್ಟಣದಲ್ಲಿ ಭವ್ಯವಾದ ಆಸ್ಪತ್ರೆಯ ನಿರ್ಮಾಣಕ್ಕೆ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಹೋರಾಟ ಮಾಡಿ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಇಂತಾಹ ಭವ್ಯವಾದ ಆಸ್ಪತ್ರೆಗೆ ಕಬ್ಬಹಳ್ಳಿ ಸಾಹುಕಾರ್ ದಿ. ಕೆ. ಎಸ್. ಸುಬ್ಬಣ್ಣನವರ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಎಂದು ಈ ಮಹಾದಾನಿಯ ಹೆಸರು ಇಡಲಾಯಿತು. ಇಂದು ಈ ಆಸ್ಪತ್ರೆಯು ನಾಗರತ್ನಮ್ಮನವರ ಮರಣಾ ನಂತರ ಕಬ್ಬಹಳ್ಳಿ ಸಾಹುಕಾರು ಕೆ. ಸಿ. ಸುಬ್ಬಣ್ಣ ಮತ್ತು ಕೆ. ಎಸ್. ನಾಗರತ್ನಮ್ಮ ಸ್ಮಾರಕ ಸಾರ್ವಜನಿಕ ಆಸ್ಪತ್ರೆ ಎಂದು ಕಂಗೊಳಿಸುತ್ತಿದೆ. ಹೀಗೆ ಅಮ್ಮನವರು ಕಬ್ಬಹಳ್ಳಿ ಗ್ರಾಮದಲ್ಲಿ ಆಸ್ಪತ್ರೆಯ ನವೀಕರಣ ಕೆಲಸ ಮಾಡಿಸುವುದರ ಜೊತೆಗೆ ಅದನ್ನು ಮೇಲ್ದರ್ಜೆಗೆ ಏರಿಸುವ ದಿಕ್ಕಿನಲ್ಲಿ

ಸಾಕಷ್ಟು ಹೋರಾಟವನ್ನೇ ನಡೆಸಬೇಕಾಯಿತು. ಅಂದು ಚಿಕ್ಕದಾಗಿದ್ದ ಪ್ರಾಥಮಿಕ ಆರೋಗ್ಯ ಕೇಂದ್ರ ನಾಗರತ್ನಮ್ಮನವರ ಜೀವಿತ ಕಾಲದಲ್ಲಿ ಮೇಲ್ದರ್ಜೆಗೆ ಏರಿಸಲ್ಪಟ್ಟಿದ್ದು, ಒಳರೋಗಿಗಳಿಗೂ ಹೊರ ರೋಗಿಗಳಿಗೂ ಸೌಲಭ್ಯ ಕಲ್ಪಿಸಿಕೊಡುತ್ತಿದೆ. ಹೀಗೆ ಅಮ್ಮನವರ ಪರಿಶ್ರಮದಿಂದಾಗಿ ಗುಂಡ್ಲುಪೇಟೆ ಮತ್ತು ಕಬ್ಬಹಳ್ಳಿ ಗ್ರಾಮಗಳಲ್ಲಿ ಇರುವ ಆಸ್ಪತ್ರೆಗಳು ಸಾರ್ವಜನಿಕರಿಗೆ ಅನೇಕ ರೀತಿಯ ಸೇವೆ ಒದಗಿಸುತ್ತಿವೆ. ಅಮ್ಮನವರು ಜನತೆಯ ಆರೋಗ್ಯ ಸುಧಾರಣೆಯ ಕಡೆಗೆ ಗಮನ ಕೊಡುವುದರ ಜೊತೆಗೆ ಪಶು ಸಂಪತ್ತಿನ ಉದ್ಧಾರಕ್ಕೂ ಹೆಚ್ಚು ಒತ್ತು ನೀಡುತ್ತಿದ್ದರು. ಅನೇಕ ಹಳ್ಳಿಗಳಲ್ಲಿ ತಮ್ಮ ಕ್ಷೇತ್ರ ವ್ಯಾಪ್ತಿ ಅವಶ್ಯಕತೆವಿದ್ದೆಡೆ ಪಶುವೈದ್ಯ ಆಸ್ಪತ್ರೆಗಳನ್ನು ಸ್ಥಾಪಿಸಲು ಕ್ರಮ ಕೈಗೊಂಡಿದ್ದರು. ಕೆ.ಎಸ್. ನಾಗರತ್ನಮ್ಮನವರು ತಮ್ಮ ಕಾರ್ಯ ಕ್ಷೇತ್ರವನ್ನು ಕೇವಲ ಆಸ್ಪತ್ರೆ ನಿರ್ಮಾಣಕ್ಕಾಗಿ ಸೀಮಿತಗೊಳಿಸಲಿಲ್ಲ. ಸಂದರ್ಭ ಬಂದಾಗಲೆಲ್ಲಾ ಸರ್ಕಾರಕ್ಕೆ ಬೇಕಾದ ಕಾರ್ಯಾಲಯಗಳನ್ನು ಸ್ಥಾಪಿಸಲು ಕ್ರಮ ಕೈಗೊಂಡಿದ್ದರು. ಗುಂಡ್ಲುಪೇಟೆ ಪಟ್ಟಣದಲ್ಲಿ ಮಿನಿ ವಿಧಾನಸೌಧ ನಿರ್ಮಾಣಕ್ಕೆ ಅಗತ್ಯ ಧನ ಸಹಾಯ ಪಡೆಲು ಹೋರಾಟ ನಡೆಸಿದ್ದರು. ಅವರ ಅವಿರತ ಪ್ರಯತ್ನದ ಹೋರಾಟದ ಫಲವಾಗಿ ಗುಂಡ್ಲುಪೇಟೆ ಪಟ್ಟಣದಲ್ಲಿ ತಾಲ್ಲೂಕು ಕಛೇರಿಗೆ ಸಂಬಂಧಿಸಿದಂತೆ ಒಂದು ಮಿನಿ ವಿಧಾನ ಸೌಧವನ್ನೇ ನಿರ್ಮಿಸಿರುವ ಸಂತೋಷದ ಸಂಗತಿ.[2]

ಅಮ್ಮನವರು ಸಾರ್ವಜನಿಕ ಸಂಪರ್ಕಕ್ಕೂ ಹೆಚ್ಚು ಒತ್ತು ನೀಡಿದ್ದರು. ಯಾವ ಯಾವ ಹಳ್ಳಿಗಳಿಗೆ ರಸ್ತೆಗಳು ಆಗಬೇಕು ಅಲ್ಲಿಗೆ ಕಚ್ಚಾ ರಸ್ತೆಯನ್ನಾಗಿ ಅಥವಾ ಡಾಂಬರು ರಸ್ತೆಯನ್ನಾಗಲಿ ನಿರ್ಮಿಸಲು ರೂಪುರೇಷೆ ತಯಾರಿಸಿಕೊಂಡು ಹೋರಾಟ ಮಾಡುತ್ತಿದ್ದರು. ದಿವಂಗತ ಹೆಚ್.ಕೆ. ಶಿವರುದ್ರಪ್ಪನವರು ಕೆಲವು ಹಳ್ಳಿಗಳಿಗೆ ಮೂಲಭೂತ ಸೌಲಭ್ಯಗಳಾದ ರಸ್ತೆಗಳನ್ನು ಅವರು ವಿಧಾನ ಸಭಾ ಸದಸ್ಯರಾಗಿದ್ದಾಗ ನಿರ್ಮಿಸಿದ್ದರು. ಅಮ್ಮನವರು ಅಧಿಕಾರಕ್ಕೆ ಬಂದ ನಂತರ ಬೇರೆ ಬೇರೆ ಹಳ್ಳಿಗೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಭಾರಿ ಪ್ರಮಾಣದ ರಸ್ತೆ ಕಾಮಗಾರಿಗಳನ್ನು ಮಾಡಿಸಿದ್ದರು. ಇಂದು ಹೆಚ್ಚು ಕಡಿಮೆ ಗುಂಡ್ಲುಪೇಟೆ ತಾಲ್ಲೂಕಿನ ಬಹುತೇಕ ಹಳ್ಳಿಗಳು ಅಮ್ಮನವರ ಹೋರಾಟದ ಫಲವಾಗಿ ಡಾಂಬರು ರಸ್ತೆಗಳನ್ನು ಹೊಂದಿವೆ.

ಅಮ್ಮನವರು ಕೈಗಾರಿಕೆಳ ಸ್ಥಾಪನೆಗೂ ಹೋರಾಟ ನಡೆಸಿದ್ದರು ತಮ್ಮ ಕ್ಷೇತ್ರವಾದ ಗುಂಡ್ಲುಪೇಟೆಯಲ್ಲಿ 2-3 ಪ್ರಾಜೆಕ್ಟ್‌ಗಳನ್ನು ಕಟ್ಟಿದ್ದರೆ 15-20 ಸಾವಿರ ಎಕರೆ ನೀರಾವರಿಯಾಗುತ್ತದೆ ವ್ಯವಸಾಯದ ಕಸುಬನ್ನು ಅವಲಂಬಿಸಿರುವವರಿಗೆ ಇದರಿಂದ ತುಂಬಾ ಅನುಕೂಲವಾಗುತ್ತದೆ. ಕೆಲವರು ಸುಮಾರು 5-6 ತಿಂಗಳುಗಳ ಕಾಲ ಯಾವ ಉದ್ಯೋಗ ಇಲ್ಲದೆ ಇರುತ್ತಾರೋ ಅಂಥವರಿಗಾಗಿ ಗೃಹ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ತುಂಬಾ ಅನುಕೂಲವಾಗಿ ಅವರು ಜೀವನ ನಡೆಸಲು ಅನುಕೂಲವಾಗುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನ ಅನೇಕ ಬಗೆಯ ಬೆಳೆಯುಳ್ಳ ಮರ ಮತ್ತು ರತ್ನಗಳು ಸಿಗುತ್ತವೆ ಎಂದು ಕೇಳಿದ್ದೇನೆ ಇವುಗಳನ್ನು ಬಳಸಿಕೊಂಡು ಕೈಗಾರಿಕೆಗಳನ್ನು ಸ್ಥಾಪಿಸಿದರೆ ವಿವಿಧ ಬಗೆಯ ಕಚ್ಚಾ ಸರಕುಗಳು ದೊರಕುತ್ತವೆ. ಅವುಗಳನ್ನು ಬಳಸಿಕೊಂಡು ಕೈಗಾರಿಕೆಗಳ ಅಭಿವೃದ್ಧಿ ಸಾಧಿಸಬಹುದು. ಆದುದರಿಂದ ಗುಂಡ್ಲುಪೆಟೆ ಕಡೆ ಕೈಗಾರಿಕೆಗಳನ್ನು ಸ್ಥಾಪಿಸಿ ಎಂದು ವಿಧಾನ ಸಭೆಯಲ್ಲಿ ಹೋರಾಟ ನಡೆಸಿದರು. ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲ್ಲೂಕುಗಳಲ್ಲಿ ರೇಷ್ಮೆ ಬೆಳೆಯುವವರು ಹೆಚ್ಚಾಗಿದ್ದಾರೆ. ಅವರೆಲ್ಲರೂ ಬೇರೆ ಬೇರೆ ಜಾತಿ ತಳಿಯನ್ನು ಉತ್ಪಾದನೆ ಮಾಡುತ್ತಿದ್ದಾರೆ ಅದರ ಬಗ್ಗೆ ವಿಧಾನ ಸಭಾ ಸದಸ್ಯರಾದ ಎಂ.ಸಿ. ಬಸಪ್ಪನವರೂ ಸಹ ಮಾತನಾಡಿದ್ದಾರೆ. ಆದ್ದರಿಂದ ರೇಷ್ಮೆ ಉದ್ಯಮವನ್ನು ಅಭಿವೃದ್ಧಿ ಪಡಿಸಲು ಒಳ್ಳೆಯ ಹೈಬ್ರಿಡ್ ತಳಿಯ ಬಿತ್ತನೆಯನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಬೇಕು ರೇಷ್ಮೆ ಬೇಳೆ ಬೇಳೆಯಲು ಛಾಕಿ ಸೆಂಟರ್‌ಗಳನ್ನು ಪ್ರಾರಂಭಿಸಬೇಕು ಈ ಛಾಕಿ ಸೆಂಟರ್‌ಗಳಿಗೆ ಸುಮಾರು 10 ಎಕರೆ ಜಮೀನು ಕೊಟ್ಟು ಆ ಸೆಂಟರ್‌ಗಳನ್ನು ಮಾಡಲ್ ಕೇಂದ್ರಗಳನ್ನಾಗಿ ಮಾಡಬೇಕೆಂದು ಉತ್ಪಾದನೆ ಮಾಡಿದ ರೇಷ್ಮೆ ಗೂಡುಗಳಿಂದ ನೂಲು ತೆಗೆಯಲು ಚರಕ ಕೇಂದ್ರಗಳನ್ನು ಸ್ಥಾಪಿಸಿ ಹೆಣ್ಣು ಮಕ್ಕಳಿಗೆ ಹೆಚ್ಚು ಉದ್ಯೋಗ ಕಲ್ಪಿಸಬೇಕೆಂಬುದು ಅವರ ಹೋರಾಟವಾಗಿತ್ತು. ಜೊತೆಗೆ ರೇಷ್ಮೆ ಕ್ಷೇತ್ರದಲ್ಲಿ ಹೊಸ ಹೊಸ ತಂತ್ರಜ್ಞಾನವನ್ನು ಬಳಸಲು ಹೊರದೇಶದವರ ಸಹಾಯವನ್ನು ಪಡೆದುಕೊಂಡು ಆ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕೆಂದು ಹೋರಾಟ ಮಾಡಿದ್ದರು. ಹಳ್ಳಿಯಲ್ಲಿ ವಾಸಿಸುವ ಅನೇಕ ಬಡ ಹೆಣ್ಣು ಮಕ್ಕಳು ರೇಷ್ಮೆ ಉದ್ದಿಮೆಯಲ್ಲಿ ತೊಡಗಿದ್ದಾರೆ. ಅವರು ಜಮೀನುಗಳಲ್ಲಿ ಹಿಪ್ಪನೇರಳೆ ಸೊಪ್ಪು ಕೀಳುವ ಕೆಲಸ ಮಾಡುತ್ತಾರೆ. ಅವರಿಗೆ ದೊರಕುವ ಕೂಲಿ ತುಂಬಾ ಕಡಿಮೆ. ಹೆಣ್ಣು ಮಕ್ಕಳು ಕಷ್ಟಪಟ್ಟು ದುಡಿದರೂ ಅವರಿಗೆ ಕೈತುಂಬ ಹಣ ಸಿಕ್ಕುತ್ತಿಲ್ಲ. ಮಳೆಯನ್ನದೇ, ಬಿಸಿಲೆನ್ನದೆ ಅವರು ದುಡಿಯುತ್ತಾರೆ. ಅವರ ಭವಿಷ್ಯ ರೂಪಿಸಲು ಯೋಜನೆಯನ್ನು ಸಿದ್ಧಪಡಿಸಿ ಎಂದು ಆಗ್ರಹಪಡಿಸಿದ್ದರು. ಹೀಗೆ ರೇಷ್ಮೆ ಉದ್ದಿಮೆ ಬೆಳವಣಿಗೆಗೆ ಹೋರಾಟ ಮಾಡಿದ ಅಮ್ಮನವರು ತೆಂಗಿನ ನಾರಿನಿಂದ ಹಗ್ಗ ತಯಾರಿಸುವ ಕೈಗಾರಿಕೆಗಳ ಸ್ಥಾಪನೆ ಹೋರಾಟ ನಡೆಸಿರುವುದು ಗಮನಾರ್ಹ ಸಂಗತಿಯಾಗದೆ ಇಂದಿಗೂ ತಮ್ಮ ಸ್ವಂತ ಊರಾದ ಕಬ್ಬಹಳ್ಳಿ ಗ್ರಾಮದಲ್ಲಿ ತೆಂಗಿನ ನಾರಿನಿಂದ ಹಗ್ಗ ತಯಾರಿಸುವ ಹಾಗೂ ಅನೇಕ ಗೃಹ ಉಪಯೋಗಿ ವಸ್ತುಗಳನ್ನು ತಯಾರಿಸುವ ನಾರಿನ ಘಟಕವೊಂದು ಕೆಲಸ ನಿರ್ವಹಿಸುತ್ತಿದೆ. ಈ ಘಟಕವು ಅನೇಕ ಮಹಿಳೆಯರಿಗೆ ಉದ್ಯೋಗವನ್ನು ಒದಗಿಸಿಕೊಟ್ಟಿದೆ. ಈ ಘಟಕವು ಕಬ್ಬಹಳ್ಳಿ ಗ್ರಾಮದಲ್ಲಿ ಇನ್ನೂ ಕೆಲಸ ನಿರ್ವಹಿಸುತ್ತಿದೆ. ಸರ್ಕಾರದ ವತಿಯಿಂದ ಇಂಥಹ ನಾರಿನ ಕೈಗಾರಿಕೆಗಳನ್ನು ಸ್ಥಾಪಿಸುವುದರ ಜೊತೆಗೆ ಖಾಸಗಿ ವ್ಯಕ್ತಿಗಳು ನಾರಿನ

ಕೈಗಾರಿಕೆಗಳನ್ನು ಸ್ಥಾಪಿಸಿ ಅಮ್ಮನವರು ಪರವಾನಗಿ ಕೊಡಿಸಲು ಹೋರಾಟ ನಡೆಸಿರುವುದು ಸಂತಸದ ಸಂಗತಿಯಾಗಿದೆ. ಹೀಗೆ ಖಾಸಗಿ ಕ್ಷೇತ್ರಕ್ಕೆ ಅವರು ಪರವಾನಗಿ ಕೊಡಿಸಿರುವುದಕ್ಕೆ ಮೂಡಗೂರು ಗ್ರಾಮದಲ್ಲಿ ದಿವಂಗತ ಎಂ.ಪಿ. ವೃಷಬೇಂದ್ರಪ್ಪನವರ ತೆಂಗಿನ ನಾರಿನ ಒಂದು ಕೈಗಾರಿಕೆ ಪ್ರಮುಖ ಉದಾಹರಣೆಯಾಗಿದೆ. ಅಮ್ಮನವರು ಗುಂಡ್ಲುಪೇಟೆ ವ್ಯಾಪ್ತಿಯಲ್ಲಿರುವ ದೇವಸ್ಥಾನಗಳನ್ನು ಪ್ರೇಕ್ಷಣೀಯ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಹೋರಾಟ ನಡೆಸಿದ್ದಾರೆ. ಮುಜರಾಯಿ ಇಲಾಖೆಗೆ ಸೇರಿದ ತೆರಕಣಾಂಬಿ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಲು ಹೋರಾಡಿದ್ದಾರೆ. ಗುಂಡ್ಲುಪೇಟೆ ತಾಲ್ಲೂಕಿನ ಗೋಪಾಲಸ್ವಾಮಿ ಬೆಟ್ಟದಲ್ಲಿರುವ ದೇವಸ್ಥಾನ ಮತ್ತು ಜಕಣಾಚಾರಿ ಕಾಲದಲ್ಲಿ ಕಟ್ಟಿರುವ ದೇವಸ್ಥಾನ ಇನ್ನೂ ಅನೇಕ ದೇವಾಲಯಗಳ ಜೀರ್ಣೋದ್ಧಾರಕ್ಕೆ ಅವರು ಹೋರಾಟ ನಡೆಸಿದ್ದಾರೆ. ಇದರ ಪರಿಣಾಮವಾಗಿ ತಾಲೂಕಿನ ಅನೇಕ ದೇವಸ್ಥಾನಗಳ ಜೀರ್ಣೋದ್ಧಾರವೂ ಆಗಿದೆ ಹೀಗೆ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಸಾರ್ವಜನಿಕ ಸೇವೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅವುಗಳನ್ನು ಈಡೇರಿಸುವುದಕ್ಕಾಗಿ ಅವಿಶ್ರಾಂತವಾಗಿ ಹೋರಾಟ ಮಾಡಿರುವುದನ್ನು ಕಾಣಬಹುದಾಗಿದೆ.

ರೆವೆನ್ಯೂ ಡಿಮ್ಯಾಂಡ್ ಮೇಲೆ ಮಾತನಾಡುತ್ತಿರುವ ಸಂದರ್ಭದಲ್ಲಿ ನಾನು ನಾಲ್ಕು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ. ಈ ರೆವೆನ್ಯೂ ಡಿಮ್ಯಾಂಡ್ ಸಂಬಂಧದಲ್ಲಿ ಬೇಕಾದಷ್ಟು ವಿಷಯ ಹೇಳಬೇಕಾಗಿಲ್ಲ. ಕಾಲ ಕಡಿಮೆ ಇರುವುದರಿಂದ ಯಾವುದರ ಮೇಲೆ ಮಾತನಾಡಬೇಕು, ಯಾವುದನ್ನು ಬಿಡಬೇಕು ಎನ್ನುವುದು ತಿಳಿಯದಾಗಿದೆ. ಆದರೂ ಮುಖ್ಯವಾಗಿರುವ ವಿಚಾರಗಳಲ್ಲಿ ನಾಲ್ಕು ಮಾತುಗಳನ್ನಾಡುತ್ತೇನೆ.

ಈಗ ತಾನೇ ಶ್ರೀಮಾನ್ ಕೇಶವಮೂರ್ತಿಗಳು ಹೇಳಿದರು. ಪಟೇಲ್ ಶ್ಯಾನುಭೋಗರ ಗತಿ ಏನಾಗಿದೆ, ಅವರನ್ನು ಏನು ಮಾಡುತ್ತೀರಿ ಎಂದು. ನಮ್ಮ ಊರಿನಲ್ಲಿಯೂ ಕೆಲವು ಜನ ಪಟೇಲ್ ಶ್ಯಾನುಭೋಗರಿದ್ದಾರೆ. ನಿಮ್ಮ ಅಧಿಕಾರಿಗಳು ಅವರಿಗೆ ಬಹಳ ಹಿಂಸೆ ಮಾಡುತ್ತಿದ್ದಾರೆಂದು ಹೇಳುವುದಕ್ಕೆ ನನಗೆ ಬಹಳ ಸಂಕೋಚವಾಗುತ್ತದೆ. ಏಕೆಂದರೆ ಎಷ್ಟೋಜನ ಪಟೇಲರೂ, ಶ್ಯಾನುಭೋಗರೂ ಬಹಳ ಹಿಂದಿನಿಂದ ಇದ್ದಾರೆ. ಅವರಲ್ಲಿಬಹಳ ಜನ ಬರೀ ಪೋಟಾಗಿ ತಿಂದುಕೊಂಡು, ದುಡ್ಡು ತಿಂದುಕೊಂಡು ಇರತಕ್ಕ ವ್ಯಕ್ತಿಗಳಾಗಿರುವುದಿಲ್ಲ. ಎಷ್ಟೋ ಜನ ದೊಡ್ಡ ಮನೆತನದವರಿದ್ದಾರೆ. ಅವರು ಹೊರಟುಹೋಗುತ್ತಾರೆಂದು ಅವರನ್ನು ಕ್ಷುಲ್ಲಕ ರೀತಿಯಿಂದ ನೋಡುತ್ತಿದ್ದಾರೆ. ಇದನ್ನು ತಪ್ಪಿಸಿ ಅವರನ್ನು ಇಟ್ಟುಕೊಳ್ಳುವ ಹಾಗಿದ್ದರೆ ಮಾನ, ಮರ್ಯಾದೆ, ಬೆಲೆ ಕೊಟ್ಟು ಇಟ್ಟುಕೊಳ್ಳಬೇಕು. ಇಲ್ಲದೆ ಹೋದರೆ ಅವರಿಗೆ ಕೊಡಬೇಕಾದ ಕಾಂಪೆನ್‌ಸೇಷನ್ ಕೊಟ್ಟು ಕಳುಹಿಸಬೇಕು. ಇದು ಸರ್ಕಾರದ ಕರ್ತವ್ಯವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಇದನ್ನು ಗಮನಕ್ಕೆ ತೆಗೆದುಕೊಂಡು ಅವರನ್ನು ಕೆಲಸದಲ್ಲಿ ಇಟ್ಟುಕೊಳ್ಳುವುದು, ಇಲ್ಲದೇ ಹೋದರೆ ಕಾಂಪೆನ್‌ಸೇಷನ್ ಕೊಡುವುದು, ಎರಡರಲ್ಲಿ ಒಂದು ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ.

ರಿಜಿಸ್ಟ್ರೇಷನ್ ಮತ್ತು ಸ್ಟಾಂಪುಗಳ ವಿಚಾರಕ್ಕೆ ಬಂದರೆ 21 ಇಲಾಖೆಗಳಿಗೆ ಇದರಿಂದ ವಿನಾಯಿತಿ ಕೊಟ್ಟಿದ್ದೀರಿ. ತಕಾವಿಸಾಲ ತೆಗೆದುಕೊಳ್ಳುವಾಗಿ, ರಿಜಿಸ್ಟ್ರೇಷನ್ ಮತ್ತು ಸ್ಟಾಂಪು ಚಾರ್ಜ್ ವಿನಾಯಿತಿ ಇದೆ. ಅಡಮಾನ ಬ್ಯಾಂಕಿಗೆ ರಿಜಿಸ್ಟರು ಮಾಡಿಕೊಡುವಾಗ ಸ್ಟಾಂಪ್ ತೆಗೆದುಕೊಳ್ಳಬೇಕು. ಅದೇ ರೀತಿ ಒಬ್ಬ ರೇಷ್ಮೆ ಬೆಳೆಯತಕ್ಕ ವ್ಯವಸಾಯಗಾರ ಸಾಲ ತೆಗೆದುಕೊಳ್ಳಬೇಕಾದರೆ ಸಾವಿರಕ್ಕೆ ಸುಮಾರು 50 ರೂಪಾಯಿ ಖರ್ಚು ಮಾಡಬೇಕು. ಐದು ಸಾವಿರ ರೂಪಾಯಿ ಸಾಲ ಪಡೆಯುವಂಥ ಸಂದರ್ಭದಲ್ಲಿ, ಅವನಿಗೆ ಸಿಕ್ಕತಕ್ಕ 500 ರೂಪಾಯಿ ಸಬ್ಸಿಡಿ ಏನಿದೆ ಅದನ್ನು ಈ ಕೈಯಿಂದ ಕೊಟ್ಟು ಆ ಕೈಯಿಂದ ಸ್ಟಾಂಪ್ ಮುಂತಾದ ರೂಪದಲ್ಲಿ ಕಿತ್ತುಕೊಳ್ಳುವುದಾದರೆ ಅದರಿಂದ ರೈತನಿಗೆ ಸಹಾಯ ಮಾಡಿದಂತಾಗುವುದಿಲ್ಲ, ಅವನು ಸಾಲ ಕೇಳುತ್ತಿರುವ ಸಮಯದಲ್ಲಿ ಅವನಿಂದ ಸ್ಟಾಂಪ್ ಮತ್ತು ರಿಜಿಸ್ಟ್ರೇಷನ್‌ಗೆ ಏನೂ ತೆಗೆದುಕೊಳ್ಳದೇ ಸಹಾಯ ಮಾಡಬೇಕು. ರೇಷ್ಮೆ ವ್ಯವಸಾಯ ಮಾಡುವವರಿಗೆ ಸಾಲ ಕೊಡುವಾಗ ಕೂಡ ಅದೇ ರೀತಿಯಲ್ಲಿ ಒದಗಿಸಿಕೊಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮುಜರಾಯಿ ಸಂಸ್ಥೆಗಳ ವಿಚಾರ ತೆಗೆದುಕೊಂಡರೆ ನಮ್ಮ ರೆವೆನ್ಯೂ ಮಂತ್ರಿಗಳು ಹೇಮಗಿರಿ ಮುಂತಾದ ಕಡೆ ಹೋಗುತ್ತಾರೆಯೆ ಹೊರತು ನಮ್ಮ ಕಡೆ ಬನ್ನಿ ಎಂದರೆ ಬರುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಬೇಕಾದಷ್ಟು ದೇವಸ್ಥಾನಗಳಿವೆ. ಅಭಿವೃದ್ಧಿ ಸ್ಥಿತಿಗೆ ತರಬೇಕಾದಂಥ ಕಟ್ಟಡಗಳು, ದೇವಸ್ಥಾನಗಳೂ ಇವೆ. ಅದರಲ್ಲಿ ಗೋಪಾಲಸ್ವಾಮಿ ಬೆಟ್ಟ ಎಷ್ಟೋ ವರ್ಷಗಳಿಂದ ಇರುವ ಒಂದು ಸುಂದರವಾದ ಪ್ರದೇಶ. ಅಲ್ಲಿಯ ದೇವಸ್ಥಾನವನ್ನು ಉತ್ತಮ ಸ್ಥಿತಿಗೆ ತರಬೇಕಾಗಿದೆ. ರೆವೆನ್ಯೂ ಮಂತ್ರಿಗಳನ್ನು ಕರೆದದ್ದಾಯಿತು. ಟೂರಿಸ್ಟ್ ಮಂತ್ರಿಗಳಾದ ಪಾಟೀಲರನ್ನು ಕರೆದದ್ದಾಯಿತು. ಯಾರೂ ಬಂದು ನೋಡುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿರುವ ದೇವಸ್ಥಾನಗಳು ಮತ್ತು ಪ್ರೇಕ್ಷಣೀಯ ಸ್ಥಳಗಳನ್ನು ಅಭಿವೃದ್ಧಿಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಆಹಾರದ ವಿಚಾರಕ್ಕೆ ಬಂದರೆ, ನಮ್ಮ ರಾಜ್ಯದಲ್ಲಿ ಆಹಾರದ ಕೊರತೆ ಇದೆ. ಈಗಾಗಲೇ ಒಂದು ಕಿಲೋಗ್ರಾಂ ಅಕ್ಕಿಗೆ ಒಂದು ರೂಪಾಯಿ ಆಗಿದೆ. ನಾವೆಲ್ಲಾ ಮೂವತ್ತು ಮೂವತ್ತೊಂದು ರೂಪಾಯಿಗಳಿಗೆ ಬತ್ತವನ್ನು ಕೊಟ್ಟುಬಿಟ್ಟಿದ್ದೇವೆ. ಈಗಿರುವ ಪರಿಸ್ಥಿತಿಯನ್ನು ನೋಡಿದರೆ ಅಕ್ಕಿಯ ಬೆಲೆ ಒಂದು ಕಿಲೋಗ್ರಾಮಿಗೆ 20 ರೂಪಾಯಿ ಆಗುತ್ತದೆಂದು ಹೇಳುತ್ತಾರೆ. ಇದಕ್ಕೆ ಏನು ಮಾಡುತ್ತಿದ್ದೀರಿ? ಇದೂ ಅಲ್ಲದೆ ಡೆವಲಪ್‌ಮೆಂಟ್ ಕೌನ್ಸಿಲ್ಲಿನಲ್ಲಿ ಮೈಸೂರು ಜಿಲ್ಲೆ ಡೆಪ್ಯುಟಿ ಕಮೀಷನರು ನಮಗೆ ಒಂದು ಆಶ್ವಾಸನೆಯನ್ನು ಕೊಟ್ಟರು. ನಮ್ಮ ತಾಲ್ಲೂಕಾದ ಗುಂಡ್ಲುಪೇಟೆಗೆ ಬಹಳ ಕಷ್ಟವಿದೆ, ಅದನ್ನು ನಿವಾರಣೆ ಮಾಡಲು ಅಕ್ಕಿ, ಜೋಳ ಸಪ್ಲೈ ಮಾಡಬೇಕೆಂದು ಕೇಳಿದಾಗ ಜೋಳ ಕೇಳಬೇಡಿ, ಬೇಕಾದಷ್ಟು ಅಕ್ಕಿಯನ್ನು ತರಿಸಿಕೊಡುತ್ತೇವೆ. ಅಮೆರಿಕಾ ಅಕ್ಕಿ ಬೇಕಾದಷ್ಟು ಬಿದ್ದಿದೆ, ತರಿಸಿಕೊಡುತ್ತೇವೆ ಎಂದು ಹೇಳಿದರು. ನಾವು ಇವರು ಹೇಳಿದುದನ್ನು ನಂಬಿಕೊಂಡು ಹಳ್ಳಿಗಳಲ್ಲಿ ಹೋಗಿ ನಿಮಗೆ ಕೆಲಸ ಎಲ್ಲಿರುತ್ತವೆಯೋ ಅಲ್ಲಿಯೇ ಹೋಗಿ ಕೆಲಸ ಮಾಡಿ ಬನ್ನಿ. ನಿಮಗೆ ಕಷ್ಟವಿರುವುದಿಲ್ಲ, ನಿಮಗೆ ಅಕ್ಕಿಯನ್ನು ತಂದುಕೊಡುತ್ತೇವೆಂದು ಹೇಳಿದೆವು. ಅದರಂತೆ ಹಳ್ಳಿಯ ಜನ 10-12 ಮೈಲಿ ದೂರ ಹೋಗಿ ಪ್ರಾಜೆಕ್ಟ್ ಕೆಲಸ ಮಾಡಿಕೊಂಡು

ಬಂದರೆ ಅವರಿಗೆ ಅಕ್ಕಿಯೇ ಇಲ್ಲ. ಸರ್ಕಾರದವರ ಮಾತನ್ನು ಕೇಳಿ ನಾವು ನಮ್ಮ ಮಾತನ್ನು ಉಳಿಸಿಕೊಳ್ಳದಂತಾಗಿದೆ. ಹದಿನೈದು ದಿವಸವಾದರೂ ನಮ್ಮ ತಾಲ್ಲೂಕಿಗೆ ಅಕ್ಕಿಯೇ ಬರಲಿಲ್ಲ. ಮಾನ್ಯ ಮಂತ್ರಿಗಳನ್ನು ವಿಚಾರಿಸಿ ಕಾಗದ ಬರೆದಿದ್ದೇವೆ. ಈಗ ಬರುತ್ತದೆ, ಆಗ ಬರುತ್ತದೆಂದು ಹೇಳಿದರು. ಕೊನೆಗೆ ನೋಡಿದರೆ ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳಬೇಕಾದ್ದನ್ನು ಸಕಾಲದಲ್ಲಿ ತೆಗೆದುಕೊಳ್ಳದೆ ಅದು ಕ್ಯಾನ್ಸಲ್ ಆಯಿತು ಎಂದು ಹೇಳಿದರು. ಹಾಗಾದರೆ ಅಕ್ಕಿ, ಜೋಳ ಇವುಗಳನ್ನು ಅಭಾವವಿರತಕ್ಕ ಕಡೆಗೆ ಹೇಗೆ ಒದಗಿಸುತ್ತೀರಿ? ನಮಗೆ ಅಕ್ಕಿ ಜೋಳ ಬೇಕು ಎಂದು ಕೇಳಿದರೆ, ಉಪ್ಪ ಇದೆಯೇ ಎಂದರೆ ಪಪ್ಪು ಇದೆ ಎಂದು ಹೇಳುವಂತೆ ಗೋಧಿ ತೆಗೆದುಕೊಳ್ಳಿ, ರವೆ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಇವಕ್ಕೆ ತುಪ್ಪವನ್ನು ಸರ್ಕಾರದವರು ಕೊಡುತ್ತಾರೆಯೇ? ಅದೂ ಅಲ್ಲದೆ ನಮ್ಮ ಜನಗಳಿಗೆ ಒಂದು ರತಹ ಆಹಾರ ಪದಾರ್ಥಗಳನ್ನುತಿಂದು ಅಭ್ಯಾಸವಾಗಿ ಬೇರೆ ಪದಾರ್ಥಗಳನ್ನು ತಿಂದರೆ ರಕ್ತಭೇದಿ, ಆಮಶಂಕೆ ಶುರುವಾಗಿ ಡಾಕ್ಟರ್ ನಾಗಪ್ಪ ಅಳ್ವರನ್ನು ಬಿಟ್ಟಿ ಔಷದಿ ಕೊಡಿ ಎಂದು ಕೇಳಬೇಕಾಗುತ್ತದೆ. ಆದುದರಿಂದ ಆ ಜನಗಳಿಗೆ ಬರುವ ವರ್ಷ ಮಳೆ ಬಂದು ಬೆಳೆ ಬೆಳೆಯುವವರೆಗೂ ಅವರಿಗೆ ಬೇಕಾದ ಆಹಾರವನ್ನು ಒದಗಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಸಕ್ಕರೆ ವಿಷಯ ಬೇಕಾದಷ್ಟು ಜನ ಮಾತನಾಡಿದ್ದಾರೆ. ಸಕ್ಕರೆಯನ್ನು ಸೊಸೈಟಿ ಮುಖಾಂತರ ಹಂಚುತ್ತಾರೆ. ನಮ್ಮ ಕಡೆ ಸೊಸೈಟಿಯಲ್ಲಿ ಸಕ್ಕರೆಯನ್ನು ತೂಕ ಮಾಡಿ ಕೊಡುವುದಿಲ್ಲ, ಅಳತೆ ಮಾಡಿ ಕೊಡುವುದಿಲ್ಲ, ಅವರ ಕೊಟ್ಟಷ್ಟು ತೆಗೆದುಕೊಂಡು ಹೋಗಬೇಕು, ಮಂತ್ರಿಗಳು ಅಲ್ಲಿಗೆ ನಾಟಕ ವಗೈರೆ ನೋಡುವುದಕ್ಕೆ ಬರುತ್ತಾರೆ. ನಾಟಕ ನೋಡುವ ಮಂತ್ರಿಗಳು ಅಲ್ಲಿಯ ಜನರ ಕಷ್ಟಸುಖ ಕೇಳುತ್ತಾರೆಯೇ ಎಂದರೆ ಇಲ್ಲವೇ ಇಲ್ಲ.

ಮಿಸಲೇನಿಯಸ್, ಡಿಪಾರ್ಟ್‌ಮೆಂಟಿನಲ್ಲಿ ವಾರ್ತಾ ಇಲಾಖೆ ಸೇರಿದೆ ಎಂದು ತಿಳಿದುಕೊಂಡಿದ್ದೇವೆ. ಮಾನ್ಯ ಗೃಹಮಂತ್ರಿಗಳಿಗೆ ಈ ಇಲಾಖೆ ಸೇರಿದೆ. ಮೈಸೂರಿನಲ್ಲಿ ಒಂದು ಆಫೀಸ್ ಇದೆ. ಬೆಂಗಳೂರಿನಲ್ಲಿರುವ ಆಫೀಸು ಬಹಳ ಗಲೀಜು ಪ್ರದೇಶದಲ್ಲಿದೆ. ಅವರು ನೋಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಮೈಸೂರಿನಲ್ಲಿರುವ ಆಫೀಸು ಬಹಳ ಚೆನ್ನಾಗಿದೆ. ಈ ಆಫೀಸುಗಳಿಗೆ ಎಷ್ಟು ಸಿಬ್ಬಂದಿ ಕೊಟ್ಟಿದ್ದಾರೆ ಎಂದು ಕೇಳಬೇಕಾಗಿದೆ. ಇದು ಫಾರಿನ್ ಎಕ್ಸ್‌ಚೇಂಜ್ ಬರುವಂಥ ವಿಚಾರ, ಇದಕ್ಕೆ ಎಷ್ಟರಮಟ್ಟಿಗೆ ಸಿಬ್ಬಂದಿಯನ್ನು ಕೊಟ್ಟಿದೆ, ಟ್ರೈನ್ಡ್ ಗೈಡ್ಸ್ ಇದ್ದಾರೆಯೇ, ಕನ್‌ವೇಯನೆಸ್ ಏನಾದರೂ ಕೊಟ್ಟಿದೆಯೇ? ಕೃಷ್ಣರಾಜಸಾಗರದಲ್ಲಿ ಒಂದು ವಿಶ್ರಾಂತಿ ಗೃಹವನ್ನು ಕೊಟ್ಟಿದ್ದಾರೆ. ಅಲ್ಲಿ ಒಂದು ಕಪ್ ಕೊಡುವವರೇ ಇಲ್ಲ, ಕೂಲ್ ಡ್ರಿಂಕ್ಸ್ ಕೂಡ ಇಲ್ಲ, ಒಬ್ಬ ಹೋಟೆಲ್‌ನವನಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಒಂದು ಗ್ಲಾಸ್ ಲೈಮ್ ಜ್ಯೂಸ್‌ಗೆ ಒಂದೂವರೆ ರೂಪಾಯಿ ಕೊಡಬೇಕು. ಹೀಗಾದರೆ ಪ್ರವಾಸಿಗರು ಹೇಗೆ ಬರುತ್ತಾರೆ? ಆ ಕಟ್ಟದಲ್ಲಿರುವುದೆಲ್ಲಾ ಸಿಂಗಲ್ ರೂಮ್ಸ್. ಪ್ರವಾಸಿಗರ ಅನುಕೂಲಕ್ಕಾಗಿ ಡಬಲ್ ರೂಮ್ಸ್ ಇರಬೇಕಾದ್ದು ಅಗತ್ಯ. ಇಷ್ಟು ಹಣ ಬರತಕ್ಕ ಮುಖ್ಯವಾದ ಇಲಾಖೆಯನ್ನು ಇಗ್ನೋರ್ ಮಾಡದೆ ಸರಿಯಾಗಿ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ನಾನು ಮುಖ್ಯವಾಗಿ ಹೇಳಬೇಕಾಗಿರುವ ಕ್ಷಾಮದ ವಿಚಾರಕ್ಕೆ ಬರುತ್ತೇನೆ. ಈ ವಿಚಾರ ಮಾತನಾಡುವುದಕ್ಕೆ ಮುಂಚೆ ಒಂದು ಮಾತು ಹೇಳುತ್ತೇನೆ. ರಾಜ್ಯಪಾಲರ ಭಾಷಣದ ಮೇಲೆ, ಬಡ್ಜೆಟ್ ಮೇಲೆ ಚರ್ಚೆ ನಡೆಯುವಾಗ ಈ ವಿಚಾರ ಹೇಳಿದೆ. ಮಾನ್ಯ ಉಪಮಂತ್ರಿಗಳಾದ ಪ್ರಭಾಕರ್ ಅವರು ಹೇಳಿದರು. ನಾಗರತ್ನಮ್ಮ ಹೇಳುವುದೆಲ್ಲ ಸುಳ್ಳು, ಸುಳ್ಳಿನ ಮೊಟ್ಟೆ ಎಂದು ಯಾರೋ ಹೇಳಿದರು ಎಂದು. ಅವರಿಗೂ ಮತ್ತು ಅವರಿಗೆ ಯಾರು ಹೇಳಿದರೋ ಅವರಿಗೂ ಹೇಳುತ್ತೇನೆ. ಸುಳ್ಳಿನ ಮೊಟ್ಟೆ ನಾನು ಏಕೆ ಹೇಳಬೇಕು? ಶ್ರೀ ಪ್ರಭಾಕರ್ ಅವರು ಸುಳ್ಳಿನ ಮೊಟ್ಟೆ. ಇದು ಸುಳ್ಳು ಎಂದು ಹೇಳಿದ್ದಕ್ಕೆ ನನಗೆ ಬಹಳ ವ್ಯಸನವಾಯಿತು. ಏಕೆಂದರೆ ಅಂಥ ಸುಳ್ಳು ಹೇಳಬೇಕಾದ ಪ್ರಮೇಯವೇನೂ ಒದಗಿಲ್ಲ. ಪ್ರಪಂಚದಲ್ಲಿ ಬರಬಾರದಂಥ ಕಷ್ಟ ಬಂದರೂ ನಗುತ್ತ ಅದನ್ನು ಎದುರಿಸುತ್ತೇನೆ. ಹೊಟ್ಟೆಯಲ್ಲಿ ಎಷ್ಟೇ ಸಣ್ಣ ಕುದಿಯಲ್ಲಿಅದನ್ನು ತೋರ್ಪಡಿಸುವುದಿಲ್ಲ.

ಸುಳ್ಳು ಹೇಳಿದ್ದಾರೆಂದು ಯಾರು ಇವರಿಗೆ ಹೇಳಿದರೋ ಅವರಿಗೆ ಅದು ಸುಳ್ಳಲ್ಲ, ನಿಜ ಹೇಳಿದ್ದಾರೆಂದು ಇವರು ಹೇಳಬೇಕಾಗಿತ್ತು. ನಮ್ಮ ಜನರಿಗೆ ನಾನು ದ್ರೋಹ ಮಾಡುಬಾರದು. ಅದಕ್ಕೆ ಅವರು ನನ್ನನ್ನು ಆರಿಸಿ ಈ ಸಭೆಗೆ ಕಳುಹಿಸಿರುವುದು, ನಾನು ನಿಜ ಹೇಳಬೇಕೆಂದು, ನಾನು ನಿಜ ಹೇಳದಿದ್ದರೆ ಮುಂದೆ, ದೇವರ ಮುಂದೆ ನನಗೆ ಕ್ಷಮೆ ದೊರಕುವುದಿಲ್ಲವೆಂದು ತಿಳಿದು ನಿಜವನ್ನು ಹೇಳಿದ್ದೇನೆ. ಹೀಗಿರುವಾಗ ಅವರಿಗೆ ಯಾರಾದರೂ ಹಾಗೆ ಹೇಳಿದ್ದರೆ ಇವರೇ ಅವರಿಗೆ ಸರಿಯಾಗಿ ಹೇಳಬೇಕಾಗಿತ್ತು. ನಮ್ಮೂರಿನಲ್ಲಿರುವ ಕ್ಷಾಮ ನಿಮ್ಮೂರಿನಲ್ಲೆಲ್ಲಿಯೂ ಇಲ್ಲವೆಂದು ಅವರಿಗೆ ಹೇಳುತ್ತೇನೆ. ನಮ್ಮ ಮಂತ್ರಿಗಳು ಅಲ್ಲಿ ಬಂದು ನೋಡಬೇಕು. ಅಲ್ಲಿ ಕ್ಷಾಮವಿಲ್ಲ. ಆದ್ದರಿಂದ ರಿಲೀಫ್ ಕಾಮಗಾರಿಗಳನ್ನು ಮಾಡಲಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರಂತೆ. ರಿಲೀಫ್ ವರ್ಕ್ಸ್‌ನಲ್ಲಿ ಕೊಟ್ಟರೂ ಹತ್ತಾಣೆ ಕೂಲಿ ಕೊಟ್ಟು ಕೆಲಸ ಮಾಡಿ ಎಂದು ಹೇಳುತ್ತಾರೆ. ಆದರೆ ಇವರು ಕೊಡುವ ಹತ್ತಾಣೆಗೆ ಮುಕ್ಕಾಲು ಸೇರು, ಒಂದು ಸೇರು ಅಕ್ಕಿ ಕೂಡ ದೊರಕುವುದಿಲ್ಲ. ಇದನ್ನು ಬಿಟ್ಟು ಹತ್ತು ಮೈಲಿ ದೂರ ಹೋದರೆ ಅಲ್ಲಿ ನಡೆಯುತ್ತಿರುವ ಯೋಜನಯಲ್ಲಿ ಅವರಿಗೆ ಕೆಲಸ ಸಿಕ್ಕುತ್ತದೆ. ಹೆಚ್ಚಿನ ಕೂಲಿ ಸಿಕ್ಕುತ್ತದೆ. ರೆವಿನ್ಯೂ ಅಧಿಕಾರಿಗಳು ಬಿ.ಡಿ.ಓ.ಗೆ ಹಾಕುವುದು. ಇವರು ಮತ್ತೆ ಅವರಿಗೆ ಕಳುಹಿಸುವುದು, ಹೀಗೆ ಮಾಡಿ ಇಬ್ಬರೂ ಸೇರಿ ಎರಡು ತಿಂಗಳು ಕಾಲ ಕಳೆದರು, ಎಲ್ಲರೂ ಬಡಜನರ ಕಡೆ ಕೈತೋರಿಸುತ್ತಾರೆ. ಆದರೆ ಅಧಿಕಾರಿಗಳು ಮಾಡುವುದು ಅವರಿಗೆ ಗೊತ್ತಾಗುವುದಿಲ್ಲ. ತಕಾವಿ ಸಾಲ ಕೇಳಿದರೆ ಬಿದರೆಗೆ ಅಷ್ಟು ಕೊಟ್ಟೆವು, ಗುಲ್‌ಬರ್ಗಕ್ಕೆ ಇಷ್ಟು ಕೊಟ್ಟೆವು ಎಂದು ಲೆಕ್ಕ ಹೇಳುತ್ತಾರೆ. ಅಲ್ಲಿ ದನಗಳಿಗೆ ಕುಡಿಯಲು ನೀರಿಲ್ಲ; ತಿನ್ನಲು ಹುಲ್ಲಿಲ್ಲ. ಇಂತಹ ಸಮಯದಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಮನೆಮನೆಗೆ ಹೋಗಿ ಕಂದಾಯ ವಸೂಲು ಮಾಡುತ್ತಿದ್ದಾರೆ. ಜನರು ಕಂದಾಯವನ್ನು ಯಾವ ರೀತಿ ಕೊಡಬೇಕು? ಜನರಲ್ಲಿ ವಿಷ ತೆಗೆದುಕೊಳ್ಳಬೇಕೆಂದರೂ ಮೂರು ಕಾಸಿಲ್ಲ. ಹೀಗಿರುವಾಗ ನಮಗೆ, ನಮ್ಮ ತಾಲ್ಲೂಕಿಗೆ ಅನುಕೂಲ ಕೊಡದಿರುವುದು ಸರಕಾರಕ್ಕೆ ಅವಮಾನಕರ. ಆದಕಾರಣ, ಅಲ್ಲಿನ ಕಷ್ಟವನ್ನು ನಿವಾರಣೆ ಮಾಡಬೇಕು. ನಮ್ಮಲ್ಲಿ ಬೇಕಾದಷ್ಟು ಎಕ್ಸೈಸ್ ಫಂಡ್ ಇದೆ. ಮಂತ್ರಿಗಳು ನಂಜನಗೂಡಿನಿಂದ ಮುಂದಕ್ಕೆ ಏಕೆ ಬರುವುದಿಲ್ಲ.

ಈ ದಿವಸ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಚರ್ಚೆಯಾಗುತ್ತಿರುವಾಗ ನಾನು ಕೆಲವು ವಿಚಾರಗಳನ್ನು ಮತ್ತು ಸೂಚನೆಗಳನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ನಾನು ನಮ್ಮ ತಾಲ್ಲೂಕಿನ ಪರವಾಗಿ ಮತ್ತು ಬರಗಾಲ ಪ್ರದೇಶದಲ್ಲಿ ವಾಸಿಸುತ್ತಿರುವ ನಮ್ಮ ತಾಲ್ಲೂಕಿನವರ ಪರವಾಗಿ ಲೋಕೋಪಯೋಗಿ ಇಲಾಖೆಗೆ ಮತ್ತು ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಸರಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸದಿದ್ದರೆ ಕರ್ತವ್ಯಲೋಪ ಮಾಡಿದಂತಾಗುತ್ತದೆ. ಏಕೆಂದರೆ ನಾವು 10-12 ವರ್ಷಗಳಿಂದ ಎಷ್ಟೋ ಕಷ್ಟಪಟ್ಟವರು. ಈಗ ಚನ್ನಬಸಪ್ಪನವರಿಲ್ಲ, ಅವರಿದ್ದರೆ ಚೆನ್ನಾಗಿತ್ತು. ಅವರು ಎಷ್ಟೋ ಸಾರಿ ಟೆಕ್ನಿಕಲ್ ಸ್ಯಾಂಕ್ಷನ್ ಆಗಿದೆಯೇ, ಅಪ್ರೂವ್ ಮಾಡಿದರೆ ಏಕೆ ಮಾಡಿದ್ದಾರೆ ಎಂಬುದಾಗಿ ಹತ್ತಾರು ಪ್ರಶ್ನೆಗಳನ್ನು ಕೇಳುತ್ತಿದ್ದರು. ಅವರು ನಮ್ಮ ತಾಲ್ಲೂಕನ್ನು ಏನು ಮಾಡಿದ್ದರು ಏನು ಆಗಿತ್ತು ಹೇಳುತ್ತಿದ್ದೆ. ಅವರು ಮಾಡಿರುವ ಪಾಪವನ್ನು ಅವರ ಕಾಲದಲ್ಲಿ ತಾಲ್ಲೂಕು ಸುಟ್ಟುಭಸ್ಮವಾಗಿದ್ದನ್ನು ಇನ್ನೊಂದು ದಿವಸ ಅವರಿದ್ದಾಗ ಹೇಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಂತೆ ನನಗೆ ಗೊತ್ತಿರುವ ವಿಚಾರ ಹೇಳುತ್ತೇನೆ. ನಿನ್ನೆ ನನಗೆ ಒಂದು ಪುಸ್ತಕ ಸಿಕ್ಕಿದೆ. ಅದರಲ್ಲಿ ಮೈಸೂರು ಜಿಲ್ಲೆಯ ಕೆಲವು ವಿಚಾರ ತಿಳಿಸಿದ್ದಾರೆ. ಅದರಲ್ಲಿ ಒಂದು ದೊಡ್ಡ ಪಟ್ಟಿಯಿದೆ. ಯಾವ ಕೆಲಸ ತೆಗೆದುಕೊಳ್ಳಬಹುದು. ತೆಗೆದುಕೊಳ್ಳಬೇಕಾದಷ್ಟಿದೆ ಎಂಬ ವಿವರವಿದೆ. ಆದರೆ ಕೆಲವು ಎರಡು ಮೂರು ಸಲ ಪ್ರಿಂಟಾಗಿರುವುದರಿಂದ ದೊಡ್ಡ ಪಟ್ಟಿ ಕಂಡಿತೇ ಹೊರತು ಇರುವ ಕೆಲಸಗಳ ಪಟ್ಟಿ ನಿಜವಾಗಿ ನೋಡಿದರೆ ಚಿಕ್ಕದು, ದಯವಿಟ್ಟು ಹಾಗೆ ಮಾಡಬಾರದು, ಎಷ್ಟು ಕೆಲಸಗಳಿವೆಯೋ ಅಷ್ಟೇ ತೋರಿಸಬೇಕು. ಹಾಗೆ ಮಾಡಿ ಮನಸ್ಸು ಶಾಂತವಾಗುವ ಹಾಗೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಈ ಪುಸ್ತಕದಲ್ಲಿ ಬಾಡಿಗೆ ಮನೆ ಯೋಜನೆ ಇದೆ. ನಮ್ಮ ತಾಲ್ಲೂಕಿನ ಯಾವ ಯೋಜನೆಯೂ ಇಲ್ಲ, ನಮ್ಮ ತಾಲ್ಲೂಕಿಗೆ ಯಾವ ಮಂತ್ರಿಗಳೂ ಬರುವುದಿಲ್ಲ. ಲೋಕೋಪಯೋಗಿ ಇಲಾಖೆಯ ಮಂತ್ರಿಗಳೂ ಬರುವುದಿಲ್ಲ. ಚೀಫ್ ಇಂಜಿನಿಯರ್ ಜನರಲ್‌ರವರು ಒಂದು ಸಲ ಬರುತ್ತಿದ್ದಾಗ ಆಕ್ಸಿಡೆಂಟಾಗಿ ಅವರು ಬರುವುದಕ್ಕಾಗಲಿಲ್ಲ. ಮಂತ್ರಿಗಳಂತೂ ಬರುವುದೇ ಇಲ್ಲ. ಯಾರು ಮಂತ್ರಿಸಿ ನೀರು ಹಾಕಿದ್ದಾರೋ ಏನೋ ನಮ್ಮ ತಾಲ್ಲೂಕಿನಲ್ಲಿ ಯಾವ ಯೋಜನೆಯನ್ನೂ ತೆಗೆದುಕೊಳ್ಳುವುದಿಲ್ಲ. ಬಾಡಿಗೆ ಮನೆ ಯೋಜನೆ ನೋಡಿದರೆ ಚಾಮರಾಜನಗರಕ್ಕೆ 4 ಲಕ್ಷ ಕೊಟ್ಟಿದ್ದಾರೆ. ಗುಂಡ್ಲುಪೇಟೆಗೆ ಯಾವುದೂ ಬೇಡವೇ, ರಾಚಯ್ಯನವರು ನಮಗೆ 10-12 ಮೈಲಿ ದೂರದಲ್ಲಿದ್ದರೂ ಅಭಾವ ಪ್ರದೇಶವಾದ ನಮ್ಮ ತಾಲ್ಲೂಕಿಗೆ ಅಲ್ಲಿಂದ ನೀರನ್ನೊದಗಿಸುವುದಾಗಲೀ ಅಥವಾ ಬೇರೆ ಯಾವ ಸಹಾಯಕ್ಕಾಗಲೀ ಬರುವುದಿಲ್ಲ. ಅವರು ತಮಗೆ ಬೇಕಾದ ಅನುಕೂಲ ಮಾಡಿಕೊಳ್ಳುತ್ತಿದ್ದಾರೆ. ನೀರಾವರಿಯಿಲ್ಲದಿರುವ ಗುಂಡ್ಲುಪೇಟೆ ತಾಲ್ಲೂಕಿನಲ್ಲೇ ಯಾವುದಾದರೂ ಕೆರೆಯಾದರೂ ಆಗಲಿ ಅಂದರೆ ಅದಕ್ಕೂ ಬ್ರೇಕ್ ಹಾಕುತ್ತಾರೆ. ಹಾಗೆ ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ನುಗು ರಿಸರ್ವಾಯಿರ್ 20 ಸಾವಿರ ಎಕರೆಗಳಿಗೆ ನೀರನ್ನೊದಗಿಸುವುದು. ಅದರಲ್ಲೂ 2-3 ವರ್ಷದಿಂದ ನೀರಿಲ್ಲದೆ ತೊಂದರೆಯಾಗಿದೆ. ಕಪಿನಿ ಯೋಜನೆ ಕೈಬಿಡುವ ಪರಿಸ್ಥಿತಿ ಕಾಣುತ್ತಿದೆ. ಅದನ್ನು

ಕೈಬಿಡಬಾರದು. ಕಪಿನಿ ಯೋಜನೆಯಿಂದ ಫೀಡರ್ ಚಾನಲ್ಲನ್ನು ನುಗು ಜಲಾಶಯಕ್ಕೆ ಒದಗಿಸಲು ಅನುಕೂಲವಾಗಬೇಕು. 48ನೆಯ ಪುಟದಲ್ಲಿ ಮಂಗಳ ಪ್ರಾಜೆಕ್ಟ್ ನಮೂದಿಸಲಾಗಿದೆ. ಇದರಿಂದ ಯಾರಿಗೆ ಅನುಕೂಲ? ರಾಚಯ್ಯನವರಿಗೇ ಅನುಕೂಲವಾಗಬಹುದು. ಅವರ Game Sanctuary ಆನೆ, ಕುರಿ, ಕರಡಿ ಮುಂತಾದುದುವುಗಳಿಗೆ ಅನುಕೂಲವಾಗುವ ಹಾಗೆ ಇದನ್ನು ತೆಗೆದುಕೊಳ್ಳಲು ಸೇರಿಸಿದ್ದಾರೆಯೇ ಹೊರತು ಜನರಿಗೆ ಅನುಕೂಲವಾಗಲೆಂದು ಸೇರಿಸಿಲ್ಲ. ನಮ್ಮ ತಾಲ್ಲೂಕಿನಲ್ಲಿ ಅದರೇಬ್ಬರು ಅಥವಾ ಮೂರು ಜನರಿಗೆ ಅನುಕೂಲವಾಗಬಹುದು ಅಷ್ಟೇ. ಆದುದರಿಂದ ದಯಮಾಡಿ ಇದನ್ನೇ ದೊಡ್ಡದು ಮಾಡಿ ಬಾಕಿ ಕೆಲಸ ಕೈಬಿಡದೆ ಜನರಿಗೆ ಬೇಕಾದ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹೆಬ್ಬಾಳ ಪ್ರಾಜೆಕ್ಟನ್ನು ಗುಂಡಿಲಗೆ ಸೇರಿಸುವುದಿದೆ. ಚೀಫ್ ಇಂಜಿನಿಯರು ಅದನ್ನು ನೋಡಿದ್ದಾರೆ. ನಿಜವಾಗಿಯೂ ಇದರಿಂದ ಜನತೆಗೆ ಅನುಕೂಲವಾಗುತ್ತದೆ. ಅದನ್ನು ಮಾಡಿದರೆ ಗುಂಡಲುಪೇಟೆ ಜನರಿಗೆ ನೀರು ದೊರೆಯುತ್ತದೆ, ಗುಂಡಲು ನೀರು ದೊರೆತು ನೀರಾವರಿಗೆ ಅವಕಾಶವಾಗುವುದು. ಆದುದರಿಂದ ಹೆಬ್ಬಳ್ಳ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕು. ಕಮರಹಳ್ಳಿ ಪ್ರಾಜೆಕ್ಟ್ ಮಾಡಿದ್ದಾರೆ. ಆದರೆ ಅದನ್ನು ಪೂರೈಸಿದರೆ ನೀರು ಯಾರಿಗೋ ಇತರರಿಗೆ ದೊರೆತು ಗುಂಡಲುಪೇಟೆ ತಾಲ್ಲೂಕಿನವರ ಜಮೀನು ಮುಳುಗಡೆಯಾಗುವುದು ಕಂಡುಬಂದಿದೆ. ಮುಳುಗಡೆಯಾಗಿರುವ ಪ್ರದೇಶದ ಮಾಲೀಕರಿಗೆ ಪರಿಹಾರ ಸಹ ಕೊಟ್ಟಿಲ್ಲ. ದಯೆಯಿಟ್ಟು ಬೇಗ ಅದನ್ನು ಪಾವತಿ ಮಾಡಬೇಕು.

ಆಮೇಲೆ ದೊಡ್ಡ ದೊಡ್ಡ ಕಟ್ಟಡಗಳಿಗೆ ವಿಪರೀತ ಹಣವನ್ನು ಪಟ್ಟಣಗಳಲ್ಲಿ ಖರ್ಚು ಮಾಡುವುದು ವ್ಯರ್ಥ ಎಂದು ಮಾನ್ಯಸದಸ್ಯರು ಈಗತಾನೆ ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಶಾಲೆಗಳಿಗೆ ಕೇಳಿದರೆ ಹಣವಿಲ್ಲ ಎಂದು ಹೇಳುವುದು. ಆಗಬೇಕಾದ ಕಟ್ಟಡಗಳಿಗೆ ಹಣವಿಲ್ಲ. ಹೆಣ್ಣುಮಕ್ಕಳ ಶಾಲೆಗಳ ಬಳಿ ಲ್ಯಾವೆಟರೀಸ್ ಕಟ್ಟಿಸುವುದಕ್ಕೆ ಹಣ ಕೊಡುವುದಿಲ್ಲ. ರಾಜ್ಯಪಾಲರ ಬಂಗಲೆ ಕೆಲಸ ಮುಂತಾದುವುಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವುದು ಅನ್ಯಾಯ. ಈ ರೀತಿ ಅನಾವಶ್ಯಕವಾದ ಕೆಲಸಗಳಿಗೆ ದುವಾರಿ ಖರ್ಚು ಮಾಡುವುದನ್ನು ಬಿಟ್ಟು ಹಳ್ಳಿಗಳಲ್ಲಿ ಹೆಣ್ಣುಮಕ್ಕಳ ಶಾಲೆಗಳಿಗೆ ಅನುಕೂಲ ಮಾಡಿಕೊಡಿ.

ಹೀಗೆ ಮಿಡಲ್ ಸ್ಕೂಲ್ ಇದೆ, ಗರ್ಲ್ಸ್ ಸ್ಕೂಲ್ ಇದೆ. ನಮ್ಮ ಗುಂಡ್ಲುಪೇಟೆಯಲ್ಲಿ. ಅಲ್ಲಿ ನಾನು ನೋಡಿದ್ದೇನೆ, ಮಕ್ಕಳನ್ನು ಕುರಿ ತುಂಬಿದ ಹಾಗೆ ತುಂಬುತ್ತಾರೆ. ಇಂಥದಕ್ಕೆ ದುಡ್ಡು ಖರ್ಚು ಮಾಡಿ ಕೆಲಸ ಮಾಡಬೇಕು. ಅಲ್ಲದೆ, ಅಲ್ಲಿ ಇಲ್ಲಿ ಏರ್ ಕಂಡೀಷನ್ ಬಿಲ್ಡಿಂಗ್ ಕಟ್ಟಿಸುವುದಕ್ಕೆ ದುಡ್ಡು ಖರ್ಚು ಮಾಡುವುದು ಶುದ್ಧ ಅನ್ಯಾಯ.

ಇನ್ನು ನಂಜನಗೂಡು ಬ್ರಿಜ್, ಅಲ್ಲಿ ಒಂದು ಸಾರಿ ಹೋದರೆ, ಒಂದೊಂದು ಗಂಟೆ ಕಾಯಬೇಕು, ಒಂದು ಬಸ್, ಕಾರು, ಗಾಡಿ ಎಂದು ಬರಲಿಕ್ಕೇನೆ ಆಗುವುದಿಲ್ಲ. ಅದನ್ನು ನೀವು ತೆಗೆದುಕೊಂಡು ಸ್ವಲ್ಪ ಅನುಕೂಲವಾಗುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪವರ್ ಫೇಲ್ಯೂರ್, ನಮ್ಮ ಸಹೋದರಿ, ಶ್ರೀಮತಿ ಬಸವರಾಜೇಶ್ವರಿಯವರು ಹೇಳಿದರು. ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತದೆ, 20-25 ಜನರನ್ನು ನೀರು ಬಿಡುವುದಕ್ಕೆ ಕರೆದುಕೊಂಡು

ಹೋದಾಗ 10-15 ಸಾರಿ ವಿದ್ಯುಚ್ಛಕ್ತಿ ಫೇಲ್ಯೂರ್ ಆದರೆ, ಇಲಾಖೆಯ ಮೇಲೆ ಕೇಸ್ ಹಾಕುವ ಪರಿಸ್ಥಿತಿ ಬರುತ್ತದೆ. ಹೀಗಾಗಬಾರದು, ಇದನ್ನು ಸರಿಪಡಿಸುವುದಕ್ಕೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ನಿಮ್ಮ ಟ್ರಾನ್ಸ್‌ಫಾರ್ಮರ್ಸ್ ಏನಿವೆ, ಅವನ್ನು ಎಲ್ಲಾ ಒಳ್ಳೆಯ ರೀತಿಯಿಂದ ಇಡಬೇಕು. ಕೆಲವು ಕಡೆ ಇದರಿಂದ ರೈತರ, ಪಂಪ್‌ಸೆಟ್ಟೇ ಭಸ್ಮವಾಗುವ ಪರಿಸ್ಥಿತಿ ಬರುತ್ತದೆ ಮತ್ತು ಅದನ್ನು ರೈತರಿಗೆ ರಿಪೇರಿ ಮಾಡಬೇಕಾದರೆ, 300-400 ರೂಪಾಯಿ ಖರ್ಚಾಗುತ್ತದೆ.

ಇನ್ನು ಈ ಟ್ರಾನ್ಸ್‌ಫರ್ ವಿಚಾರ, ಕೆಲವರು ನಮ್ಮನ್ನು ಕಾಡಿ, ಬೇಡಿಕೊಳ್ಳುತ್ತಿದ್ದಾರೆ. ಅವರ ನಿಜವಾದ ಸ್ಥಿತಿಯನ್ನು ಹೇಳಿದರೆ ; ಖಂಡಿತವಾಗಿ ಅದನ್ನು ಮಾಡಬೇಕು. ಏಕೆಂದರೆ ನಮ್ಮ ಕೈಯಲ್ಲಿ ಆಗುವುದಿಲ್ಲವೆಂದ ತಕ್ಷಣ, ಅವರು ಹಿಂದಿನ ಬಾಗಿಲುಗಳಲ್ಲಿ ಹೋಗುತ್ತಾರೆ. ಒಬ್ಬೊಬ್ಬರು ಒಂದೊಂದು ಸಾವಿರ ರೂಪಾಯಿ ಖರ್ಚು ಮಾಡುತ್ತಿದ್ದುದನ್ನು ನಾನು ನೋಡಿದ್ದೇನೆ. ನಿಮ್ಮ ಚೀಫ್ ಇಂಜಿನಿಯರ್ ಮಾತು, ಏನೂ ನಡೆಯುವುದಿಲ್ಲ. ಅಲ್ಲಿ ಒಬ್ಬರು ಇದ್ದಾರೆ, ಹಣ ಕೊಡದೆ ಯಾವ ಟ್ರಾನ್ಸ್‌ಫರ್ ಕೂಡ ಮಾಡುತ್ತಿಲ್ಲ. ಪೇಪರಿಗೆ ಸೈನ್ ಕೂಡ ಮಾಡುವುದಿಲ್ಲ. ನೀವೇ ಅದರಿಂದ ಮಾಡಿದರೆ ತಂಟೆ, ದೂರು ಎಲ್ಲಾ ತಪ್ಪಿಹೋಗುತ್ತದೆ. ಇದು ಮೇಜರ್ ಇರಿಗೇಷನ್ ಚೀಫ್ ಇಂಜಿನಿಯರ್ ಆಫೀಸಿನಲ್ಲಾಗಲೀ, ಚೀಫ್ ಇಂಜಿನಿಯರ್ ಜನರಲ್ ಆಫೀಸಿನಲ್ಲಾಗಲೀ ಇಲ್ಲ, ಸಿ ಮತ್ತು ಬಿ ಆಫೀಸಿನಲ್ಲಿ ನಡೆಯುತ್ತಿದೆ. ಇದು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಆದ್ದರಿಂದ ಇನ್ನಾದರೂ ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಹೇಳುತ್ತೇನೆ.

ಕೊನೆಯದಾಗಿ, ಒಗರಗಟ್ಟ ಪ್ರಾಜೆಕ್ಟ್ ಆಗಿದೆ. ಅಲ್ಲಿ ಮಳೆ ಇಲ್ಲದೆ ನೀರು ಸಾಕಾಗುತ್ತಾ ಇಲ್ಲ. ಆದಕ್ಕೆ ಆಂಜನೇಯನ ದೇವಸ್ಥಾನದ ಹತ್ತಿರ ಹರಿಯುತ್ತಾ ಇರುವ ನೀರನ್ನು ಇದಕ್ಕೆ ಸೇರಿಸಿಕೊಂಡರೆ, ಈ ಟ್ಯಾಂಕಿಗೆ ಸಹಾಯವಾಗುತ್ತದೆ. ಈ ವಿಚಾರದಲ್ಲಿ ಸುಮಾರು ಅರ್ಜಿಗಳು ಬಂದಿವೆ. ಅದನ್ನು ದಯವಿಟ್ಟು ಪರಿಶೀಲಿಸಿ, ಕೆಲಸ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

4.2 ಕೃಷಿ ಕ್ಷೇತ್ರ

ರೈತರು ಭಾರತದ ಬೆನ್ನೆಲುಬು ಎಂಬುದನ್ನು ಕೃಷಿಕರಾಗಿದ್ದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಚೆನ್ನಾಗಿ ಅರಿತಿದ್ದರು. ಅವರ ಪತಿ ಕೆ.ಸಿ. ಸುಬ್ಬಣ್ಣನವರು ನಿಧನ ಹೊಂದಿದ ನಂತರ ಅವರು ಹೊಂದಿದ್ದ ಅಪಾರವಾದ ಆಸ್ತಿಯನ್ನು ತಾವೇ ಸ್ವತ ಉಳುಮೆ ಮಾಡಿಸಿ ಒಂದಷ್ಟು ಆದಾಯ ಗಳಿಸುತ್ತಿದ್ದರು. ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಕಬ್ಬಹಳ್ಳಿಯಲ್ಲಿ ವಾಸ ಮಾಡುತ್ತಿದ್ದಾಗ ನಿವೃತ್ತ ಗ್ರಾಮ ಲೆಕ್ಕಾಧಿಕಾರಿಯಾದ ಶ್ರೀ ಶಿವಮಲ್ಲಪ್ಪ ಎಂಬುವರು ಆಳು ಕಾಳುಗಳ ಜವಬ್ದಾರಿ ಹೊತ್ತು ಅಮ್ಮನವರ ಕೃಷಿಯ ಬೆಳವಣಿಗೆಗೆ ಒತ್ತಾಸೆಯಾಗಿದ್ದರು. ಇದರಿಂದ ಅಮ್ಮನವರಿಗೆ ಕೃಷಿಯ ಬಗ್ಗೆ ಸ್ವಲ್ಪ ಅನುಭವ ಬಂದಿತ್ತು. ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಅಮೇರಿಕಾದ ರೈತರ ಆಹ್ವಾನದ ಮೇರೆಗೆ ಅಲ್ಲಿಗೆ ಹೋಗಿ ಅಲ್ಲಿನ ಕೃಷಿ ವಿಧಾನಗಳನ್ನು ಕಣ್ಣಾರೆ ಕಂಡು ಬಂದಿದ್ದರು. ಜೊತೆಗೆ ಇವರು ಬೇರೆ ಬೇರೆ ದೇಶಗಳಿಗೆ ಭೇಟಿ ಕೊಟ್ಟು

ಕೃಷಿ ಕೈಗಾರಿಕೆ, ಹೈನುಗಾರಿಕೆ ಮತ್ತು ಸಂಸದೀಯ ವ್ಯವಹಾರಗಳ ಬಗ್ಗೆ ಅಪಾರ ಅನುಭವ ಗಳಿಸಿಕೊಂಡಿದ್ದರು. ಆ ಅನುಭವದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ವ್ಯವಸಾಯ ಕ್ಷೇತ್ರದ ಅಭಿವೃದ್ಧಿಗಾಗಿ ಸತತ ಶ್ರಮವಹಿಸಿದ್ದರು. 1980 ರ ದಶಕದಲ್ಲಿ ಬೀರವಾಳ್ ಕಬಿನಿ ಡ್ಯಾಮ್‌ನಿಂದ IIನೇ ಹಂತದ ಯೋಜನೆಯನ್ನು ಜಾರಿಗೊಳಿಸಿ ರೈತರ ಭೂಮಿಗೆ ನೀರುಣಿಸಬೇಕೆಂಬ ಹಂಬಲ ಅವರದಾಗಿತ್ತು. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಯೋಜನೆಗೆ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯು ದೊರಕಿತ್ತು. ರಾಜಕಾರಣಿಗಳ ಕಚ್ಚಾಟದಿಂದಾಗಿ ಈ ಯೋಜನೆ ವಿಳಂಬವಾಗಿ ಇನ್ನೂ ಜಾರಿಗೆ ಬರದಿರುವುದು ನಿರಾಶೆಯನ್ನುಂಟುಮಾಡಿದೆ. ವಿಧಾನ ಸಭೆಯಲ್ಲಿ ಬೇರೆ ಸದಸ್ಯರೊಡನೆ ಬೆರೆತು ಈ ಯೋಜನೆ ಅನುಷ್ಠಾನಕ್ಕೆ ಅಮ್ಮನವರು ಬಹಳ ಹೋರಾಟ ನಡೆಸಿದರು. ಆದರೆ ಅವರ ಜೀವನ ಕಾಲದಲ್ಲಿ ಇದು ಈಡೇರಲಿಲ್ಲ ಇದುವರೆವಿಗೂ ಕಬಿನಿ IIನೇ ಹಂತದ ಯೋಜನೆ ಅನುಷ್ಠಾನಗೊಂಡಿಲ್ಲ. ಇದು ಗುಂಡ್ಲುಪೇಟೆ ಭಾಗದ ಬೇಗೂರು ಹೋಬಳಿ ಚಾಮರಾಜನಗರದ ಹರವೆ ಹೋಬಳಿ ಮತ್ತು ಸಂತೇಮರಹಳ್ಳಿ ಹಾಗೂ ನಂಜನಗೂಡಿನ ಕೆಲವು ಭಾಗ ಹಾಗೇ ಟಿ. ನರಸೀಪುರದ ಸ್ವಲ್ಪ ಭಾಗ ಕೊಳ್ಳೇಗಾಲದ ಬಹು ಭಾಗದ ಭೂಮಿಗೆ ನೀರು ಒದಗಿಸುವ ಯೋಜನೆಯಾಗಿತ್ತು ಈ ಭಾಗದ ರೈತರಿಗೆ ಇದರಿಂದ ತುಂಬಾ ಅನುಕೂಲಕರವಾಗುತ್ತಿತ್ತು. ರಾಜಕಾರಣಿಗಳ ದೂರ ದೃಷ್ಟಿಯ ವೈಫಲ್ಯದಿಂದ ಹಾಗೂ ಕೇಂದ್ರ ಸರ್ಕಾರದ ನೀತಿಯಿಂದ ಮತ್ತು ಕಾವೇರಿ ನ್ಯಾಯ ಮಂಡಳಿಯ ತೀರ್ಪಿನಿಂದ ಈ ಯೋಜನೆಗೆ ಹಿನ್ನಡೆಯಾಗಿದೆ. ಒಟ್ಟಿನಲ್ಲಿ ಅಮ್ಮನವರ ಈ ಯೋಜನೆಗೆ ಯಶಸ್ಸು ತಂದು ಕೊಡಲಿಲ್ಲ.

ಅಮ್ಮನವರು ತಮ್ಮ ಗುಂಡ್ಲುಪೇಟೆ ಕ್ಷೇತ್ರದಲ್ಲಿ ಇಂಗಲವಾಡಿ ಎಂಬ ಗ್ರಾಮದ ಹತ್ತಿರ ನಲ್ಲೂ ಅಮ್ಮಾರಿ ಕೆರೆ ಎಂಬ ಒಂದು ಬೃಹತ್ ಯೋಜನೆಯನ್ನು ಕೈಗೊಂಡು 1975ರಲ್ಲಿ ಶಂಕು ಸ್ಥಾಪನೆ ನೆರವೇರಿಸಿದರು ಇದು 1983 -84 ರಲ್ಲಿ ಕೊನೆಗೊಂಡಿತು. ಈ ಕೆರೆಯ ಒಟ್ಟು ವಿಸ್ತೀರ್ಣ 4000 ಎಕರೆಗಳು ಹಾಗೂ ಇದು $5^1/_2$ ಕೋಟಿ ರೂಪಾಯಿಗಳ ವೆಚ್ಚದ್ದಾಗಿದೆ. ಈ ಕೆರೆ ತುಂಬಿದರೆ ಸಾವಿರಾರು ರೈತರ ಬದುಕು ಹಸನವಾಗುತ್ತದೆ. ಈ ಕೆರೆಗೆ ಬಂಡೀಪುರ ಮತ್ತು ಕೇರಳದ ಗಡೀಭಾಗದ ಹಳ್ಳಿಗಳಲ್ಲಿ ಬೀಳುವ ಮಳೇಯ ನೀರೇ ಮೂಲ. ಈಗ ಈ ನಲ್ಲೂರ ಅಮ್ಮಾನ ಕೆರೆಗೆ ನೀರು ತುಂಬುವ ಸಾಧ್ಯತೆ ಕಡಿಮೆ ಇದೆ. ಅಮ್ಮನವರ ದೂರದೃಷ್ಟಿಯ ಫಲವಾಗಿ ಈ ಕೆರೆ ನಿರ್ಮಾಣಗೊಂಡಿತು. ಆದರೆ 1993 ರಲ್ಲಿ ಈ ಕೆರೆ ಕೋಡಿ ಬಿದ್ದಿದ್ದನ್ನು ಬಿಟ್ಟರೆ ಇತ್ತೀಚಿನ ದಿನಗಳಲ್ಲಿ ಕೆರೆ ತುಂಬಿರುವುದು ಕಂಡು ಬಂದಿಲ್ಲ.[3]

ಗುಂಡ್ಲುಪೇಟೆ ಶಿವಪುರ, ಬೊಮ್ಮಲಾಪುರದ ಕಡೆಗೆ ಹೋಗುವ ಮಾರ್ಗ ಮಧ್ಯದಲ್ಲಿ ಮತ್ತೊಂದು ಕೆರೆಯನ್ನು ನಿರ್ಮಿಸಲಾಗಿದೆ. ಇದನ್ನು ಕಲ್ಲುಕಟ್ಟೆ ಹಳ್ಳಿ ಎಂದು ಕರೆಯಲಾಗಿದೆ. ಇದರ ಶಂಕುಸ್ಥಾಪನೆಯನ್ನು 25-06-1961 ನೇ ಭಾನುವಾರದಂದು ಕರ್ನಾಟಕ ಸರ್ಕಾರದ ಲೋಕೋಪಯೋಗಿ ಮಂತ್ರಿಗಳಾಗಿದ್ದ ಹೆಚ್.ಕೆ. ವೀರಣ್ಣಗೌಡರು ನೆರವೇರಿಸಿದರು. ಈ ಜಲಾಶಯ ಅಪಾರ ಜಲರಾಶಿಯ ಸಂಗ್ರಹಣೆಗೆ ಯೋಗ್ಯವಾಗಿದೆ. ಆದರೆ ಮಳೆಯ ಕಡಿಮೆ ಪ್ರಮಾಣದಿಂದ ಇಲ್ಲಿ ನೀರು ಸಂಗ್ರಹವಾಗುತ್ತಿಲ್ಲ. ನಲ್ಲೂರು ಅಮ್ಮನ ಕೆರೆಯನ್ನು ಬಿಟ್ಟರೆ ಇದು ದೊಡ್ಡಕೆರೆಗಳ ಪೈಕಿ 2ನೆಯದಾಗಿದೆ.[4] ಅಮ್ಮನವರ ಹೋರಾಟದ ಫಲವಾಗಿ ಕೃಷಿಗೆ ಬೇಕಾದ ಇಂತಹ ಕೆರೆಗಳು ಅಸ್ತಿತ್ವಕ್ಕೆ ಬಂದಿವೆ.

ಗುಂಡ್ಲುಪೇಟೆ ಪಶ್ಚಿಮ ದಿಕ್ಕಿಗಿರುವ ಮಂಟೀಪುರ ಎಂಬಲ್ಲಿ ಮತ್ತೊಂದು ಕೆರೆಯನ್ನು ನಿರ್ಮಿಸಲಾಗಿದೆ ಇದು ಅನೇಕ ರೈತರ ಬದುಕಿಗೆ ಆಶರೆಯಾಗಿದೆ. ಹೀಗೆ ಕನ್ನೇಗಾಲ ಮತ್ತು ಗೋಪಾಲಪುರ ಗ್ರಾಮಗಳ ಹತ್ತಿರ ವಡ್ಡಗಟ್ಟೆ ಎಂಬ ಮತ್ತೊಂದು ಕಿರು ಜಲಾಶಯವನ್ನು ನಿರ್ಮಿಸಲಾಗಿದೆ. ಈ ಮೇಲೆ ತಿಳಿಸಿರುವ ಎಲ್ಲಾ ಜಲಾಶಯಗಳು ಆಯಾ ಪ್ರಾಂತ್ಯದ ರೈತರ ಬದುಕಿಗೆ ಜೀವನಧಾರೆಯಾಗಿದೆ. ಸಾಕಷ್ಟು ಮಳೆ ಬಿದ್ದರೆ ಕೆರೆಯಲ್ಲಿ ನೀರು ಸಂಗ್ರಹವಾಗಿ ಗುಂಡ್ಲುಪೇಟೆ ತಾಲ್ಲೂಕಿನ ರೈತರು ಈ ಜಲಾಶಯದಿಂದ ದೊರಕಬಹುದಾದ ನೀರನ್ನು ಪಡೆದುಕೊಂಡು ಬಂಗಾರದಂತಹ ಬೆಳೆಗಳನ್ನು ಬೆಳೆಯಬಹುದು. ಆದರೆ ಮಾನವ ತಾನೊಂದು ಬಗೆದರೆ ದೈವ ಮತ್ತೊಂದು ಬಗೆಯುತ್ತದೆ. ಎಂಬ ಮಾತೊಂದಿದೆ ಅದರಂತೆ ಅಮ್ಮನವರು ಮನಸ್ಸಿನಲ್ಲಿದ್ದ ತಮ್ಮ ಚಿಂತನೆಯಂತೆ ಅನೇಕ ನೀರಾವರಿ ಯೋಜನೆಗಳನ್ನು ಜನತೆಗಾಗಿ ಒದಗಿಸಿಕೊಟ್ಟಿದ್ದರು. ಆದರೆ ಇಂದು ಈ ಜಲಾಶಯಗಳು ಮಳೆ ಇಲ್ಲದೆ ಒಣಗಿ ನಿಂತಿವೆ. ಇದು ವಿಧಿಯ ಲೀಲೆಯಲ್ಲದೆ ಮತ್ತೇನು ಅಲ್ಲ.

ಈ ಮೇಲೆ ತಿಳಿಸಿದ ಕೆರೆಗಳ ಜೊತೆಗೆ ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಹೋಬಳಿಯ ಕಮರಹಳ್ಳಿ ಎಂಬಲ್ಲಿ ಮತ್ತೊಂದು ಕೆರೆಯನ್ನು ಅಮ್ಮನರು ಹೋರಾಡಿ ನಿರ್ಮಿಸಿದರು. ಈ ಕೆರೆಗೂ ಮೇಲಿನ ಕೆರೆಗಳ ಸ್ಥಿತಿಯೇ ಒದಗಿರುವುದು ದುರಾದೃಷ್ಟಕರ ಸಂಗತಿಯಾಗಿದೆ. ಅಮ್ಮನರು ಗುಂಡ್ಲುಪೇಟೆ ಕ್ಷೇತ್ರದಲ್ಲಿ ನೀರಾವರಿ ಯೋಜನೆಗಳಿಗಾಗಿ ಹೋರಾಟ ನಡೆಸಿ ಅವುಗಳ ಅಸ್ತಿತ್ವಕ್ಕೆ ಬರುವಂತೆ ಮಾಡಿದ್ದರು. ಆದರೆ ಇಂದು ಈ ಕೆರೆಗಳಿಂದ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತಿಲ್ಲ. ಕೃಷಿಯ ಮೂಲಕ ತಮ್ಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕೆಂಬ ಮನಸ್ಸು ಅಮ್ಮನವರಲ್ಲಿ ಇತ್ತು ಅದಕ್ಕಾಗಿ ಅವರು ಅವಿರತ ಶ್ರಮ ಪಟ್ಟಿದ್ದರು ಅವರ ದೂರದೃಷ್ಟಿ ಏನೋ ಉತ್ತಮವಾಗಿತ್ತು ಆದರೆ ಇಂದು ಜನತೆಗೆ ದೊರಕುತ್ತಿರುವ ಪ್ರತಿಫಲ ಅಷ್ಟಕಷ್ಟೇ.

ಅಂದರೆ, ವ್ಯವಸಾಯ, ಕೈಗಾರಿಕೆ ಮತ್ತು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಚರ್ಚೆಯಾಗುವ ಸಂದರ್ಭದಲ್ಲಿ ನಾನಾದರೂ ಕೆಲವು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ ವ್ಯವಸಾಯದ ವಿಚಾರವಾಗಿ ಈಗ ಆಗುತ್ತಾ ಇರತಕ್ಕ ಕೆಲವು ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೈತರಿಗೆ ಈಗ ಏನೇನು ಸಿಗುತ್ತಿದೆ, ಏನೇನು ಸಿಗುತ್ತಾ ಇಲ್ಲ, ಉಳುವ ಹಾಗೂ ಬೆಳೆಯುವ ರೈತನಾದವನಿಗೆ ಆಹಾರ ಎಷ್ಟರ ಮಟ್ಟಿಗೆ ಆಗುತ್ತಿದೆ, ಆಗುತ್ತಾ ಇಲ್ಲವೆನ್ನುವುದನ್ನು ಬಹಳ ಚೆನ್ನಾಗಿ ವಿಷದಪಡಿಸಿದ್ದಾರೆ. ದಯಮಾಡಿ ಅದನ್ನು ಜಾಗ್ರತೆಯಾಗಿ ಸರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗಿನ ಕಾಲ ಹೈಬ್ರಿಡ್ ಜೋಳವನ್ನು ಜಾಸ್ತಿಯಾಗಿ ಉತ್ಪತ್ತಿ ಮಾಡುವ ಕಾಲ. ಇಂತಹ ಕಾಲದಲ್ಲಿ ಬಿತ್ತನೆ ಜೀಜಗಳು ಏನಿವೆಯೋ ಅವನ್ನು ಸೊಸೈಟಿಗಳ ಮುಖಾಂತರ ಮಾರಬೇಕೆಂದು ನಿಗದಿಯಾಗಿದೆ. ಈಗ ಅದನ್ನು ಕೊಯಮತ್ತೂರಿನಲ್ಲಿ ಕೇವಲ 8 ರೂಪಾಯಿಗಳಿಗೆ ಮಾರುತ್ತಿದ್ದರೆ ಗುಂಡ್ಲುಪೇಟೆಯಲ್ಲಿ 12-13 ರೂಪಾಯಿಗಳಿಗೆ ಮಾರುತ್ತಿದ್ದಾರೆ. ಅದ್ದರಿಂದಲೇ ಅದರ ಉಪಯೋಗ ಅರ್ಧಕ್ಕೆ ಇಳಿಯಿತು. ಅಗ್ರಿಕಲ್‌ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಮತ್ತು ಕೆಲವು ಸೊಸೈಟಿಗಳ ಅಧಿಕಾರಿಗಳು ಅದನ್ನು ಲಾಭಕ್ಕೆ ಮಾರುವುದಲ್ಲದೆ ರೈತರಿಗೆ ತುಂಬಾ ಅನ್ಯಾಯ ಮಾಡುತ್ತಿದ್ದಾರೆ.

ಅಂತಹವರನ್ನು ಹಾಕಿದರೆ ಏನೂ ಉಪಯೋಗವಿಲ್ಲ. ಇಂಥಾದ್ದನ್ನು ಪೂರ್ತಿಯಾಗಿ ತಪ್ಪಿಸಿ ಬಿತ್ತನೆ ಬೀಜಗಳು ರೈತರಿಗೆ ಸರಿಯಾದ ರೀತಿಯಲ್ಲಿ ದೊರಕುವಂತೆ ಮಾಡಬೇಕು. ಒಂದು ವೇಳೆ ಹೈಬ್ರಿಡ್ ಜೋಳ ಸಾಕಷ್ಟು ದೊರಕಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ ಅದಕ್ಕೆ ಬದಲಾಗಿ ಸಾಕಾಗುವಷ್ಟು ರಾಸಾಯನಿಕ ಗೊಬ್ಬರವನ್ನಾದರೂ ಸರಬರಾಜು ಮಾಡಬೇಕು.

ಇನ್ನು ಫರ್ಟಿಲೈಜರ್ಸ್ ಇಟ್ಟುಕೊಂಡಿರುವವರು ಈಗ ಅದರ ಬೆಲೆಯನ್ನು ಶೇಕಡ 57ರಷ್ಟು ಜಾಸ್ತಿ ಮಾಡಿದ್ದಾರೆ. ಇದಕ್ಕಾಗಿ ಸರ್ಕಾರದವರು ಸಬ್ಸಿಡೈಜ್ ಮಾಡದೇ ಇದ್ದರೆ ಆಗುವುದಿಲ್ಲ. ಈಗ ರೂಪಾಯಿಯ ಡಿ-ವ್ಯಾಲ್ಯುಯೇಷನ್ ಆಗಿರುವುದರಿಂದ ಇನ್ಸ್‌ಕ್ಟಿಸೈಡ್ಸ್ ಮತ್ತು ಪೆಸ್ಟಿಸೈಡ್ಸ್ ಬೆಲೆ ಜಾಸ್ತಿಯಾಗಿ ಅವು ಹೆಚ್ಚಿಗೆ ಸಿಗುತ್ತಾ ಇಲ್ಲ. ಅದಕ್ಕಾಗಿ ಸುಳಿಗೆ ಹುಳು ಬಿದ್ದಾಗ ಆ ಔಷಧಿಗಳನ್ನು ಉಪಯೋಗಿಸುವುದಕ್ಕಾಗಿ ಅವು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಸಿಗುವ ಹಾಗೆ ಮತ್ತು ಸೊಸೈಟಿಯವರ ಮುಖಾಂತರ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ವ್ಯಕ್ತಿತ್ವದ ಬಗ್ಗೆ ಬೆಳಕು ಚೆಲ್ಲುವ ಗ್ರಂಥಗಳು ತೀರ ಕಡಿಮೆ. ಅವರು ಗುಂಡ್ಲುಪೇಟೆ ತಾಲ್ಲೂಕಿನ ಜನತೆಯ ಕಣ್ಮಣಿಯಾಗಿ ಉಳಿದಿದ್ದರು. ಕಬ್ಬಹಳ್ಳಿ ಮನೆತನ ಎಷ್ಟು ಗೌರವ ಮತ್ತು ಪ್ರತಿಷ್ಠೆಯನ್ನು ಪಡೆದಿತ್ತು ಅದಕ್ಕಿಂತಲೂ ಹೆಚ್ಚಿನ ಗೌರವ ಮತ್ತು ಪ್ರತಿಷ್ಠೆಯನ್ನು ಅಮ್ಮನವರು ಪಡೆದುಕೊಂಡಿದ್ದರು ಅವರು ವಿಧಾನ ಸಭಾ ಮತ್ತು ವಿಧಾನ ಪರಿಷತ್‌ನಲ್ಲಿ ಮಾಡಿರುವ ಭಾಷಗಳು ಅವರು ಗುಂಡ್ಲುಪೇಟೆ ಕ್ಷೇತ್ರದ ಬಗ್ಗೆ ಹೊಂದಿದ್ದ ಕಾಳಜಿಯನ್ನು ಎತ್ತಿ ತೋರಿಸುತ್ತದೆ. ಅವರು ತಮ್ಮ ಧೀರ್ಘಕಾಲದ ರಾಜಕೀಯ ಜೀವನದಲ್ಲಿ ಅನೇಕ ಪ್ರತಿಭಾವಂತ ವ್ಯಕ್ತಿಗಳನ್ನು ಬೆಳೆಸಿದ್ದರೂ ತಮ್ಮ ವೈಯಕ್ತಿಕ ಬದುಕಿನಲ್ಲಿ ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಯಿತು. ತಮ್ಮ ಹಿರಿಯರು ಕಟ್ಟಿ ಬೆಳೆಸಿದ ಸಂಸ್ಥೆಗಳನ್ನು ಅವರು ಸರಿಯಾಗಿ ಬೆಳಸದಿರಬಹುದು ಇದಕ್ಕೆ ಪ್ರಮುಖ ಕಾರಣ ಕಾನೂನಿನ ತೊಡಕುಗಳು ಕಾರಣವಾಗಿರಬಹುದು ಆದುದರಿಂದ ಅವರು ಕೆಲವು ಕ್ಷೇತ್ರಗಳಲ್ಲಿ ಸಫಲತೆ ಸಾಧಿಸಿರಬಹುದು ಅವರು ಸ್ವಜನರು ಅಮ್ಮನವರನ್ನು ಸರಿಯಾಗಿ ಅರ್ಥ ಮಾಡಿಕೊಂಡಿರಲಿಲ್ಲ. ಇದು ಅವರ ಬೆಳವಣಿಗೆಗೆ ಅಡ್ಡಿಯಾಗಿದ್ದಿತು ಆದರೆ ಎಲ್ಲಾ ಪರಿಮಿತಿಗಳನ್ನು ಮೀರಿ ಅವರೊಬ್ಬ ದೊಡ್ಡ ಸಂಸದೀಯ ಪಟುವಾಗಿ ಎಲ್ಲಾ ಕ್ಷೇತ್ರದಲ್ಲೂ ಮಿಂಚಿ ಮರೆಯಾಗಿದ್ದಾರೆ. ಶ್ರೀಮತಿ ನಾಗರತ್ನಮ್ಮನವರು ಕೇವಲ ತಮ್ಮ ಕ್ಷೇತ್ರದ ಕುಂದು ಕೊರತೆಗಳ ಬಗ್ಗೆ ವಿಚಾರಗಳನ್ನು ಪ್ರಸ್ತಾಪಿಸುತ್ತಿರಲಿಲ್ಲ. ಕರ್ನಾಟಕದ ಹಾಗೂ ದೇಶ ವಿದೇಶಗಳ ವಿಚಾರಗಳಿಗೂ ಅವರು ಗಮನ ಹರಿಸುತ್ತಿದ್ದರು. ಅವರು ಕುಶಲ ರಾಜ ನೀತೀಜ್ಞೆ, ಸಮಾಜಾಭಿಮಾನಿ, ಕರ್ತವ್ಯ ನಿಷ್ಟೆ, ವಿದ್ಯಾವಿನಯ ಸಂಪನ್ನ, ಕಾಯಕವೇ ಕೈಲಾಸವೆಂದು ಕಾಯಕನಿಷ್ಠೆಯಲ್ಲಿ ಸದಾ ನಿರತರಾಗಿದ್ದವರು. ಆದ್ದರಿಂದಲೇ ಅವರು ಕರ್ನಾಟಕ ರಾಜಕೀಯ ಮಹಿಳಾ ಮಣಿಗಳಲ್ಲಿ ಅಗ್ರಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಈಗ ಇವರ ಜ್ಞಾಪಕಾರ್ಥವಾಗಿ ಗುಂಡ್ಲುಪೇಟೆಯಲ್ಲಿ ಒಂದು ಬಡಾವಣೆಯನ್ನು ಸ್ಥಾಪಿಸಿ, ಶ್ರೀಮತಿ ಕೆ.ಎಸ್. ನಾಗರತ್ನಮ್ಮ ಬಡವಾಣೆ ಎಂದು ಹೆಸರಿಡಲಾಗಿದೆ.

4.3 ಶೈಕ್ಷಣಿಕ ಕ್ಷೇತ್ರ

ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಅನುಭವ, ಹಿರಿಮೆ ದೊಡ್ಡದು ಮತ್ತು ವಿಶಾಲವಾದುದು. ಅವರು ಕೇಂದ್ರ ರೇಷ್ಮೆ ಮಂಡಳಿಯ ಸದಸ್ಯರಾಗಿ, ಭಾರತ ಮಹಿಳಾ ಪರಿಷತ್‌ನ ಮೈಸೂರು ವಿಭಾಗದ ಅಧ್ಯಕ್ಷೆಯಾಗಿ, ಭಾರತದ ಸ್ಕೌಟ್ ಮತ್ತು ಗೈಡ್ಸ್ ವಿಭಾಗದ ಉಪಾಧ್ಯಕ್ಷೆಯಾಗಿ ದುಡಿದಿರುವುದರ ಜೊತೆಗೆ ಅಮ್ಮನವರು ಶಿಕ್ಷಣ, ಕಲೆ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ. ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ದುಡಿದಿದ್ದಾರೆ. ಮೈಸೂರಿನ ಲಲಿತ ಕಲಾ ಕಾಲೇಜಿನ ಕಟ್ಟಡ ರೂವಾರಿಯಾಗಿ ಕೆಲಸ ನಿರ್ವಹಿಸಿದ್ದಾರೆ ಇಂಥಹ ಮೇದಾವಿಯಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಅನೇಕ ವಿದ್ಯಾಸಂಸ್ಥೆಗಳ ಸ್ಥಾಪನೆಗೆ ಕಾರಣರಾಗಿದ್ದಾರೆ. ಮೈಸೂರಿನಲ್ಲಿ ಆಗಿನ ಕಾಲದಲ್ಲೇ ಸ್ತ್ರೀಯರ ಅಭಿವೃದ್ಧಿಗಾಗಿ ಮಾತೃ ಮಂಡಳಿ ಸ್ಥಾಪಿಸಿ ಆ ಮೂಲಕ ಮಹಿಳೆಯರು ಜಾಗೃತರಾಗುವಂತೆ ಮಾಡಿದ್ದಾರೆ. ಜೊತೆಗೆ ಮಾತೃ ಮಂಡಳಿ ಅಧ್ಯಕ್ಷರಾಗಿ ದುಡಿದ್ದಾರೆ. ಗುಂಡ್ಲುಪೇಟೆಯಲ್ಲಿ ಗ್ರಾಮೀಣ ಹಾಗೂ ಪಟ್ಟಣದ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಒಂದು ಬಾಲಕಿಯರ ಪ್ರೌಢಶಾಲೆ ತೆರೆಯಬೇಕೆಂಬ ಉದ್ದೇಶವನ್ನು ಪಟ್ಟಣದ ಪ್ರಮುಖ ವ್ಯಕ್ತಿಗಳಾದ ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಎಸ್.ಆರ್. ಶಿವಲಿಂಗಯ್ಯನವರು ಶ್ರೀ ಅನಂತರಾಮಯ್ಯನವರು ಇನ್ನು ಅನೇಕ ಗಣ್ಯರು ವ್ಯಕ್ತಪಡಿಸಿದ್ದರು.[5] ಈ ಅಭಿಪ್ರಾಯಕ್ಕೆ ಓಗೊಟ್ಟ ಕೆ.ಎಸ್. ನಾಗರತ್ನಮ್ಮನವರು ಗುಂಡ್ಲುಪೇಟೆ ಪಟ್ಟಣದಲ್ಲಿ ಒಂದು ಬಾಲಿಕಾ ಪ್ರೌಢಶಾಲೆಯನ್ನೆ ಸ್ಥಾಪಿಸಲು ತಮ್ಮ ಸಹ ಮತ ವ್ಯಕ್ತ ಪಡಿಸಿದರು ಈ ಪ್ರೌಢಶಾಲೆಗೆ ಶ್ರೀಮತಿ ಕೆ.ಎಸ್. ನಾಗರತ್ನಮ್ಮ ಪ್ರೌಢ ಶಾಲೆ ಎಂದು ನಾಮಕರಣ ಮಾಡಲಾಗಿದ್ದು, ಈ ಪ್ರೌಢಶಾಲೆ ಗುಂಡ್ಲುಪೇಟೆ ಪಟ್ಟಣದಲ್ಲಿ ಒಂದು ಪ್ರತಿಷ್ಠಿತ ವಿದ್ಯಾಸಂಸ್ಥೆಯಾಗಿದೆ. ಈ ಶಾಲೆಗೆ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಮಹಾ ಪೋಷಕರಾಗಿದ್ದಾರೆ. ಗುಂಡ್ಲುಪೇಟೆಯಲ್ಲಿ ಶ್ರೀ ಜವಹರ್ ಶಿಕ್ಷಣ ಸಂಸ್ಥೆಯೊಂದಿಗೆ ಈ ಸಂಸ್ಥೆಯ ಅಡಿಯಲ್ಲಿ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಪದವಿಪೂರ್ವ ಕಾಲೇಜೊಂದು ಕೆಲಸ ನಿರ್ವಹಿಸುತ್ತಿದ್ದು, ಅಮ್ಮನವರ ಹೆಸರು ಸದಾ ಚಿರಸ್ಥಾಯಿಯಾಗಿ ಇರುವಂತೆ ಮಾಡಿದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಮೈಸೂರಿನಲ್ಲಿರುವ ಮರಿಮಲ್ಲಪ್ಪ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯೆಯಾಗಿ ದುಡಿದಿದ್ದಾರೆ. ತೆರಕಣಾಂಬಿಯಲ್ಲಿ ಅಮ್ಮನವರು ಒಂದು ಸರ್ಕಾರಿ ಪ್ರೌಢ ಶಾಲೆ ಆರಂಭಿಸಲು ಕಾರಣಕರ್ತರಾಗಿದ್ದಾರೆ. ಈ ಸರ್ಕಾರಿ ಪ್ರೌಢ ಶಾಲೆಯು ಇಂದು ಮೇಲ್ದರ್ಜೆಗೆ ಏರಿಸಲ್ಪಟ್ಟ ಪವಿಪೂರ್ವಕಾಲೇಜಾಗಿ ಕೆಲಸ ನಿರ್ವಹಿಸುತ್ತಿದೆ. ತಮ್ಮ ಸ್ವಂತ ಊರಾದ ಕಬ್ಬಹಳ್ಳಿಯಲ್ಲಿ ಶ್ರೀಮತಿ ಕೆಂಪದೇವಮ್ಮ ಪ್ರೌಢ ಶಾಲೆಯನ್ನು ಮೇಲ್ದರ್ಜೆಗೆ ಏರಿಸಿ ಅದನ್ನು ಪದವಿಪೂರ್ವ ಕಾಲೇಜನ್ನಾಗಿ ಪರಿವರ್ತಿಸಿರುವುದು ಅವರ ಶ್ರಮದ ಫಲವೆಂದೆ ಹೇಳಬಹುದು, ಹೀಗೆ ಅಮ್ಮನವರು ಶಾಲಾ ಕಾಲೇಜುಗಳ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಮೈಸೂರಿನಲ್ಲಿ ತಮ್ಮ ಮಾವ ದಿವಂಗತ ಚನ್ನಬಸಪ್ಪನವರು ಸ್ಥಾಪಿಸಿದ್ದ ವೀರಶೈವ ವಿದ್ಯಾರ್ಥಿನಿಲಯದ ಟ್ರಸ್ಟಿಯಾಗಿ ಅದನ್ನು ಅಭಿವೃದ್ಧಿ ಪಡಿಸಿದ್ದಾರೆ. ಹೀಗೆ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ರಾಜ್ಯ ವಿಧಾನ ಸಭೆಯ ಸದಸ್ಯರಾಗಿ ಆ ಸಭೆಯ ವಿವಿಧ ಸಮಿತಿಗಳ ಸದಸ್ಯರಾಗಿ

ಕೆಲಸ ನಿರ್ವಹಿಸುವುದರ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲೂ ಅಪಾರ ಸೇವೆ ಸಲ್ಲಿಸಿ ಅದರ ಬೆಳವಣಿಗೆಗೆ ಕಾರಣರಾಗಿದ್ದಾರೆ.

3 ದಶಕಗಳ ಕಾಲ ನಾಡಿನ ಜನಪ್ರಿಯ ರಾಜಕಾರಣಿಯಾಗಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು 17-10-1993 ರಲ್ಲಿ ಇಹಲೋಕ ತ್ಯಜಿಸಿದರು.

ಅಮ್ಮನವರ ಮರಣ ನಂತರ ಪತಿ ಕೆ.ಸಿ. ಸುಬ್ಬಣ್ಣನವರು ಬರೆಯಿಸಿಟ್ಟಿದ್ದ ವಿಲ್ (ಮರಣ ಶಾಸನದ ಪ್ರಕಾರ) ಶ್ರೀ ಕೆ.ಸಿ. ಸುಬ್ಬಣ್ಣನವರ ತಂಗಿ ಮಕ್ಕಳಾದ ಚನ್ನಬಸಪ್ಪ ಸದಾಶಿವಮೂರ್ತಿ, ಶಿವಸ್ವಾಮಿ, ನಂಜಪ್ಪ, ಪಿ.ಎಸ್. ನಾಗರಾಜು ಇವರು ಮರಣ ಶಾಸನದ ಪ್ರಕಾರ ಆಸ್ತಿಯ ಉತ್ತರಾಧಿಕಾರಿಗಳಾಗಿದ್ದು, ಪಿ.ಎಸ್. ನಾಗರಾಜುರವರನ್ನು ಹೊರತು ಪಡಿಸಿ ಉಳಿದವರೆಲ್ಲರೂ ಬೇರೆ ಬೇರೆ ನೆಲೆಸಿದ್ದಾರೆ. ಪಿ.ಎಸ್. ನಾಗರಾಜು ರವರು ಅಮ್ಮನವರ ಸ್ವ ಗ್ರಾಮವಾದ ಕಬ್ಬಹಳ್ಳಿ ಗ್ರಾಮದಲ್ಲಿ ಅಮ್ಮನವರ ಮನೆಯಲ್ಲಿಯೇ ನೆಲೆಸಿದ್ದು, ಆ ಮನೆಯ ಜ್ಯೋತಿಯನ್ನು ಬೆಳಗುತ್ತಿದ್ದಾರೆ. ಕಬ್ಬಹಳ್ಳಿ ಮನೆತನದ ಧಾನಿಗಳು ಮೈಸೂರಿನಲ್ಲಿ ಪ್ರಾರಂಭಿಸಿದ್ದ ವಿದ್ಯಾರ್ಥಿನಿಲಯದ ಟ್ರಸ್ಟಿಗಳಾಗಿ ಈ ವಾರಸುದಾರರು ಕೆಲಸ ನಿರ್ವಹಿಸುತ್ತಾರೆ. ಈ ವಿದ್ಯಾರ್ಥಿನಿಲಯದ ಜೀರ್ಣೋದ್ಧಾರಕ್ಕಾಗಿ ಒಟ್ಟು ಆಸ್ತಿಯಲ್ಲಿ ಶೇ. ಅರ್ಧ ಭಾಗವನ್ನು ಮೀಸಲಾಗಿ ಇಡಲಾಗಿದೆ. ಆದರೆ ಈ ವಿದ್ಯಾರ್ಥಿನಿಲಯವನ್ನು ನಡೆಸಲು ಯಾವ ಆದಾಯವೂ ಬರುತ್ತಿಲ್ಲ. ಇತ್ತೀಚಿನವರೆಗೂ ಮೈಸೂರು ವಿಶ್ವ ವಿದ್ಯಾನಲಿಯದ ರಾಜ್ಯ ಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರಾಗಿದ್ದ ಶ್ರೀ ಕೆ.ಬಿ.ವೈ. ತೋಟಪ್ಪ ಎಂಬುವರು ವಿದ್ಯಾರ್ಥಿನಿಲಯದ ಟ್ರಸ್ಟ್‌ನ ಅಧ್ಯಕ್ಷರಾಗಿದ್ದರು. ಅವರ ಕಾಲದಲ್ಲಿ ಅಭಿವೃದ್ಧಿ ಕೈಗೊಳ್ಳಲು ಅವಕಾಶವಿದ್ದರೂ ಕೆಲವು ತೊಡಕುಗಳಿಂದಾಗಿ ಅವರು ವಿದ್ಯಾರ್ಥಿನಿಲಯವನ್ನು ಅಭಿವೃದ್ಧಿಗೊಳಿಸಲಾಗಲಿಲ್ಲ. ಅವರ ನಿಧನದಿಂದಾಗಿ ಅನೇಕ ಗೊಂದಲಗಳು ಸೃಷ್ಟಿಯಾಗಿ ವಿದ್ಯಾರ್ಥಿನಿಲಯದ ಪ್ರಗತಿ ಸ್ಥಗಿತಗೊಂಡಿದೆ ಈಗ ನಿಲಯದ ಟ್ರಸ್ಟ್‌ನ ಟ್ರಸ್ಟಿಗಳು ನಿಲಯದ ಅಭಿವೃದ್ಧಿಗಾಗಿ ಕಾರ್ಯೋನ್ಮುಖವಾಗಬೇಕಾಗಿದೆ.

ಅಡಿ ಟಿಪ್ಪಣಿಗಳು

1 ಮಾಹಿತಿ ಸಂಗ್ರಹಣೆ : ಶ್ರೀಯುತ ಎಂ. ಬಸಪ್ಪನವರು, ಪ್ರಾಚಾರ್ಯರು,
ಶ್ರೀಮತಿ ಕೆ.ಎಸ್. ನಾಗರತ್ನಮ್ಮ
ಪದವಿ ಪೂರ್ವ ಕಾಲೇಜು,
ಗುಂಡ್ಲುಪೇಟೆ.

2 ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ
ಡಾ. ಪಳನಿಸ್ವಾಮಿ ಪುಟ ಸಂಖ್ಯೆ ೩೧೯

3	ಮಾಹಿತಿ ಸಂಗ್ರಹಣೆ	:	ಶ್ರೀಯುತ ಪುಟ್ಟಸ್ವಾಮಿಯವರು,ನಿವೃತ್ತ ಉಪಾಧ್ಯಯರು ಇಂಗಲವಾಡಿ, ಗುಂಡ್ಲುಪೇಟೆ ತಾ.
4	ಮಾಹಿತಿ ಸಂಗ್ರಹಣೆ	:	ಶ್ರೀಯುತ ದೊಡ್ಡಯ್ಯನವರು ಮಾಜಿ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್, ಗುಂಡ್ಲುಪೇಟೆ
5	ಮಾಹಿತಿ ಸಂಗ್ರಹಣೆ	:	ಶ್ರೀಯುತ ನಾಗಮಲ್ಲಪ್ಪನವರು ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಹಿತೈಷಿಗಳು ಬರಗಿ, ಗುಂಡ್ಲುಪೇಟೆ ತಾ.

ಅಧ್ಯಾಯ - ೫

ಉಪಸಂಹಾರ

ಅಧ್ಯಾಯ -5

ಉಪಸಂಹಾರ

ಕರ್ನಾಟಕದ ರಾಜ್ಯದ ಸಂಸದೀಯ ಪಟುಗಳ ಇತಿಹಾಸದಲ್ಲಿ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಅತ್ಯುನ್ನತ ಸ್ಥಾನಗಳಿಸಿದ್ದಾರೆ ಎಂಬುವುದರಲ್ಲಿ ಯಾವ ಸಂಶಯವೂ ಇಲ್ಲ. ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರ ಮರಣದಿಂದ ಕರ್ನಾಟಕ ರಾಜ್ಯದ ಸಂಸದೀಯ ವ್ಯವಹಾರಗಳಿಗೆ ಅಪಾರವಾದ ಹಾನಿಯಾಗಿದೆ. ಕಬ್ಬಹಳ್ಳಿ ದಾನಿಗಳ ಮನೆತನದ ಶ್ರೇಷ್ಠ ಮಹಿಳೆಯಾಗಿ ವಿಜೃಂಬಿಸಿರುವುದುರ ಜೊತೆಗೆ ಅವರು ಕರ್ನಾಟಕ ರಾಜ್ಯದ ರಾಜಕೀಯ ಜೀವನದಲ್ಲಿ ವಿಜೃಂಬಿಸಿರುವುದು ಶ್ಲಾಂಘನೀಯ.

ಸಾಧಾರಣ ಮಹಿಳೆಯೊಬ್ಬಳು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿ ಬೆಂಗಳೂರಿನ ವಿಧಾನ ಸೌಧದ ಮೆಟ್ಟಿಲೇರಿ ಆ ಸೌಧದ ಉನ್ನತ ಸ್ಥಾನವನ್ನು ಗಳಿಸಬೇಕಾದರೆ. ಅವರ ವರ್ಚಸ್ಸು ಎಷ್ಟಿತ್ತು ಎಂಬುದನ್ನು ಸಾರ್ವಜನಿಕವಾಗಿ ಅವಲೋಕಿಸಬೇಕಾಗಿದೆ. ಕರ್ನಾಟಕದಲ್ಲಿ ರಾಜಕೀಯ ಜೀವನದ ಅದೆಷ್ಟೆ ಮಹಿಳೆಯರು ಅಸ್ತಂಗತರಾಗಿರಬಹುದು. ಅವರ ನೆನಪು ಬಹಳಷ್ಟು ಮಂದಿಗಳ ಮನದಲ್ಲಿ ಮಾಸಿಹೋಗಿದೆ . ಆದರೆ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಸಾಧಿಸಿದ ಸಾಧನೆಯಿಂದಾಗಿ ಅವರ ನೆನಪು ಎಲ್ಲರ ಮನದಲ್ಲೂ ಅಚ್ಚಳಿಯದೇ ಉಳಿದಿರುವುದು ಸಂತೋಷದ ಸಂಗತಿಯಾಗಿದೆ. ಅವರ ಕಾರ್ಯ ಕ್ಷೇತ್ರ ಗುಂಡ್ಲುಪೇಟೆಯ ತಾಲ್ಲೂಕಿಗೆ ಸೀಮಿತವಾಗಿರದೆ ಅದು ವಿದೇಶಗಳಲ್ಲೂ ಮನೆ ಮಾತಾಗಿರುವುದು ಸೂಜಿಗದ ಸಂಗತಿಯೇ ಸರಿ ಶ್ರೀ ಕೆ.ಎಸ್. ನಾಗರತ್ನಮ್ಮನವರು ಇಂದು ನಮ್ಮ ಮುಂದೆ ಇಲ್ಲದಿರಬಹುದು ಆದರೆ ಅವರು ಗತಿಸಿದ ನಂತರ ತಮ್ಮ ಹಿಂದೆ ಬಿಟ್ಟು ಹೋಗಿರುವ ಸಾಧನೆಯ ಗುರುತುಗಳು ಅಮ್ಮನವರನ್ನು ನೆನಪಿಗೆ ಕೊಳ್ಳುವಂತೆ ಮಾಡುತ್ತಿದೆ. ಅವರು ಕೈಗೊಂಡ ಅನೇಕ ಕಾರ್ಯಕ್ರಮಗಳು ನಾಡಿನ ಯುವ ಪೀಳಿಗೆಗೂ, ಮಹಿಳಾ ಮಣಿಗಳಿಗೂ ದಾರಿ ದೀಪವಾಗಿದೆ. ಅವರು ನಡೆದು ಬಂದ ದಾರಿಯಲ್ಲಿ ಇಂದಿನ ಜನಾಂಗ ನಡೆದರೆ ರಾಷ್ಟ್ರಕ್ಕೆ ಅಪಾರ ಗೌರವ ಸಲ್ಲಿಸಿದಂತೆ ಆಗುತ್ತದೆ. ಅವರು ರಾಜಕೀಯ ಜಂಜಾಟದ ಭ್ರಷ್ಟಚಾರ, ಲಂಚಗುಳಿತನ, ಸ್ವಜನ ಪಕ್ಷಪಾತ ಇಂಥಹ ಅಸ್ತ್ರಗಳಿಗೆ ಎಂದೂ ಬಲಿಯಾಗಲಿಲ್ಲ. ತಮ್ಮ ಸ್ವಚ್ಚ ಮಾತುಗಳ ಮೂಲಕ ಕಳಂಕ ರಹಿತವಾದ ರಾಜಕೀಯವನ್ನು ಮಾಡಿರುವುದರಲ್ಲಿ ಅಚ್ಚರಿ ಇಲ್ಲ. ಸ್ವಾರ್ಥಕ್ಕಾಗಿ ತಾವು ಏನನ್ನೂ ಮಾಡಿಕೊಳ್ಳಲಿಲ್ಲ. ತಾವು ಮಾಡಿದ ಎಲ್ಲವನ್ನು ಸಮಾಜಕ್ಕಾಗಿ ಅರ್ಪಿಸಿ ಅವರ ಪೂರ್ವದ ದಾನಿಗಳಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿರುವುದು ಅತೀವವಾದ ಸಂತೋಷವನ್ನು ಉಂಟು ಮಾಡಿದೆ. ಇಂಥಹ ಮಹಿಳಾ ಮಣಿಗಳು ದೊರೆಯುವುದು ಅಪರೂಪ. ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಮತ್ತಷ್ಟು ಕಾಲ ಬದುಕಿದರೆ ಅವರ ಕ್ಷೇತ್ರ ಹಾಗೂ ಕರ್ನಾಟಕ ಮತ್ತಷ್ಟು ಅಭಿವೃದ್ಧಿಯಾಗುತ್ತಿತ್ತೇನೋ ಅವರ ಮರಣವು ರಾಜ್ಯ ಮತ್ತು ರಾಷ್ಟ್ರಕ್ಕೆ ತುಂಬಲಾರದ ನಷ್ಟವಾಗಿದೆ. ಇಂಥಹ ಮಹಿಳಾ ಮಣಿಯೊಬ್ಬರು ಮತ್ತೊಮ್ಮೆ ಹುಟ್ಟಿ ಬರಲೆಂಬುದು ಎಲ್ಲರ ಆಶಯ. ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ತಮ್ಮ ಮನೆತನಕ್ಕೂ ರಾಜ್ಯಕ್ಕೂ, ರಾಷ್ಟ್ರಕ್ಕೂ ಅಪಾರ ಗೌರವ ತಂದಿರುವ ಒಬ್ಬ ಧೀರ ಮಹಿಳೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಗ್ರಂಥ ಋಣ

1. "ದಿವ್ಯ ಚೇತನಗಳು" ರಾಜೇಂದ್ರ ಶಿಶು" ಅಂಕನಾಥೇಶ್ವರ ಪ್ರಿಂಟರ್ಸ್, ಮೈಸೂರು. 1991

2. "ಸ್ಕಂದಗಿರಿ" ನೀ. ಗಿರಿಗೌಡ - ಜಿ.ಜಿ. ಮಂಜುನಾಥ್ 1997
ಪ್ರಕಾಶಕರು, ಸ್ವಾಗತ ಸಮಿತಿ - ಗುಂಡ್ಲುಪೇಟೆ

3. "ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆ" 1999
ಪ್ರೊ. ಎನ್.ಬಿ. ಪಾಂಗಣ್ಣಾಯ
ಪ್ರೊ. ಹೆಚ್.ಆರ್. ಅಚ್ಯುತರಾವ್
ಡಾ. ಡಿ.ಎಸ್. ಜಯಪ್ಪಗೌಡ

ಪ್ರಕಟಣೆ: ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನ ಸೌಧ, ಬೆಂಗಳೂರು.

4. "ಹೊನ್ನು ಹೊಳೆ" ಪ್ರೊ. ಮಲೆಯೂರು ಗುರುಸ್ವಾಮಿ 2007
ಶ್ರೀ ರಾಜೇಂದ್ರ ಪ್ರಿಂಟರ್ಸ್ ಮತ್ತು ಪಬ್ಲಿಕೇಷನ್ಸ್

5. "ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ"
ಡಾ. ಪಳನಿಸ್ವಾಮಿ
ರಾಜೇಂದ್ರ ಪ್ರಿಂಟರ್ಸ್, - ಮೈಸೂರು


6. "A Karnataka State Legislative Assembly debates"

7. ಮಾಹಿತಿ ಸಂಗ್ರಹಣೆ : ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ವಾರಸುದಾರರು -
ಶ್ರೀ ಶ್ರೀ ಪಿ.ಎಸ್. ನಾಗರಾಜುರವರುಮಾಜಿ ತಾಲ್ಲೂಕು, ಪಂಚಾಯಿತಿ ಸದಸ್ಯರು, ಕಬ್ಬಹಳ್ಳಿ

8. ಮಾಹಿತಿ ಸಂಗ್ರಹಣೆ - ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಸಮಕಾಲೀನರು
ಶ್ರೀ ಜೆ.ಸಿ. ಗುರುಮಲ್ಲಪ್ಪನವರು, ಮಾಜಿ ಛೇರ್‌ಮನ್‌ರು, ಕಬ್ಬಹಳ್ಳಿ.

9. ಮಾಹಿತಿ ಸಂಗ್ರಹಣೆ - ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಹಿತೈಷಿಗಳು,
ಶ್ರೀ ನಾಗಮಲ್ಲಪ್ಪನವರು, ಬರಗಿ, ಗುಂಡ್ಲುಪೇಟೆ ತಾಲ್ಲೂಕು.

ಛಾಯಾ ಚಿತ್ರಗಳು





ಶ್ರೀಮತಿ ಕೆ.ಎಸ್. ನಾಗರತ್ನಮ್ಮ ಮತ್ತು ಶ್ರೀ ಕೆ.ಸಿ. ಸುಬ್ಬಣ್ಣನವರು



ಶ್ರೀಮತಿ ಕೆ.ಎಸ್. ನಾಗರತ್ನಮ್ಮ ನವರ ಮನೆ, ಕಬ್ಬಹಳ್ಳಿ



ಸಾರ್ವಜನಿಕ ಆಸ್ಪತ್ರೆ, ಗುಂಡ್ಲುಪೇಟೆ



ನಲ್ಲೂರ ಅಮ್ಮಾನಿ ಕೆರೆ, ಇಂಗಲವಾಡಿ, ಗುಂಡ್ಲುಪೇಟೆ



ಕಲ್‌ಕಟ್ಟೆ ಹಳ್ಳ ಕೋಡಹಳ್ಳಿ, ಗುಂಡ್ಲುಪೇಟೆ ತಾ.



ಶ್ರೀಮತಿ ಕೆ.ಎಸ್. ನಾಗರತ್ನಮ್ಮ ನವರು ಗುಂಡ್ಲುಪೇಟೆಯಲ್ಲಿ
ಮಹಾ ಪೋಷಕರಾಗಿದ್ದ ಜವಹರ್ ಶಿಕ್ಷಣ ಸಂಸ್ಥೆ



ಶ್ರೀಮತಿ ಕೆ.ಎಸ್. ನಾಗರತ್ನಮ್ಮ ನವರ ಹೆಸರಿನಲ್ಲಿರುವ
ಗುಂಡ್ಲುಪೇಟೆಯಲ್ಲಿರುವ ಪದವಿ ಪೂರ್ವ ಕಾಲೇಜು





ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ವಾರಸುದಾರರು
ಶ್ರೀ ಪಿ.ಎಸ್. ನಾಗರಾಜುರವರು ಮತ್ತು ಅವರ ಪತ್ನಿ ಶ್ರೀಮತಿ ಪುಷ್ಪರವರು

ವಂಶ ವೃಕ್ಷ

ಸಿದ್ದಲಿಂಗಪ್ಪ

ಪತ್ನಿ ಸುಬ್ಬಮ್ಮ

ಸುಬ್ಬಪ್ಪ

ಪುಟ್ಟಪ್ಪ

ಚನ್ನಬಸಪ್ಪ
ಪತ್ನಿ ಮಲ್ಲವ್ವೆ

ಕೆ.ಸಿ. ಸುಬ್ಬಣ್ಣ ಪುತ್ರ
ಮೊದಲನೆ ಪತ್ನಿ ಸುಬ್ಬಮ್ಮ
(ಇವರ ಮರಣಾನಂತರ)
2ನೇ ಪತ್ನಿ ಕೆ.ಎಸ್. ನಾಗರತ್ನಮ್ಮ

ಕೆ.ಸಿ. ಸುಬ್ಬಮ್ಮ ಪುತ್ರಿ
(ವಿವಾಹ ನಂತರ ನಿರ್ಗಮನ)

ಮಾಹಿತಿ ಸಂಗ್ರಹಣೆ
ಶ್ರೀ ಪಿ.ಎಸ್ ನಾಗರಾಜು
ಕೆ.ಎಸ್. ನಾಗರತ್ನಮ್ಮನವರ ವಾರಸುದಾರರು,
ಕಬ್ಬಹಳ್ಳಿ